


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 6 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 20 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮುಡಾ ಮಾಜಿ ಆಯುಕ್ತ ಜಿ.ಟಿ.ದಿನೇಶ್‌ಕುಮಾರರ ಮತ್ತೊಂದು ಮಹಾ ಭ್ರಷ್ಟಾಚಾರ ಬಯಲು

ಬೆಂಗಳೂರಿನ ಖ್ಯಾತ ವೈದ್ಯರು ಖರೀದಿಸಿದ್ದ ನಿವೇಶನ ಬೇರೊಬ್ಬರಿಗೆ ಮರು ಮಂಜೂರು

- ಖಾತೆ, ಕಂದಾಯ ಪಾವತಿಸಿದ್ದರೂ ವೈದ್ಯರಿಗೆ ದಕ್ಕದ ನಿವೇಶನ
- ಅತಿಕ್ರಮಣ ಎಚ್ಚರಿಕೆಯಿಂದ ಕಾಂಪೌಂಡ್ ನಿರ್ಮಿಸಿದ್ದರೂ ತಪ್ಪದ ಮೋಸ
- ಒಬ್ಬರಿಗೆ ಮರು ಮಂಜೂರು; ಆತ ತಕ್ಷಣವೇ ಮತ್ತೊಬ್ಬರಿಗೆ ಮಾರಾಟ
- ಇಷ್ಟೆಲ್ಲಾ ಹಗರಣ ನಡೆಸಿದರೂ ದಿನೇಶ್‌ಕುಮಾರ್ ಇನ್ನೂ ಸೇಫ್

ಮೈಸೂರು,ಮೇ5(ಬಿಎಲ್‌ಯು)–ಮೈಸೂರಿನ ವಿಜಯ ನಗರ 3ನೇ ಹಂತದಲ್ಲಿ ಮುಡಾದಿಂದ ಹರಾಜು ಮೂಲಕ ಖರೀದಿ ಮಾಡಿದ್ದ ನಿವೇಶನವನ್ನು ಹಗರಣಗಳ ಸರಮಾಲೆ ಹೊತ್ತಿರುವ ಮುಡಾ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಅಕ್ರಮವಾಗಿ ಬೇರೊಬ್ಬರಿಗೆ ಮರು ಮಂಜೂರು ಮಾಡಿರುವ ಮತ್ತೊಂದು ಮಹಾ ಭ್ರಷ್ಟಾಚಾರ ಬಯಲಾಗಿದೆ.



ದಿನೇಶ್‌ಕುಮಾರ್

ಮುಡಾ ಹಗರಣಗಳ ಬಗ್ಗೆ ನ್ಯಾಯಮೂರ್ತಿ ದೇಸಾಯಿ ಆಯೋಗ ಒಂದು ಕಡೆ ತನಿಖೆ ನಡೆಸುತ್ತಿದ್ದರೆ, ಮತ್ತೊಂದು ಕಡೆ ಮುಡಾ ಆಯುಕ್ತರಾಗಿದ್ದ ದಿನೇಶ್ ಕುಮಾರ್ ಮಾಡಿರುವ ಒಂದೊಂದೇ ಹಗರಣ ಬಯಲಾಗುತ್ತಿದೆ. ಮೈಸೂರಿನ ವಿಜಯನಗರ 3ನೇ ಹಂತ ಎ ಬ್ಲಾಕ್‌ನಲ್ಲಿನ 21x19 ಮೀಟರ್ ಅಳತೆಯ ನಿವೇಶನ ಸಂಖ್ಯೆ 222 ಅನ್ನು ಡಾ.ಕೆ.ಎ.ರಾಮೇಗೌಡ ಅವರು ಜೂನ್ 2, 2010ರಲ್ಲಿ ಹರಾಜು ಮೂಲಕ ಮುಡಾದಿಂದ ಖರೀದಿ ಮಾಡಿದ್ದರು. ನಂತರ, ಬೆಂಗಳೂರಿನ ಖ್ಯಾತ ವೈದ್ಯ ಡಾ.ವಿ.ನಾರಾಯಣಸ್ವಾಮಿ ಅವರು ತಮ್ಮ ಸಂಬಂಧಿಯೇ ಆದ ಡಾ.ರಾಮೇಗೌಡರಿಂದ ಈ ನಿವೇಶನವನ್ನು ನವೆಂಬರ್ 11, 2016ರಲ್ಲಿ ಖರೀದಿ ಮಾಡಿದ್ದರು. ಡಾ.ನಾರಾಯಣಸ್ವಾಮಿ ಅವರು ಡಿಸೆಂಬರ್ 17, 2016ರಂದು ತಮ್ಮ ಹೆಸರಿಗೆ ■6ನೇ ಪುಟಕ್ಕೆ

ನ್ಯಾಯ ಸಿಗದಿದ್ದರೆ ಸಿದ್ದರಾಮಯ್ಯ, ಡಾ.ಯತೀಂದ್ರಗೆ ಹೇಳುವೆ....

ನಾನು ಸಿದ್ದರಾಮಯ್ಯ ಅವರಿಗೆ 2019ರಲ್ಲಿ ಶಸ್ತ್ರಚಿಕಿತ್ಸೆ ಮಾಡಿದ್ದೆ. ಇದರಿಂದ ನನಗೆ ಅವರು ತುಂಬಾ ಆಪ್ತರಾಗಿದ್ದಾರೆ. ಜೊತೆಗೆ ವೈದ್ಯರಾಗಿರುವ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಕೂಡ ನನ್ನ ಸಂಪರ್ಕದಲ್ಲಿದ್ದಾರೆ. ಆದರೆ ಮುಡಾದಿಂದ ನನಗೆ ಮೋಸವಾಗಿರುವ ವಿಚಾರವನ್ನು ನಾನು ಅವರ ಗಮನಕ್ಕೆ ತಂದಿಲ್ಲ. ಈಗ ನನಗಾಗಿರುವ ಮೋಸದ ಬಗ್ಗೆ ಲಿಖಿತವಾಗಿ ಮುಡಾದ ಉನ್ನತ ಅಧಿಕಾರಿಗಳಿಗೆ ದೂರು ನೀಡಿದ್ದೇನೆ. ಒಂದು ವೇಳೆ ಇವರಿಂದ ನನಗೆ ನ್ಯಾಯ ಸಿಗಲಿಲ್ಲ ಎಂದಾದರೆ ಸಿದ್ದರಾಮಯ್ಯ ಹಾಗೂ ಡಾ.ಯತೀಂದ್ರ ಅವರನ್ನು ಭೇಟಿ ಮಾಡಿ ನನಗೆ ಆಗಿರುವ ಮೋಸದ ಬಗ್ಗೆ ತಿಳಿಸುತ್ತೇನೆ. **–ಡಾ.ವಿ.ನಾರಾಯಣ ಸ್ವಾಮಿ, ವೈದ್ಯ**

ಸಿದ್ದರಾಮಯ್ಯರಿಗೆ ಶಸ್ತ್ರಚಿಕಿತ್ಸೆ ಮಾಡಿದ್ದ ವೈದ್ಯರಿಗೇ ದಿನೇಶ್‌ಕುಮಾರ್ ದೋಖಾ!

ಮುಡಾ ನಿವೇಶನ ಖರೀದಿಸಿ ಮೋಸ ಹೋಗಿರುವ ಡಾ.ನಾರಾಯಣಸ್ವಾಮಿ, ಖ್ಯಾತ ವೈದ್ಯರಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 2019ರಲ್ಲಿ ಶಸ್ತ್ರಚಿಕಿತ್ಸೆ ನಡೆಸಿದ್ದರು. ರಾಜ್ಯ ಒಕ್ಕಲಿಗ ಸಂಘದ ನಿರ್ದೇಶಕರಾಗಿರುವ ಡಾ.ನಾರಾಯಣಸ್ವಾಮಿ, ಬೆಂಗಳೂರಿನ ಕೆಂಪೇಗೌಡ ಇನ್ಸಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅಧ್ಯಕ್ಷರಾಗಿದ್ದಾರೆ. ಜೊತೆಗೆ ಮಲ್ಲೇಶ್ವರಂನಲ್ಲಿರುವ ನಾರಾಯಣ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ಅಧ್ಯಕ್ಷ ಹಾಗೂ ಸಿಇಓ ಕೂಡ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಸ್ತ್ರಚಿಕಿತ್ಸೆ ನಡೆಸಿರುವ ಡಾ.ನಾರಾಯಣಸ್ವಾಮಿ, ವೈದ್ಯಕೀಯ ಕ್ಷೇತ್ರದಲ್ಲಿ ಪ್ರಖ್ಯಾತರೂ, ಪ್ರಭಾವವುಳ್ಳ ವ್ಯಕ್ತಿಯೂ ಆಗಿದ್ದಾರೆ. ಇಂತಹವರಿಗೂ ಮುಡಾ ಮಾಜಿ ಆಯುಕ್ತ ದಿನೇಶ್‌ಕುಮಾರ್ ಮೋಸ ಮಾಡಿದ್ದಾರೆ. ಈಗ ತಮಗೆ ಶಸ್ತ್ರಚಿಕಿತ್ಸೆ ಮಾಡಿದಂತಹ ಡಾ.ನಾರಾಯಣ ಸ್ವಾಮಿ ಅವರಿಗೆ ಸಿದ್ದರಾಮಯ್ಯ ಅವರು ನ್ಯಾಯ ದೊರಕಿಸುತ್ತಾರೋ ಇಲ್ಲವೋ ಕಾದು ನೋಡಬೇಕಿದೆ.

ಭಾರತ ಯುದ್ಧಕ್ಕೆ ಸನ್ನದ್ಧ

ನಾಳೆ ದೇಶಾದ್ಯಂತ ರಕ್ಷಣಾ ಕವಾಯತಿಗೆ ಸೂಚನೆ



ನವದೆಹಲಿ, ಮೇ 5–ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನ ಮತ್ತು ಭಾರತದ ನಡುವೆ ಯುದ್ಧ ನಡೆಯುವ ಸಾಧ್ಯತೆ ಹೆಚ್ಚಾಗಿದೆ. ಎರಡೂ ದೇಶಗಳು ತಮ್ಮ ಯುದ್ಧೋಪಕರಣಗಳ ತಾಲೀಮು ನಡೆಸಿದ್ದು, ಬಲಾಬಲ ಪ್ರದರ್ಶಿಸುತ್ತಿವೆ. ಇದೀಗ ಮೇ 7ರಂದು ದೇಶಾದ್ಯಂತ ಮಾಕ್ ಡ್ರಿಲ್ (ರಕ್ಷಣಾ ಕವಾಯತು)ನಡೆಸುವಂತೆ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೂ ಸೂಚನೆ ನೀಡಿದೆ.

ಕೇಂದ್ರ ಗೃಹ ಸಚಿವಾಲಯ ಇಂದು ಈ ಆದೇಶ ನೀಡಿದ್ದು, ನಾಗರಿಕರ ರಕ್ಷಣೆಯ ಸಂಬಂಧ ಮೇ 7ರಂದು ದೇಶಾದ್ಯಂತ ಅಣಕು ಪ್ರದರ್ಶನ ಮಾಡಿಸಿ. ಎಲ್ಲಾ ರಾಜ್ಯಗಳಲ್ಲಿ ವಾಯುದಾಳಿಯ ಸೈರನ್ ವ್ಯವಸ್ಥೆ ಇರುವಂತೆ ನೋಡಿಕೊಳ್ಳಿ ಎಂದು ಸೂಚನೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಬುಧವಾರ ಎಲ್ಲಾ ರಾಜ್ಯಗಳಲ್ಲೂ ಯುದ್ಧದ ಸಮಯದಲ್ಲಿ ನಡೆಸಲಾಗುವ ರಕ್ಷಣಾ ಕಾರ್ಯದ ಅಣಕು ಕವಾಯತು ನಡೆಯಲಿದೆ. ಪ್ರತಿಕೂಲ ದಾಳಿ ಸಂದರ್ಭದಲ್ಲಿ ಸಿದ್ಧತೆ ಪರೀಕ್ಷಿಸಲು ಮತ್ತು ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸಲು ಮೇ 7ರಂದು ■6ನೇ ಪುಟಕ್ಕೆ

ಮೋದಿ ಭೇಟಿಯಾದ ರಕ್ಷಣಾ ಕಾರ್ಯದರ್ಶಿ



ನರೇಂದ್ರ ಮೋದಿ



ರಾಜೇಶ್‌ಕುಮಾರ್ ಸಿಂಗ್

ನವದೆಹಲಿ: ಪಹಲ್ಗಾಮ್ ಉಗ್ರರ ದಾಳಿ ಬೆನ್ನಲ್ಲೇ ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆ ಹೆಚ್ಚಾಗಿದ್ದು, ಇದರ ನಡುವಲ್ಲೇ ರಕ್ಷಣಾ ಕಾರ್ಯದರ್ಶಿ ರಾಜೇಶ್‌ಕುಮಾರ್ ಸಿಂಗ್ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಸೋಮವಾರ ಭೇಟಿಯಾಗಿದ್ದಾರೆ. ಶನಿವಾರ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ ತ್ರಿಪಾಠಿ ಅವರು ಮೋದಿ ಅವರನ್ನು ನವದೆಹಲಿಯ ಲೋಕ ಕಲ್ಯಾಣ್ ಮಾರ್ಗದ ನಿವಾಸದಲ್ಲಿ ಭೇಟಿಯಾಗಿದ್ದರು. ಇದರ ಬೆನ್ನಲ್ಲೇ ರಕ್ಷಣಾ ಕಾರ್ಯದರ್ಶಿ ರಾಜೇಶ್‌ಕುಮಾರ್ ಸಿಂಗ್, ಮೋದಿಯವರನ್ನು ಭೇಟಿ ಮಾಡಿರುವುದು, ಕುತೂಹಲ ಕೆರಳಿಸಿದೆ. ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ■6ನೇ ಪುಟಕ್ಕೆ

ಸರ್ಕಾರದ ಆದೇಶದಲ್ಲೇನಿದೆ

- ವಾಯುದಾಳಿ ಎಚ್ಚರಿಕೆ ಸೈರನ್‌ಗಳ ಕಾರ್ಯಾಚರಣೆ ನಡೆಸಬೇಕು
- ಪ್ರತಿಕೂಲ ದಾಳಿಯಾದಾಗ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ನಾಗರಿಕರು, ವಿದ್ಯಾರ್ಥಿಗಳಿಗೆ ರಕ್ಷಣಾ ಅಂಶಗಳ ಕುರಿತು ತರಬೇತಿ ನೀಡಬೇಕು
- ಕ್ರ್ಯಾಶ್ ಬ್ಲ್ಯಾಕೌಟ್ ಕ್ರಮ ಒದಗಿಸಬೇಕು
- ಪ್ರಮುಖ ಕಟ್ಟಡಗಳು, ಸ್ಥಾವರಗಳನ್ನು ಮರೆಮಾಚಬೇಕು
- ನಾಗರಿಕರನ್ನು ಸುರಕ್ಷಿತವಾಗಿ ಸ್ಥಳಾಂತರ ನಡೆಸುವ ಬಗ್ಗೆ ಪೂರ್ವಾಭ್ಯಾಸ ಮಾಡಬೇಕು

ನಾವು ಭಾರತೀಯ ಸೇನೆ ಜೊತೆ ನಿಲ್ಲುತ್ತೇವೆ

ಇಸ್ಲಾಮಾಬಾದ್ ಮಸೀದಿ ಮೌಲಾನಾ ಘೋಷಣೆ

ಇಸ್ಲಾಮಾಬಾದ್: ಭಾರತದೊಂದಿಗಿನ ಯುದ್ಧದ ಭೀತಿಯ ನಡುವೆ, ಪಾಕಿಸ್ತಾನದ ಮಸೀದಿಗಳಿಂದ ಮಾಡಲಾದ ಘೋಷಣೆಗಳು ಪಾಕಿಸ್ತಾನಿ ಸೇನೆಯ ತೊಡೆ ನಡುಗುವಂತೆ ಮಾಡಿದೆ. ತೆಹ್ರೀಕ್–ಎ–ತಾಲಿಬಾನ್ ಪ್ರಾಬಲ್ಯವಿರುವ ಖೈಬರ್ ಪಖ್ತುನ್ಖ್ವಾದಲ್ಲಿರುವ ಮಸೀದಿಗಳು ಯುದ್ಧದ ಸಮಯದಲ್ಲಿ ಭಾರತೀಯ ಸೇನೆಗೆ ಬೆಂಬಲವನ್ನು ಘೋಷಿಸಿವೆ. ಮಸೀದಿಯ ಪ್ರಭಾವಿ ಮೌಲಾನಾ ಒಬ್ಬರು ಮಸೀದಿಯ ಒಳಗಿನಿಂದ ಭಾರತ ದಾಳಿ ಮಾಡಿದರೆ ನಾವು ಭಾರತೀಯ ಸೇನೆಯನ್ನು ಬೆಂಬಲಿಸುತ್ತೇವೆ ಎಂದು ಕುರಾನ್ ಮೇಲೆ ಪ್ರಮಾಣ ಮಾಡುತ್ತೇನೆ ಎಂದು ಘೋಷಿಸುತ್ತಿರುವುದು ಬೆಳಕಿಗೆ ಬಂದಿದೆ.

ಚೆನಾಬ್ ನದಿ ಖಾಲಿ... ಖಾಲಿ...

ಮೋದಿ ಬೆಂಬಲಕ್ಕೆ ನಿಂತ ಸ್ಥಳೀಯರು

ಅಖ್ನೂರ್, ಮೇ5– ಬಾಗ್ಲಿಹಾರ್ ಮತ್ತು ಸಲಾಲ್ ಡ್ಯಾಂ ಗೇಟ್ ಮುಚ್ಚಿದ ನಂತರ ಜಮ್ಮು–ಕಾಶ್ಮೀರದ ಅಖ್ನೂರ್‌ನಲ್ಲಿ ಚೆನಾಬ್ ನದಿಯಲ್ಲಿ ನೀರಿನ ಮಟ್ಟ ಗಣನೀಯವಾಗಿ ಕುಸಿದಿದೆ. ನೀರಿಲ್ಲದೆ ನದಿ ಖಾಲಿ ಖಾಲಿಯಾಗಿದ್ದು, ಸ್ಥಳೀಯರು ಓಡಾಡುತ್ತಿದ್ದಾರೆ. ■6ನೇ ಪುಟಕ್ಕೆ



ಎರಡು ತಿಂಗಳಲ್ಲಿ ಒಳ ಮೀಸಲಾತಿ ಘೋಷಣೆ

- ಪರಿಶಿಷ್ಟ ಜಾತಿಗಳ ನಿಖರ ದತ್ತಾಂಶ ಸಂಗ್ರಹ ಉದ್ದೇಶದಿಂದ ಸಮೀಕ್ಷೆ
- ವರ್ಗೀಕರಣದಲ್ಲಿ ಯಾವ ಗುಂಪಿಗೆ ಸೇರಿಸಬೇಕೆಂದು ವರದಿಯಲ್ಲಿ ಉಲ್ಲೇಖವಿಲ್ಲ
- ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಣೆ

ಬೆಂಗಳೂರು, ಮೇ 5(ಕೆಎಂಶಿ)–ಪರಿಶಿಷ್ಟ ಜಾತಿಗಳಿಗೆ ಎರಡು ತಿಂಗಳಲ್ಲಿ ಒಳ ಮೀಸಲಾತಿ ಕಲ್ಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಈ ಜಾತಿಗಳ ನಿಖರ ದತ್ತಾಂಶ ಸಂಗ್ರಹಣಾ ಕಾರ್ಯ ಇಂದಿನಿಂದ ಆರಂಭವಾಗಿದ್ದು, ಮೂರು ಹಂತಗಳಲ್ಲಿ ಪೂರ್ಣಗೊಳಿಸಿ ಮೀಸಲಾತಿ ಕಲ್ಪಿಸುವುದಾಗಿ ತಿಳಿಸಿದರು.

ಸಾರ್ವಜನಿಕ ಸೇವೆ ಮತ್ತು ಶಿಕ್ಷಣ ಸಂಸ್ಥೆಗಳ ಪ್ರವೇಶಾವಕಾಶದಲ್ಲಿನ ಪ್ರಾತಿನಿಧ್ಯ ಅಸಮಾನತೆ ದೃಷ್ಟಿಯಲ್ಲಿಟ್ಟುಕೊಂಡು ಪರಿಶಿಷ್ಟ ಜಾತಿಗಳ ವಿವಿಧ ಗುಂಪುಗಳಲ್ಲಿ ಅಂತರ್ ಹಿಂದುಳಿದಿರುವಿಕೆ ಗುರುತಿಸಲು ಈ ಸಮೀಕ್ಷೆ ನಡೆಯುತ್ತಿದೆ. ಒಳ ಮೀಸಲಾತಿಯ ವರ್ಗೀಕರಣದಲ್ಲಿ ಯಾವ ಗುಂಪಿಗೆ ಸೇರಿಸಬೇಕು ಎಂಬುದಕ್ಕೆ ಯಾವ ವರದಿಯಲ್ಲೂ ಉಲ್ಲೇಖವಿಲ್ಲ ಮತ್ತು ವರ್ಗೀಕರಣವನ್ನೂ ಮಾಡಿಲ್ಲ. ಇದನ್ನು ಮನಗಂಡು ಸಮೀಕ್ಷೆಗೆ ಮುಂದಾಗಿದ್ದೇವೆ.

ಕಡಿಮೆ ಅವಧಿಯಲ್ಲೇ ಸಮಗ್ರ ಮಾಹಿತಿ ಸಂಗ್ರಹಿಸಿ ಆ ಸಮುದಾಯಗಳಿಗೆ ಸರ್ಕಾರ ನ್ಯಾಯ ಕಲ್ಪಿಸಲಿದೆ. ಪರಿಶಿಷ್ಟ ಜಾತಿಯ ಸುಮಾರು 25 ಲಕ್ಷ ಕುಟುಂಬಗಳು ಇರಬಹುದೆಂದು ಅಂದಾಜಿಸಲಾಗಿದೆ. ಸಮೀಕ್ಷೆಗೆ 100 ಕೋಟಿ ರೂ. ವೆಚ್ಚವಾಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಯಲ್ಲಿ ■6ನೇ ಪುಟಕ್ಕೆ



ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಮೈಸೂರಲ್ಲೂ ಸಮೀಕ್ಷೆ ಆರಂಭ

ಮೈಸೂರು, ಮೇ 5(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ಸೋಮವಾರ ಪರಿಶಿಷ್ಟ ಜಾತಿಯ ಸಮೀಕ್ಷೆ ಕಾರ್ಯ ಆರಂಭವಾಯಿತು.

ಬೆಂಗಳೂರಿನ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಶಿಷ್ಟ ಜಾತಿ ಸಮೀಕ್ಷೆಗೆ ಚಾಲನೆ ನೀಡಿದ ನಂತರ ಮೈಸೂರಿನಲ್ಲಿ ಸೋಮವಾರ ಮಧ್ಯಾಹ್ನ 12.30 ಗಂಟೆಗೆ ಸಮೀಕ್ಷೆ ಆರಂಭವಾಯಿತು. ಈ ಸಮೀಕ್ಷಾ ಕಾರ್ಯದಲ್ಲಿ 3,400 ಶಿಕ್ಷಕರು ಭಾಗಿಯಾಗಿದ್ದು, ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಪಡೆದು ■6ನೇ ಪುಟಕ್ಕೆ

ಶುದ್ಧ ಕುಡಿಯುವ ನೀರಿಗೆ ರಾಜ್ಯದ ಒಂದೇ ಒಂದು ಗ್ರಾಮದಲ್ಲೂ ಸಮಸ್ಯೆ ಆಗಬಾರದು

ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಸಿದ್ದರಾಮಯ್ಯ ಸ್ಪಷ್ಟ ಸೂಚನೆ

- ಹಣಕಾಸಿನ ಕೊರತೆ ಇಲ್ಲ; ಎಷ್ಟು ಬೇಕಾದರೂ ಹಣ ಕೊಡುತ್ತೇವೆ: ಸಿಎಂ
- ಸಮಸ್ಯೆ ಶುರುವಾಗುವ ಮೊದಲೇ ಸಭೆ ನಡೆಸಿ ಸಮರೋಪಾದಿ ಸಿದ್ಧತೆ



ಬೆಂಗಳೂರು ಮೇ 5– ಶುದ್ಧ ಕುಡಿಯುವ ನೀರಿಗೆ ರಾಜ್ಯದ ಒಂದೇ ಒಂದು ಗ್ರಾಮದಲ್ಲೂ ಸಮಸ್ಯೆ ಆಗಬಾರದು ಎಂದು ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟ ಸೂಚನೆ ನೀಡಿದರು. ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ವಿಡಿಯೋ ಸಂವಾದದಲ್ಲಿ ಈ ಸೂಚನೆ ನೀಡಿದರು.

ರಾಜ್ಯದಲ್ಲಿ ಎಲ್ಲಿಯೂ ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೂ ತೊಂದರೆಯಾಗಬಾರದು. ಕುಡಿಯುವ ನೀರಿನ ನಿರ್ವಹಣೆಗೆ ಯಾವುದೇ ಹಣಕಾಸಿನ ಕೊರತೆ ಇರುವುದಿಲ್ಲ. ಪಂಚಾಯತ್ ರಾಜ್ ಇಲಾಖೆಗೆ 60 ಕೋಟಿ ರೂ. ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಜಿಲ್ಲೆಗಳಲ್ಲಿ ತುರ್ತು ಕುಡಿಯುವ ನೀರಿನ ಪೂರೈಕೆಗೆ ಜಿಲ್ಲಾಧಿಕಾರಿಗಳು ಕ್ರಿಯಾ ಯೋಜನೆ ರೂಪಿಸಿ, ಟಾಸ್ಕ್ ಫೋರ್ಸ್‌ನಿಂದ ಅನುಮೋದನೆ ಪಡೆದುಕೊಂಡು ಅನುಷ್ಠಾನಗೊಳಿಸಲು ಸಿಎಂ ಸೂಚನೆ ನೀಡಿದರು.

ಪ್ರತಿ ವರ್ಷ ಕುಡಿಯುವ ನೀರಿನ ತೊಂದರೆ ಎದುರಿಸುತ್ತಿರುವ ಗ್ರಾಮಗಳಲ್ಲಿ ಸಮಸ್ಯೆಯನ್ನು ಶಾಶ್ವತವಾಗಿ ನೀಗಿಸಲು ಯೋಜನೆ ರೂಪಿಸಬೇಕು. ಅಗತ್ಯಬಿದ್ದರೆ ಮಾತ್ರ ಬೋರ್‌ವೆಲ್‌ಗಳನ್ನು ಕೊರೆಯಬೇಕು. ಯಾವುದೇ ಕಾರಣಕ್ಕೂ ಅನಗತ್ಯವಾಗಿ ಬೋರ್‌ವೆಲ್ ಕೊರೆದು ದುಂದುವೆಚ್ಚ ಮಾಡಬಾರದು ಎಂದು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದರು. ರಾಜ್ಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ವಾಡಿಕೆಗಿಂತ ■6ನೇ ಪುಟಕ್ಕೆ



ಅಶೋಕ ರಸ್ತೆ, ಮೈಸೂರು. ಫೋ: 0821-2521926, ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು. ಫೋ: 0821-2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221-200926

ಮಚ್ಚು, ಲಾಂಗ್‌ನಿಂದ ಕೊಚ್ಚಿ ರೌಡಿಶೀಟರ್ ಭೀಕರ ಹತ್ಯೆ

ವರುಣ ಬಳಿ ತಿ.ನರಸೀಪುರ ರಸ್ತೆಯಲ್ಲಿನ ಹೋಟೆಲ್ ಮುಂದೆ ಮುಂಜಾನೆ ಆರು ಮಂದಿ ತಂಡದಿಂದ ಕೃತ್ಯ

ಮೈಸೂರು, ಮೇ 5(ಆರ್‌ಕೆ)– ಹಳೇ ವೈಷಮ್ಯದ ಹಿನ್ನೆಲೆಯಲ್ಲಿ ಆರು ಮಂದಿಯ ಗುಂಪೊಂದು ಮಚ್ಚು, ಲಾಂಗ್‌ನಿಂದ ರೌಡಿ ಶೀಟರ್ ಓರ್ವನನ್ನು ಕೊಚ್ಚಿ ಬರ್ಬರವಾಗಿ ಹತ್ಯೆಗೈದು ಪರಾರಿಯಾಗಿರುವ ಘಟನೆ ಮೈಸೂರು ತಾಲೂಕು ವರುಣ ಗ್ರಾಮದ ಬಳಿ, ತಿ.ನರಸೀಪುರ ರಸ್ತೆಯ ಹೋಟೆಲ್‌ವೊಂದರ ಮುಂದೆ ಇಂದು ಮುಂಜಾನೆ ನಡೆದಿದೆ.

ಮೈಸೂರಿನ ಕ್ಯಾತಮಾರನಹಳ್ಳಿ ನಿವಾಸಿ ಕಾರ್ತಿಕ್ ಅಲಿಯಾಸ್ ಕಾರ್ತಿ(32) ಕೊಲೆಯಾದವನಾಗಿದ್ದು, ಅವಿವಾಹಿತನಾದ ಆತ, ಈ ಹಿಂದೆ ಆಟೋ ಓಡಿಸಿಕೊಂಡಿದ್ದು, ಲೇವಾದೇವಿ ನಡೆಸುತ್ತಿದ್ದ ಎನ್ನಲಾಗಿದೆ.



ಕಾರ್ತಿಕ್

ನಂಜನಗೂಡಿನ ತನ್ನ ಪ್ರೇಯಸಿಯನ್ನು ಕರೆತಂದು ಐದು ದಿನಗಳಿಂದ ವರುಣ ಗ್ರಾಮದ ಬಳಿ, ತಿ.ನರಸೀಪುರ ರಸ್ತೆಯ ಹೋಟೆಲ್‌ನ ಕೊಠಡಿಯಲ್ಲಿ ಇರಿಸಿಕೊಂಡಿದ್ದ ಎನ್ನಲಾಗಿದೆ. ಪ್ರತೀದಿನ ರಾತ್ರಿ ಆಕೆಯೊಂದಿಗೆ ಇದ್ದು, ಬೆಳಗ್ಗೆ ಹೊರಗೆ ಹೋಗಿ ರಾತ್ರಿ ಬರುತ್ತಿದ್ದ ಕಾರ್ತಿಕ್, ನಿನ್ನೆ (ಮೇ 4) ಬೆಳಗ್ಗೆ 6 ಗಂಟೆಗೆ ಹೋಟೆಲ್‌ನಿಂದ ಹೊರ ಹೋದವನು, ಇಂದು ಮುಂಜಾನೆ 1.40 ಗಂಟೆಗೆ ತನ್ನ ಥಾರ್ ಜೀಪ್‌ನಲ್ಲಿ ಹೋಟೆಲ್‌ಗೆ ಬಂದಿದ್ದ. ಈತ ಹೋಟೆಲ್ ಮುಂದೆ ಜೀಪ್ ನಿಲ್ಲಿಸಿ ಕೆಳಗಿಳಿದು ಮೊಬೈಲ್‌ನಲ್ಲಿ ಮಾತನಾಡುತ್ತಾ ಹೋಟೆಲ್‌ನತ್ತ ಹೆಜ್ಜೆ ಹಾಕುತ್ತಿದ್ದಂತೆಯೇ ಬೈಕ್‌ನಲ್ಲಿ ಬಂದ ಇಬ್ಬರು ಈತನನ್ನು ಕರೆದಿದ್ದು, ಅವರತ್ತ ಕಾರ್ತಿಕ್ ತೆರಳುತ್ತಿದ್ದಂತೆಯೇ ಬೈಕ್‌ನ ಹಿಂಬದಿ ಸವಾರ ಹಠಾತ್ತನೇ ಕಾರ್ತಿಕ್ ಮೇಲೆರಗಿ ಆತನನ್ನು ಕೆಳಗೆ ಬೀಳಿಸಿ, ಹಲ್ಲೆಗೆ ಮುಂದಾಗಿದ್ದಾನೆ. ಅದೇ ವೇಳೆ ಬೈಕ್ ಚಾಲನೆ ಮಾಡಿಕೊಂಡು ಬಂದಿದ್ದ ವ್ಯಕ್ತಿ ಮತ್ತು ವೇಗವಾಗಿ ಬಂದು ನಿಂತ ಸ್ಕಾರ್ಪಿಯೋದಲ್ಲಿದ್ದ ಮೂವರು ಸೇರಿ ಕಾರ್ತಿಕ್‌ನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ, ಪರಾರಿಯಾಗಿರುವುದು ಹೋಟೆಲ್‌ನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ■6ನೇ ಪುಟಕ್ಕೆ



ಬೇಕಾಗಿದ್ದಾರೆ

ಮೈಸೂರಿನ ಕುವೆಂಪುನಗರದಲ್ಲಿರುವ ಖಾಸಗಿ ಕಂಪನಿಗೆ ಅಡಿಗೆ ಮಾಡಲು ಮಹಿಳೆಯರು & ಡ್ರೈವಿಂಗ್ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ

9164258888

ಬೇಕಾಗಿದ್ದಾರೆ

The Lion Restaurant ಗೆ Chef, Steward, Captain's, store incharge ಬೇಕಾಗಿದ್ದಾರೆ

ಸಂಬಳ: 20,000 to 50,000

8548089469
9164946160

ಮೈಸೂರಿನ ಸಾತಗಳ್ಳಿ ಬಳಿ ಕ್ರೀಡಾ ಸಂಕೀರ್ಣ

- ರಿಂಗ್ ರಸ್ತೆಗೆ ಹೊಂದಿಕೊಂಡಂತೆ 25.2 ಎಕರೆ ಜಾಗ ಗುರುತು
- ಸೈಕ್ಲಿಂಗ್ ವೆಲೋಡ್ರಮ್, ಖೋಖೋ, ಕುಸ್ತಿ, ವಾಲಿಬಾಲ್ ಅಕಾಡೆಮಿ ಸ್ಥಾಪನೆ
- ಶೀಘ್ರದಲ್ಲಿಯೇ ಮುಡಾದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಭೂಮಿ ಹಸ್ತಾಂತರ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಮೇ 5– ಇಲವಾಲ ಬಳಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣದ ಸಿಹಿ ಸುದ್ದಿಯ ಬೆನ್ನಲ್ಲೇ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಸೈಕ್ಲಿಂಗ್ ವೆಲೋಡ್ರಮ್, ಖೋಖೋ, ಕುಸ್ತಿ ಅಕಾಡೆಮಿ ಹಾಗೂ ವಾಲಿಬಾಲ್ ಒಳಗೊಂಡ ಕ್ರೀಡಾ ಸಂಕೀರ್ಣ ನಿರ್ಮಾಣಕ್ಕೆ ಸದ್ದಿಲ್ಲದೆ ಸಿದ್ಧತೆ ನಡೆದಿದೆ.

ಮಲೆ ಮಹದೇಶ್ವರ ಬೆಟ್ಟದಲ್ಲಿ ಕಳೆದ ತಿಂಗಳು ನಡೆದ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ಹೊರವಲಯದ ಹುಯಿಲಾಳು ಗ್ರಾಮದ ಬಳಿ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನ ನಿರ್ಮಾಣಕ್ಕೆ ಭೂಮಿ ನೀಡುವ ಮಹತ್ವದ ನಿರ್ಧಾರ ಪ್ರಕಟಿಸಿದ ಬೆನ್ನಲ್ಲೇ, ಕ್ರೀಡಾ ಕ್ಷೇತ್ರದಲ್ಲಿ ಉದಯೋನ್ಮುಖ ಮೈಸೂರು ಕ್ರೀಡಾಪಟುಗಳನ್ನು ಸಜ್ಜುಗೊಳಿಸಲು ಕ್ರೀಡಾ ಸಂಕೀರ್ಣ ನಿರ್ಮಾಣಕ್ಕೆ ಸಿದ್ಧತೆ ಆರಂಭವಾಗಿದೆ.





ಮೈಸೂರಿನ ಸಾತಗಳ್ಳಿ ಬಳಿ ನಿರ್ಮಿಸಲು ಉದ್ದೇಶಿಸಿರುವ ಕ್ರೀಡಾ ಸಂಕೀರ್ಣದ ಸ್ಥಳವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಎ.ಡಿ.ಭಾಸ್ಕರ್ ನಾಯಕ್, ಮೈಸೂರು ಜಿಲ್ಲಾ ಸೈಕ್ಲಿಂಗ್ ಅಸೋಸಿಯೇಷನ್ ಅಧ್ಯಕ್ಷ ರಮೇಶ್ ನರಸಯ್ಯ, ಕಾರ್ಯದರ್ಶಿ ಲೋಕೇಶ್ ನರಸಿಂಹಚಾರ್, ಸೈಕ್ಲಿಂಗ್ ಕೋಚ್ ಫರಿಯಲ್ ಜಮಾದರ್ ಅವರು ಪರಿಶೀಲಿಸಿದರು. ಬಲ ಚಿತ್ರದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಿಸಲು ಉದ್ದೇಶಿಸಿರುವ ಸ್ಥಳ.

ಕ್ರೀಡಾ ಸಂಕೀರ್ಣ: ಮೈಸೂರಿನ ಸಾತಗಳ್ಳಿ ಬಳಿ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿರುವ 25.2 ಎಕರೆ ಜಾಗದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಎರಡು ವರ್ಷದ ಹಿಂದೆ ಇದೇ ಸ್ಥಳದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನ ನಿರ್ಮಿಸಲು ಉದ್ದೇಶಿಸಲಾಗಿತ್ತು. ಆದರೆ, ■6ನೇ ಪುಟಕ್ಕೆ

ಡಿಪಿಆರ್ ಸಿದ್ಧಪಡಿಸಲಾಗುತ್ತದೆ

“ಕ್ರೀಡಾ ಸಂಕೀರ್ಣ ನಿರ್ಮಾಣಕ್ಕಾಗಿ ಗುರುತಿಸಿರುವ ಭೂಮಿಯನ್ನು ಈಗಾಗಲೇ ಪರಿಶೀಲನೆ ನಡೆಸಿದ್ದೇವೆ. ಮುಡಾಗೆ ಪತ್ರವನ್ನೂ ಕೂಡ ಬರೆಯಲಾಗಿದೆ. ಸದರಿ ಭೂಮಿಯ ಸರ್ವೆ ಹಾಗೂ ಹದ್ದುಬಸ್ತು ಕಾರ್ಯಕ್ಕೆ ಮುಡಾ ಸಿದ್ಧತೆ ಮಾಡಿಕೊಳ್ಳುತ್ತಿದೆ. ಭೂಮಿ ಹಸ್ತಾಂತರಿಸಿದ ಬಳಿಕ ಡಿಪಿಆರ್ ತಯಾರಿಸಿ, ತ್ವರಿತಗತಿಯಲ್ಲಿ ಕ್ರೀಡಾ ಸಂಕೀರ್ಣದ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಈ ಕ್ರೀಡಾ ಸಂಕೀರ್ಣದಿಂದ ಸೈಕ್ಲಿಂಗ್, ಖೋಖೋ, ಕುಸ್ತಿ, ವಾಲಿಬಾಲ್ ಕ್ರೀಡಾಪಟುಗಳನ್ನು ಸಜ್ಜುಗೊಳಿಸಲು ಸಹಕಾರಿಯಾಗುತ್ತದೆ.

–ಭಾಸ್ಕರ್ ನಾಯಕ್, ಸಹಾಯಕ ನಿರ್ದೇಶಕ, ಯುವ ಸಬಲೀಕರಣ–ಕ್ರೀಡಾ ಇಲಾಖೆ

ಜಿಲೇಬಿ, ಶರಬತ್ತಿನಲ್ಲಿ ಹಾನಿಕಾರಕ ರಾಸಾಯನಿಕ ಬಣ್ಣ ಮಿಶ್ರಣ

ಮೈಸೂರಲ್ಲಿ ಮಾದರಿ ಸಂಗ್ರಹಣೆ ಆರಂಭ





ಮೈಸೂರು, ಮೇ 5(ಬಿಎಲ್‌ಯು)– ಜಿಲೇಬಿ ಮತ್ತು ಶರಬತ್ತುಗಳಲ್ಲಿ ಹಾನಿಕಾರಕ ರಾಸಾಯನಿಕ ಕೃತಕ ಬಣ್ಣ ಬಳಸಿ ಮಾರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಅವುಗಳ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೊಳಪಡಿಸುವ ಕಾರ್ಯಾಚರಣೆಯನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಂದಿನಿಂದ ಆರಂಭಿಸಿದೆ.

ಜಿಲೇಬಿ ಮತ್ತು ಶರಬತ್ತುಗಳನ್ನು ತಯಾರಿಸುವಾಗ ಹಾನಿಕಾರಕವಾದ ರಾಸಾಯನಿಕ ಕೃತಕ ಬಣ್ಣ ಬಳಸಲಾಗುತ್ತಿದೆ. ಇದು ಮನುಷ್ಯನ ಆರೋಗ್ಯದ ಮೇಲೆ ತೀವ್ರ ರೀತಿಯ ಪರಿಣಾಮ ಬೀರುತ್ತದೆ.

ಈ ಹಿನ್ನೆಲೆಯಲ್ಲಿ ಇಂತಹ ಜಿಲೇಬಿ ಹಾಗೂ ಶರಬತ್ತು ಮಾರಾಟ ಮಾಡುವ ಮೈಸೂರಿನ ಸ್ಥಳಗಳಿಗೆ ಭೇಟಿ ನೀಡಿ ಅದರ ಮಾದರಿಗಳನ್ನು ಸಂಗ್ರಹಿಸಲಾಗುತ್ತಿದೆ. ಇವುಗಳನ್ನು ಸರ್ಕಾರದ ಆಹಾರ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಪ್ರಯೋಗಾಲಯದ ವರದಿ ಬಂದ ನಂತರ ಬೆಂಗಳೂರಿನಲ್ಲಿರುವ ಇಲಾಖೆಯ ಕೇಂದ್ರ ಕಚೇರಿಗೆ ಕಳುಹಿಸಬೇಕೆಂದು ಜಿಲ್ಲಾ ಅಂಕಿತಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ವರದಿ ಬಂದ ನಂತರ ಹಾನಿಕಾರಕ ರಾಸಾಯನಿಕ ಕೃತಕ ಬಣ್ಣ ಇರುವುದು ಕಂಡ ಬಂದರೆ ಇಲಾಖೆ ಯಾವ ರೀತಿಯ ಕ್ರಮ ಕೈಗೊಳ್ಳುತ್ತದೆ ಎಂದು ಕಾದು ನೋಡಬೇಕಿದೆ.

ಶ್ರೀನಗರದಲ್ಲಿ ಬಸವ, ಅಕ್ಕಮಹಾದೇವಿ ಜಯಂತಿ



ಬಸವ ಹಾಗೂ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್ ಉದ್ಘಾಟಿಸಿದರು.

ಮೈಸೂರು, ಮೇ 5– ಮೈಸೂರಿನ ಮುಕ್ತಾಯುಕ್ತಾ ಮಹಿಳಾ ಬಳಗದ ಆಶ್ರಯದಲ್ಲಿ ಬಸವ ಹಾಗೂ ಅಕ್ಕಮಹಾದೇವಿ ಜಯಂತಿ ಆಚರಿಸಲಾಯಿತು. ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್ ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ವೀರಶೈವ ಲಿಂಗಾಯತ ವಿವಿಧ ಬಡಾವಣೆಗಳ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಕೆ.ಸಿ.ಬಸವರಾಜಸ್ವಾಮಿ ಮಾತನಾಡಿ, ಇಂದಿನ ಪ್ರಸ್ತುತ ಸನ್ನಿವೇಶದಲ್ಲಿ ಬಸವಣ್ಣನವರ ವಚನಗಳು ಅತ್ಯಾವಶ್ಯಕವಾಗಿದ್ದು, ಯುವ ಜನರು ಬಸವಣ್ಣನವರ ವಚನಗಳನ್ನು ಅರ್ಥೈಸಿಕೊಂಡು ಅನುಷ್ಠಾನಕ್ಕೆ ತರುವುದು ಅತ್ಯವಶ್ಯಕವಾಗಿದೆ. ಬಸವಣ್ಣ ಮತ್ತು ಅಕ್ಕಮಹಾದೇವಿ ಯವರ ವಚನಗಳು ಸಮಾಜದ ಪರಿವರ್ತನೆಗೆ ಪೂರಕವಾಗಿರುತ್ತವೆ. ಶರಣರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಕಾಯಕ ಮತ್ತು ದಾಸೋಹಕ್ಕೆ ಒತ್ತು ಕೊಡಬೇಕೆಂದು ತಿಳಿಸಿದರು.

ಆಕಾಶವಾಣಿ ಕಲಾವಿದರಾದ ಶೈಲಾ ಸಿದ್ದರಾಮಪ್ಪ ಮತ್ತು ವೀರಶೈವ ರುದ್ರ ಭೂಮಿಯಲ್ಲಿ ಶವ ಸಂಸ್ಕಾರ ಕಾಯಕದಲ್ಲಿ ನಿರತರಾಗಿರುವ ನೀಲಮ್ಮ ಅವರನ್ನು ಸನ್ಮಾನಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಉಪ ನಿರ್ದೇಶಕ ನಾಗೇಂದ್ರಪ್ಪ, ಶ್ರೀಮತಿ ಶೈಲಾ ನಾಗೇಂದ್ರಪ್ಪ, ಶ್ರೀಮತಿ ರೂಪ ಮತ್ತಿತರರು ಉಪಸ್ಥಿತರಿದ್ದರು.

ಕಪಿಲಾರತಿ



ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿರುವ ರೈತರ ಶಿಬಿರದಲ್ಲಿ ಕಪಿಲಾರತಿ ನೆರವೇರಿಸಲಾಯಿತು.

ಪೂರಕ ಪರೀಕ್ಷೆಗೆ ತರಬೇತಿ

ಮೈಸೂರು, ಮೇ 5–ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮತ್ತು ನವೋದಯ ಫೌಂಡೇಷನ್ ಜಂಟಿ ಆಶ್ರಯದಲ್ಲಿ 2025ನೇ ಸಾಲಿನಲ್ಲಿ ಅನುತ್ತೀರ್ಣರಾದ ಪೂರಕ ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಸಹಾಯ ಮತ್ತು ಸಹಕಾರ ನೀಡುವ ಉದ್ದೇಶದಿಂದ ಉಚಿತ ವಿಶೇಷ ಮಾಹಿತಿ, ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡಲಿದೆ. ಅರ್ಹ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಕರ್ಯವನ್ನು ಸಹ ಕಲ್ಪಿಸಲಾಗುತ್ತದೆ. ಸಮಾಜ ಸೇವೆ ಮತ್ತು ಪ್ರಭಾವಿ ಬೋಧಕರಿಂದ ತರಬೇತಿ ನೀಡಲಾಗುತ್ತದೆ. ಆಸಕ್ತರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳುವುದು. ನೊಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ 9686072224 ಸಂಪರ್ಕಿಸಬಹುದು.

ಜೆ.ಜಿ.ನಾಗುಬಾಯಿ ನಿಧನ



ಮೈಸೂರು: ವಿದ್ಯಾರಣ್ಯಪುರಂ ನಿವಾಸಿ ಎನ್.ಐ.ಇ ಎಂಜಿನಿಯರಿಂಗ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ದಿವಂಗತ ಡಾ. ಜೆ. ಗೋಪಾಲಾಚಾರ್ ಅವರ ಧರ್ಮಪತ್ನಿ ಜೆ.ಜಿ.ನಾಗುಬಾಯಿ (79) ಇಂದು ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರರು, ಸೇರಿದಂತೆ ಅಪಾರ ಬಂಧುಮಿತ್ರರನ್ನು ಆಗಲಿದ್ದಾರೆ, ಇವರ ಅಂತ್ಯಕ್ರಿಯೆ ಇಂದು ಸಂಜೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮೃತಾ



ಮೈಸೂರು: ಮೈಸೂರಿನ ಗಾಂಧಿನಗರ ನಿವಾಸಿ ಅಮೃತಾ(70) ಅವರು ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಉದಯಗಿರಿಯಲ್ಲಿರುವ ರುದ್ರಭೂಮಿಯಲ್ಲಿ ಭಾನುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಯಕೃಷ್ಣ



ಮೈಸೂರು: ಮೈಸೂರು ಕುವೆಂಪುನಗರ ಕೆಹೆಚ್‌ಬಿ ಲೇಔಟ್ ನಿವಾಸಿ ಹಾಗೂ ನಿವೃತ್ತ ಕಂದಾಯ ಇಲಾಖೆ ನೌಕರರಾದ ಜಯಕೃಷ್ಣ (75) ಇಂದು ರಾತ್ರಿ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಮಿತ್ರರ ಆಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಬೆಳಗ್ಗೆ 10ಗಂಟೆಗೆ ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ನಡೆದ ಹಿಂದೂ ಕಾರ್ಯಕರ್ತರ ಹತ್ಯೆ ಪ್ರಕರಣಗಳ ಎನ್‌ಐಎ ತನಿಖೆಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹ

ಸ್ಪೀಕರ್ ಯು.ಟಿ.ಖಾದರ್, ಬಜ್ಪೆ ಪೊಲೀಸ್ ಠಾಣೆಯ ಪೇದೆ ರಷೀದ್ ಮಂಪರು ಪರೀಕ್ಷೆಗೊಳಪಡಿಸಿದರೆ ಸತ್ಯ ಬಯಲು; ಒತ್ತಾಯ

ಬೆಂಗಳೂರು, ಮೇ 5(ಕೆಎಂಶಿ)–ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಸೇರಿದಂತೆ ಕರ್ನಾಟಕದಲ್ಲಿ ನಡೆದಿರುವ ಕೊಲೆ ಪ್ರಕರಣಗಳನ್ನು ಎನ್‌ಐಎಗೆ ವಹಿಸಬೇಕೆಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಇಂದಿಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿನ ಕೊಲೆ ಪ್ರಕರಣಗಳನ್ನು ಎನ್‌ಐಎ ತನಿಖೆಗೆ ನೀಡುವ ಬಗ್ಗೆ ಕೇಂದ್ರ ಗೃಹ ಸಚಿವರೊಂದಿಗೆ ಮಾತನಾಡಿದ್ದೇನೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ಬಜ್ಪೆ ಪೊಲೀಸ್ ಠಾಣೆಯ ಪೇದೆ ರಷೀದ್ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಿದರೆ, ಈವರೆಗೆ ನಡೆದಿರುವ ಹಿಂದೂ ಕಾರ್ಯಕರ್ತರ ಕೊಲೆಗಳ ರೂವಾರಿಗಳು ಯಾರೆಂದು ಬಯಲಾಗುತ್ತದೆ ಎಂದರು.

ಕೇರಳ ಸೇರಿದಂತೆ ಇತರ ರಾಜ್ಯಗಳಿಂದ ಕಿಡಿಗೇಡಿಗಳು ಉಲ್ಲಾಳದ ಮೂಲಕ ರಾಜ್ಯ ಪ್ರವೇಶಿಸಿ ಈ ಕೊಲೆಗಳನ್ನು ಮಾಡುತ್ತಿದ್ದಾರೆ.



ಶೋಭಾ ಕರಂದ್ಲಾಜೆ

ಹಿಂದೂ ಕಾರ್ಯಕರ್ತರ ಕೊಲೆ ಮಾಡಲು ವಿದೇಶಗಳಿಂದ ಹಣ ಬರುತ್ತಿದೆ. ಎಲ್ಲಿಂದ ಹಣ ಬರುತ್ತದೆ. ಇದರ ಹಿಂದಿನ ರೂವಾರಿಗಳು ಯಾರೆಂದು ಎನ್‌ಐಎ ತನಿಖೆ ಯಿಂದಷ್ಟೇ ಪತ್ತೆಯಾಗಲಿದೆ ಎಂದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಸಮರ್ಥರು, ಅವರಿಗೆ ಯಾರಿಂದ ಒತ್ತಡವೋ ಅಥವಾ ಕೆಲಸ ಗೊತ್ತಿಲ್ಲವೋ, ರಾಜ್ಯದ ಜನರ ರಕ್ಷಣೆ ಇವರಿಂದ ಸಾಧ್ಯವಿಲ್ಲ. ಇವರನ್ನು ಮೊದಲು ಸಂಪುಟದಿಂದ ಕೈಬಿಡಬೇಕು. ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಉದ್ಧಟತನದ ಮಾತುಗಳನ್ನು ಆಡುತ್ತಿದ್ದಾರೆ. ರೌಡಿಶೀಟರ್‌ಗಳು ಹಿಂದೂ ಸಂಘಟನೆ ಸೇರುತ್ತಿದ್ದಾರೆ ಎಂಬ ಆಧಾರರಹಿತ ಆರೋಪ ಮಾಡುತ್ತಾರೆ. ನಾನೂ ಹಿಂದೂ ಕಾರ್ಯಕರ್ತೆ, ಹಾಗಿದ್ದರೆ ನನ್ನನ್ನು ಬಂಧಿಸಲಿ ಎಂದು ಸವಾಲು ಹಾಕಿದ ಸಚಿವೆ, ನಾನು ಮೊದಲು ಹಿಂದೂ ಕಾರ್ಯಕರ್ತೆ, ಆರ್‌ಎಸ್‌ಎಸ್, ವಿಎಚ್‌ಪಿ ನಂತರ ಬಿಜೆಪಿ ಎಂದು ಶೋಭಾ ಕರಂದ್ಲಾಜೆ ಹೇಳಿದರು.

ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯಮಂತ್ರಿ ಆಗಿದ್ದಾಗ ಹಿಂದೂ ಕಾರ್ಯಕರ್ತರ ಕೊಲೆಗಳಾಗುತ್ತವೆ. ಅಪರಾಧ ಮೊಕದ್ದಮೆಗಳಡಿ ಜೈಲಿನಲ್ಲಿದ್ದವರ ವಿರುದ್ಧದ ಕೇಸ್‌ಗಳನ್ನು ವಾಪಸ್ ಪಡೆದು ಬೀದಿಗೆ ಬಿಟ್ಟರು. ಇಂತಹವರಿಂದ ಮತ್ತೆ ಕೊಲೆಗಳು ಆಗುತ್ತಿವೆ ಎಂದು ಆರೋಪಿಸಿದರು. ಒಂದು ಸಮುದಾಯವನ್ನು ಓಲೈಸಲು ಪಿಎಫ್‌ಐ, ಎಸ್‌ಡಿಪಿಐ ಕಾರ್ಯಕರ್ತರ ಮೇಲಿದ್ದ ಪ್ರಕರಣಗಳನ್ನು ಹಿಂಪಡೆದು ಟಿಪ್ಪು ಜಯಂತಿ ನಡೆಸಿ, ಹಿಂದೂ–ಮುಸ್ಲಿಮರ ನಡುವೆ ಜಗಳ ತಂದಿಟ್ಟರು. ಇಂತಹ ಕೃತ್ಯಗಳಲ್ಲಿ ಉತ್ತರ ಭಾರತದಲ್ಲಿ ಪಪ್ಪು, ದಕ್ಷಿಣ ಭಾತರದಲ್ಲಿ ಟಿಪ್ಪು ಎಂದು ವ್ಯಂಗ್ಯವಾಡಿದರು.

ಗೊಂದಲವಿಲ್ಲದೆ ಒಳಮೀಸಲಾತಿ ಜಾರಿಗೆ ಮತ್ತೆ ಸಮೀಕ್ಷೆ



ಡಿ.ಕೆ.ಶಿವಕುಮಾರ್

ಬೆಂಗಳೂರು, ಮೇ 5(ಕೆಎಂಶಿ)– ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ಸಮೀಕ್ಷೆ ನಡೆಸಲು ಸಚಿವ ಸಂಪುಟ ತೀರ್ಮಾನಿಸಿದ್ದು, ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಯಾವುದೇ ಗೊಂದಲ ಇಲ್ಲದಂತೆ ತಮ್ಮ ಜಾತಿಗಳ ಸ್ಪಷ್ಟ ಮಾಹಿತಿ ನೀಡಬೇಕು. ಒಳ ಮೀಸಲಾತಿ ಕುರಿತು ಯಾವುದೇ ಗೊಂದಲ ಇಲ್ಲ. ಸುಪ್ರೀಂ ಕೋರ್ಟ್ ತೀರ್ಪು ಸಹ ಇದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದೇವೆ. ಪರಿಶಿಷ್ಟ ಸಮುದಾಯಗಳಲ್ಲಿ ಕೆಲವು ಪಂಗಡಗಳು ಸರಿಯಾದ ಮಾಹಿತಿ ನೀಡಿಲ್ಲ. ನಗರ ಪ್ರದೇಶ ನಿವಾಸಿಗಳು ತಮ್ಮ ಸಮುದಾಯ ಯಾವುದೆಂಬುದನ್ನು ಬಹಿರಂಗಪಡಿಸಿಲ್ಲ, ಆದ್ದರಿಂದ ಮುಕ್ತ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

ಜನಿವಾರ ತೆಗೆಸಿದ್ದಕ್ಕೆ ಆಕ್ಷೇಪ : ಕಲಬುರಗಿಯಲ್ಲಿ ನೀಟ್ ಪರೀಕ್ಷೆ ವೇಳೆ ಜನಿವಾರ ತೆಗೆಸಿರುವ ಘಟನೆಗೆ ಪ್ರತಿಕ್ರಿಯಿಸಿ, ಧಾರ್ಮಿಕ ಆಚರಣೆ, ವಿಚಾರಗಳಿಗೆ ಸರ್ಕಾರ, ಅಧಿಕಾರಿಗಳು ಅಡ್ಡಿ ಮಾಡಬಾರದು. ಕೇಂದ್ರ ಸರ್ಕಾರದ ಈ ಕ್ರಮ ಸರಿಯಲ್ಲ ಎಂದು ನುಡಿದರು.

ಆಲಮಟ್ಟಿ ಏರಿಕೆ : ಜಲ ಸಂಪನ್ಮೂಲ ಖಾತೆಯನ್ನೂ ಹೊಂದಿರುವ ಅವರು, ಆಲಮಟ್ಟಿ ಅಣೆಕಟ್ಟು ಎತ್ತರ 524 ಮೀಟರ್‌ಗೆ ಹೆಚ್ಚಿಸಿ, ನಮ್ಮ ಪಾಲಿನ ನೀರು ಬಳಸಿಕೊಳ್ಳಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಡಿಕೆಶಿ ಹೇಳಿದರು.

2010ರ ಕೃಷ್ಣಾ ಜಲ ನ್ಯಾಯಾಧಿಕರಣ ತೀರ್ಪಿನ ಅನ್ವಯ ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಬೇಕಿದೆ. ಈ ಸಂಬಂಧ ಮೇ 7ರಂದು ಕೇಂದ್ರ ಜಲಶಕ್ತಿ ಸಚಿವಾಲಯ ಸಂಬಂಧಪಟ್ಟ ನಾಲ್ಕು ರಾಜ್ಯ ಸರ್ಕಾರದ ಪ್ರತಿನಿಧಿಗಳ ಸಭೆ ಕರೆದಿದೆ. ಈ ವಿಚಾರ ಸಂಬಂಧ ಪಟ್ಟ ಸಚಿವರ ಸಭೆ ಕರೆದು ಅಭಿಪ್ರಾಯ ಸಂಗ್ರಹಿಸಲಾಗಿದೆ. ಕಾನೂನು ತಜ್ಞರೊಂದಿಗೂ ಚರ್ಚಿಸಿದ್ದು, ಎರಡು ದಿನದಲ್ಲಿ ತಮ್ಮ ಅಭಿಪ್ರಾಯ ನೀಡಲಿದ್ದಾರೆ. ಇವುಗಳನ್ನು ಆಧರಿಸಿ ಕೇಂದ್ರ ಸಚಿವಾಲಯ ಕರೆದಿರುವ ಸಭೆಯಲ್ಲಿ ಕರ್ನಾಟಕದ ಬೇಡಿಕೆ ಪ್ರಸ್ತಾಪಿಸುತ್ತೇವೆ. ಯೋಜನೆ ಜಾರಿಗೆ ಸರ್ಕಾರ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಿದ್ದು, ಇದಕ್ಕೆ ಅಗತ್ಯ ಹಣ ಮೀಸಲಿಡಲಾಗುವುದು. ಆಂಧ್ರ ಹಾಗೂ ತೆಲಂಗಾಣಕ್ಕೆ ಎಷ್ಟಾದರೂ ಲಾಭ ಆಗಲಿ, ನಷ್ಟ ಆಗಲಿ, ನಮ್ಮ ಅಣೆಕಟ್ಟೆಯನ್ನು 524 ಮೀಟರ್‌ಗೆ ಎತ್ತರಿಸಬೇಕು, ಇದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ ಎಂದರು.

ಟನಲ್ ರಸ್ತೆಯಿಂದ ಹಿಂದೆ ಸರಿಯಲ್ಲ

"ರಾಜಧಾನಿಯಲ್ಲಿ ಟನಲ್ ರಸ್ತೆ ಹಾಗೂ ಮೆಟ್ರೊ ಕಾಮಗಾರಿಗೆ ಹೆಬ್ಬಾಳ ಜಂಕ್ಷನ್ ಮುಖ್ಯವಾದ ಜಾಗ, ಅಗತ್ಯವಿರುವ ಪ್ರದೇಶ ಸ್ವಾಧೀನಕ್ಕೆ ಪಡೆಯುತ್ತೇವೆ. ಯಾವುದೇ ಕಾರಣಕ್ಕೂ ಯೋಜನೆ ಹಿಂಪಡೆಯಲು ಸಾಧ್ಯವಿಲ್ಲ. ಮೆಟ್ರೊ ಹಾಗೂ ಟನಲ್ ರಸ್ತೆ ವಿನ್ಯಾಸ ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಗತ್ಯವಿರುವ ಮಿಲಿಟರಿ, ಖಾಸಗಿ ಜಾಗ ಎಷ್ಟು ಎಂಬುದನ್ನು ಚರ್ಚಿಸಿದ್ದೇವೆ. ಟಿಡಿಆರ್ ಅಥವಾ ಎಫ್‌ಎಆರ್ ಮೂಲಕ ಪರಿಹಾರ ನೀಡಲು ಬದ್ಧವಾಗಿದ್ದೇವೆ. ಜಾಗ ಬಿಟ್ಟು ಕೊಡಲು ಸಿದ್ಧವಿಲ್ಲ, ಟನಲ್ ನಿರ್ಮಾಣಕ್ಕೆ ಟೆಂಡರ್ ಕರೆಯಬೇಕಿದ್ದು, ಅಗತ್ಯವಿರುವ ಜಾಗ ವಿಚಾರವಾಗಿ ಸಭೆ ಮಾಡಿದ್ದೇವೆ. **–ಡಿ.ಕೆ.ಶಿವಕುಮಾರ್**

ಇಂದಿನಿಂದ ಪುಸ್ತಕ ದಾಸ್ತಾನು ಪರಿಶೀಲನೆ

ಮೈಸೂರು, ಮೇ 5– ಮೈಸೂರು ನಗರ ಕೇಂದ್ರ ಗ್ರಂಥಾಲಯ ಕಚೇರಿಯ ಅಧೀನ ಕುವೆಂಪು ಸಂಚಾರಿ ಗ್ರಂಥಾಲಯದ 2024–25ನೇ ಸಾಲಿನ ಪುಸ್ತಕ ದಾಸ್ತಾನು ಪರಿಶೀಲನೆ ಕಾರ್ಯವನ್ನು ಮೇ 6ರಿಂದ ಮೇ 14ರವರೆಗೆ ಕೈಗೊಳ್ಳಲಾಗುತ್ತಿದ್ದು, ಸದರಿ ದಿನಗಳಂದು ಸಾರ್ವಜನಿಕರಿಗೆ ಗ್ರಂಥಾಲಯ ಸೇವೆಯನ್ನು ತಾತ್ಕಾಲಿಕವಾಗಿ ಒದಗಿಸಲು ಸಾಧ್ಯವಾಗುವುದಿಲ್ಲ. ಕಾರಣ ಸಾರ್ವಜನಿಕ ಓದುಗರು ಸಹಕರಿಸಬೇಕಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ರೈಲ್ವೆ ಪಿಂಚಣಿದಾರರ ಮಾಸಿಕ ಸಭೆ


ಮೈಸೂರು, ಮೇ 5– ರೈಲ್ವೆ ಪಿಂಚಣಿದಾರರ ಮಾಸಿಕ ಸಭೆ ಮೇ 10ರಂದು ಬೆಳಗ್ಗೆ 11.30ಕ್ಕೆ ರೈಲ್ವೆ ಪಿಂಚಣಿದಾರರ ಸಂಘದ ಆವರಣದಲ್ಲಿ ನಡೆಯಲಿದೆ.

ಸಂಘದ ಪ್ರಧಾನ ಕಾರ್ಯದರ್ಶಿ ಸ್ವಾಮಿ ನಾಥನ್ ಸಂಘದ ಚಟುವಟಿಗಳ ಬಗ್ಗೆ ತಿಳಿಸಿಕೊಡುವರು. ಇದೇ ವೇಳೆ ಲೆಕ್ಕಾಧಿಕಾರಿ ಎಸ್.ಸುಬ್ರಮಣ್ಯಂ ಅವರನ್ನು ಸನ್ಮಾನಿಸಲಾಗುವುದು. ಸಂಘದ ಅಧ್ಯಕ್ಷ ಪಾರ್ಥಸಾರಥಿ ಸಭೆಯನ್ನು ಉದ್ದೇಶಿಸಿ, ಮಾತನಾಡುವರು.

ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು, ಮೇ 5–ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಮೇ 7ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ ವರೆಗೆ ಕರಕನಹಳ್ಳಿ, ಯಾಚೇಗೌಡನಹಳ್ಳಿ, ದಡದಕಲ್ಲಹಳ್ಳಿ, ಹೊಸಕೋಟೆ, ಗುಂಗ್ರಾಲ್‌ಛತ್ರ, ರಾಮೇನಹಳ್ಳಿ, ಚಿಕ್ಕನಹಳ್ಳಿ, ಹುಂಡವಾಡಿ, ಮೇಗಳಾಪುರ, ರಟ್ನಳ್ಳಿ, ಇಲವಾಲ, ಆನಂದೂರು, ಯಡಹಳ್ಳಿ, ಈರೇಗೌಡನ ಕೊಪ್ಪಲು, ಚಿಕ್ಕೆಗೌಡನಕೊಪ್ಪಲು, ಆನಂದಸಾಗರ, ಪ್ರಗತಿನಗರ, ವಿನಾಯಕ ಗಾರ್ಡನ್ ಸಿಟಿ, ಭೂಮಿಕ ಗಾರ್ಡನ್, ಲಿಂಗದೇವರ ಕೊಪ್ಪಲು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ರಾಮಕೃಷ್ಣನಗರದಲ್ಲಿ ಶಂಕರಾಚಾರ್ಯರ ಪ್ರತಿಮೆ ಮೆರವಣಿಗೆ



ಮೈಸೂರಿನ ರಾಮಕೃಷ್ಣನಗರದಲ್ಲಿ ಶಂಕರ ಜಯಂತಿ ಪ್ರಯುಕ್ತ ಶಂಕರಾಚಾರ್ಯರ ಪ್ರತಿಮೆಯ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು.

ಮೈಸೂರು,ಮೇ5–ಮೈಸೂರಿನ ರಾಮಕೃಷ್ಣ ಶಾರದಾದೇವಿ ವಿಪ್ರವೃಂದ ವತಿಯಿಂದ ರಾಮಕೃಷ್ಣನಗರದಲ್ಲಿ ಶಂಕರ ಜಯಂತಿ ಪ್ರಯುಕ್ತ ಶಂಕರಾಚಾರ್ಯರ ಪ್ರತಿಮೆ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು.

ಸಾಯಿಬಾಬಾ ದೇವಸ್ಥಾನದ ಮುಂಭಾಗ ಶಂಕರಾಚಾರ್ಯರ ಮೂರ್ತಿ ಹೊತ್ತ ವಾಹನಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠ ಕುಮಾರ್, ನವೀನ್‌ಕುಮಾರ್ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ.ಲಕ್ಷ್ಮೀದೇವಿ ಚಾಲನೆ ನೀಡಿದರು.


ರಾಮಕೃಷ್ಣನಗರದ ದಕ್ಷಿಣೇಶ್ವರ ಮುಖ್ಯ ರಸ್ತೆಯಲ್ಲಿ ಹರ ಹರ ಶಂಕರ ಜಯ ಜಯ ಶಂಕರ ಘೋಷಣೆಯೊಂದಿಗೆ ಮೆರವಣಿಗೆಯು ಸಾಗಿ, ಒಳ ರಸ್ತೆಗಳಲ್ಲಿ ಚಲಿಸಿ ಯೋಗ ಉದ್ಯಾನವನದಲ್ಲಿ ಪ್ರಸಾದ ವಿನಿಯೋಗದೊಂದಿಗೆ ಅಂತ್ಯಗೊಂಡಿತು.

ರಾಮಕೃಷ್ಣ ಶಾರದಾದೇವಿ ವಿಪ್ರವೃಂದದ ಅಧ್ಯಕ್ಷ ರಾಕೇಶ್ ಭಟ್ ಮಾತನಾಡಿ, ಶಂಕರಾಚಾರ್ಯರು 8ನೇ ವಯಸ್ಸಿಗೆ ಸನ್ಯಾಸ ಸ್ವೀಕರಿಸಿ 16ನೇ ವಯಸ್ಸಿಗೆ ಉಪನಿಷತ್ತುಗಳ ಮೇಲೆ ಭಾಷ್ಯ, ಸ್ತೋತ್ರಗಳು ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿ, ದೇಶವನ್ನು ಕಾಲ್ನಡಿಗೆಯಲ್ಲಿ ಪರ್ಯಟನೆ ಮಾಡಿದವರು. ಅದ್ವೈತ ತತ್ವದ ಮೂಲಕ ಎಲ್ಲಾ ಮನುಷ್ಯರು ಬ್ರಹ್ಮನ ಭಾಗವೇ ಆಗಿರುವುದರ ಬಗ್ಗೆ ಅರಿವು ಮೂಡಿಸಿದರು. ಭಾರತದ ಆಧ್ಯಾತ್ಮ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದು, ಧಾರ್ಮಿಕವಾಗಿಯೂ ದೊಡ್ಡ ಕೊಡುಗೆ ಅವರದ್ದಾಗಿದೆ. ಅನ್ಯ ಮತಗಳ ಪ್ರಭಾವ ತಗ್ಗಿಸಲು ಸಾಕ್ಷಾತ್ ಶಿವನೇ ಶಂಕರರಾಗಿ ಧರೆಗಿಳಿದಿರುವ ನಂಬಿಕೆ ಹಿಂದೂಗಳಲ್ಲಿದೆ ಎಂದು ನುಡಿದರು.

ವಿಪ್ರ ಮಹಿಳಾ ಸಂಗಮ, ನಾಗಲಕ್ಷ್ಮಿ, ಶ್ರೀದೇವಿ, ವೇದವ್ಯಾಸ ಭಜನಾ ಮಂಡಳಿಗಳ ಹಾಗೂ ಶನಿಮಹಾತ್ಮ ದೇವಸ್ಥಾನದ ಭಕ್ತ ಮಹಿಳೆಯರು ಶಂಕರಾಚಾರ್ಯ ವಿರಚಿತ ಭಜನೆಗಳನ್ನು ಹಾಡಿದರು.

ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಶ್ರೀನಿವಾಸ್ ಪ್ರಸಾದ್, ಕಾರ್ಯದರ್ಶಿ ಎ.ರಾಘವೇಂದ್ರ, ಮಹಿಳಾ ಮುಖಂಡರಾದ ವಿಜಯಾ ಮಂಜುನಾಥ್, ಶಾಂತ, ಸೌಭಾಗ್ಯಮೂರ್ತಿ, ಬ್ರಾಹ್ಮಣ ಯುವ ವೇದಿಕೆಯ ವಿಕ್ರಂ ಅಯ್ಯಂಗಾರ್, ರಾಮಾನುಜ ಸಹಕಾರ ಬ್ಯಾಂಕಿನ ನಿರ್ದೇಶಕ ಟಿ.ಎಸ್. ಅರುಣ್, ಶ್ರೀರಾಮಚಂದ್ರಾಪುರ ಮಠದ ಹವ್ಯಕ ಮಹಾಮಂಡಲದ ಕೃಷ್ಣ ಹೆಗ್ಡೆ, ಕೊಕ್ಕಡ ವೆಂಕಟರಮಣ ಭಟ್, ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕರಾದ ಎಸ್.ರಂಗನಾಥ್, ಬ್ರಾಹ್ಮಣ ಮುಖಂಡರಾದ ಸತ್ಯನಾರಾಯಣ, ಮಿರ್ಲೆ ಫಣೀಶ್, ಆನಂದ್ ಶರ್ಮಾ, ಶ್ರೀಕಾಂತ್ ಕಶ್ಯಪ್, ಕುಂಚಿಟಿಗರ ಸಂಘದ ನಿರ್ದೇಶಕ ಎನ್.ದೀಪಕ್, ಬಿಜೆಪಿ ಮುಖಂಡರಾದ ಚಂದ್ರಶೇಖರ ಸ್ವಾಮಿ, ಸಿದ್ದೇಶ್, ತ್ಯಾಗರಾಜ್ ನಾಯಕ್, ರಂಗೇಶ್, ದೇವರಾಜ್, ಕಾಂತರಾಜ ಅರಸು, ಗೋಪಾಲ್, ಪುಟ್ಟಮ್ಮಣ್ಣಿ, ಮಂಜುಳಾ, ವಿಜಯಾ ನಂಜುಂಡಯ್ಯ, ವಿಶ್ವ ಹಿಂದೂ ಪರಿಷತ್ ನಗರ ಉಪಾಧ್ಯಕ್ಷರಾದ ಜಗದೀಶ್ ಹೆಬ್ಬಾರ್, ಕಾಂಗ್ರೆಸ್ ಮುಖಂಡ ರಾಜೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.05.2025 ಮಂಗಳವಾರ, ಮಳೆ ನಕ್ಷತ್ರ: ಭರಣಿ 27.04.2025ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಸೃಜನಶೀಲ ಬರವಣಿಗೆ ಮತ್ತು ರಂಗಭೂಮಿ ಕುರಿತು ಕಾರ್ಯಾಗಾರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಪ್ರೊ. ವಿಕ್ರಂ ರಾಜ್ ಅರಸ್, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಗೌರವ ಅತಿಥಿಗಳು : ಪ್ರಿನ್ಸಿಪಾಲ್ ಡಾ. ಎಂ. ಪ್ರಭು, ಸಂಚಾಲಕರಾದ ಡಾ. ಶೋಭಾ, ಸ್ಥಳ:ಸೆಮಿನಾರ್ ಹಾಲ್, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ನೇಗಿಲಯೋಗಿ ವಿದ್ಯಾವರ್ಧಕ ಸ್ಪರ್ಧಾ ಕೇಂದ್ರ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು :** ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಅರಿವು ಕಾರ್ಯಕ್ರಮ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ. ಬಿ. ಚಂದ್ರಶೇಖರ್, ಉದ್ಘಾಟನೆ : ಸಹಾಯಕ ಪೊಲೀಸ್ ಆಯುಕ್ತರಾದ ಶ್ರೀಮತಿ ಸ್ನೇಹರಾಜ್, ಮುಖ್ಯ ಅತಿಥಿಗಳು : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ. ಅಬ್ದುಲ್ ರಹಿಮನ್, ಕೇಂದ್ರದ ಸಂಯೋಜಕ ಡಾ. ಎಂ.ಬಿ. ಸುರೇಶ್, ಗೌರವ ಸಲಹೆಗಾರ ಡಿ. ರವಿಕುಮಾರ್, ಸ್ಥಳ: ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ :** ಮಹಿಳಾ ಸಾಧಕರಿಗೆ ಸನ್ಮಾನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಸನ್ಮಾನಿತರು : ಶ್ರೀಮತಿ ಕಾತ್ಯಾಯಿನಿ, ಶ್ರೀಮತಿ ನಂಜಮ್ಮ, ಉಪಸ್ಥಿತರು : ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಜೆಎಸ್‌ಎಸ್ ಕಾನೂನು ಕಾಲೇಜು, ಕುವೆಂಪುನಗರ, ಸಂಜೆ 4.30ಕ್ಕೆ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ–2025 ಮತ್ತು ರಾಜಗೋಪುರಕ್ಕೆ ಭೂಮಿಪೂಜೆ, ಬೆಳಗ್ಗೆ 9ಕ್ಕೆ ಚತುಸ್ಥಾನಾರ್ಚನ ಪೂರ್ವಕ ನಿತ್ಯಹೋಮ, ಮಹಾಸುದರ್ಶನ ಹೋಮ, ಪೂರ್ಣಾಹುತಿ, ಗರುಡೋತ್ಸವ, ಸಂಜೆ 6ಕ್ಕೆ ರುಕ್ಮಿಣಿ ಕಲ್ಯಾಣೋತ್ಸವ, ಲಾಜಾ ಹೋಮ, ಸ್ಥಳ: ದೇವಸ್ಥಾನದ ಪ್ರಾಂಗಣ, 3ನೇ ಹಂತ, ಗೋಕುಲಂ.

■ **ದಿಆರ್ಟ್‌ಆಫ್ ಲಿವಿಂಗ್ ಸಂಸ್ಥೆ:** ಮೈಸೂರಿಗೆ ಸೋಮನಾಥನ ಆಗಮನ, ಅಪರೂಪದ ಆಯಸ್ಕಾಂತೀಯ ಗುಣವುಳ್ಳ ಸೋಮನಾಥ ಜ್ಯೋತಿರ್ಲಿಂಗದ ದರ್ಶನ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಜೆಎಸ್‌ಎಸ್ ಆಯುರ್ವೇದ ಕಾಲೇಜಿನ ಪಕ್ಕ, ಲಲಿತಾದ್ರಿಪುರ ರಸ್ತೆ, ಸಂಜೆ 5 ರಿಂದ.

■ **ಅದಮ್ಯ ರಂಗಶಾಲೆ :** ಬಾಲಂಗೋಚಿ, ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ, ನಿತ್ಯ ಸಚಿವ ಕೆ.ವಿ. ಶಂಕರಗೌಡ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಪ್ರಶಸ್ತಿ ಪ್ರದಾನ : ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ : ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ಆಶಯ ನುಡಿ : ಸಾಹಿತಿ ಟಿ.ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು : ಪೊಲೀಸ್ ಅಧೀಕ್ಷಕ ಡಾ.ಎ.ಎನ್.ಪ್ರಕಾಶ್‌ಗೌಡ, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಡಳಿತಾಧಿಕಾರಿ ಡಾ.ಎ.ಟಿ.ಶಿವರಾಮ್, ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷ ಮೆಲ್ಲಹಳ್ಳಿ ಮಹದೇವಸ್ವಾಮಿ, ಕೆ.ವಿ.ಶಂಕರಗೌಡ ಸಮಾಜಸೇವಾ ಪ್ರಶಸ್ತಿ ಪುರಸ್ಕೃತರು: ಹಿರಿಯ ಪತ್ರಕರ್ತ ಸಿ.ಕೆ.ಮಹೇಂದ್ರ, ಪೊಲೀಸ್ ಉಪಾಧೀಕ್ಷಕ ಶಾಂತಮಲ್ಲಪ್ಪ, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ರಾಜ್ಯ ಖಜಾನೆ ಇಲಾಖೆ ಹೆಚ್ಚುವರಿ ನಿರ್ದೇಶಕರಾದ ಶ್ರೀಮತಿ ವಿ.ಭಾಗ್ಯಲಕ್ಷ್ಮಿ, ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ. ಲಿಂಗರಾಜು, ಉದ್ಯಮಿ ಸಂಜಯ್ ಹೆಬ್ಬಾರ್, ಜೀ ಟಿವಿ ರಿಯಾಲಿಟಿ ಶೋನ ಸಿನಿಮಾ ಬರಹಗಾರ ಲೋಕೇಶ್‌ಗೌಡ ಮಂಡ್ಯ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾ ಧರಿಸಿದ ಬಾನುಲಿ ಸರಣಿ, ಗಾಯನ–ಕೆ.ಟಿ. ಉದಯಕಿರಣ್, ಎಂ.ಡಿ. ಸುಮತಿ ಮುರಾರಿ, ವ್ಯಾಖ್ಯಾನ – ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು.ಪ್ರಸ್ತುತಿ: ಉಮೇಶ್. ಎಸ್. ಎಸ್., 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಕೇಶವಚಂದ್ರ–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ :ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್. ಎಂ. ಎಸ್.

ಮಧ್ಯಾಹ್ನ: 12.05 ವನಿತಾ ವಿಹಾರ–ಗೃಹಿಣಿಯು ಸೂಪರ್ ವುಮೆನ್ ಕುರಿತು ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ : ಕೆ.ನೇತ್ರಾ, 12.35 ದೇವರನಾಮ– ವೀಣಾ. ಎನ್.ಮೂರ್ತಿ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು – ಸಿ.ವಿಶ್ವನಾಥ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಹೈದರಾಬಾದ್ ಸಹೋದರರು–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ – ರಾಮಾಯಣ ಬಾಲಕಾಂಡ, ಪ್ರಸ್ತುತಿ–ವಿದ್ವಾನ್. ಆರ್.ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃ ಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಜೈವಿಕ ಕೀಟನಾಶಕಗಳ ಬಳಕೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ ಕೃಷಿ ಮಹಾವಿದ್ಯಾಲಯದ ಸಹಪ್ರಾಧ್ಯಾಪಕರಾದ ಡಾ. ಎಲ್.ವಿಜಯ್ ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ನಾಟಕ–ಧ್ರುವಸ್ವಾಮಿನಿ – ಜಯಶಂಕರ್ ಪ್ರಸಾದ್ ಅವರ ಹಿಂದಿ ನಾಟಕ ಪ್ರೇರಿತ, ರಚನೆ–ಡಾ. ವಿ. ಸೌಭಾಗ್ಯಲಕ್ಷ್ಮಿ, ನಿರ್ಮಾಣ –ಪ್ರಭುಸ್ವಾಮಿ ಮಳಿಮಠ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಲಾಲ್‌ಗುಡಿ ಕೃಷ್ಣನ್ ಮತ್ತು ಲಾಲ್‌ಗುಡಿ ವಿಜಯಲಕ್ಷ್ಮಿ – ಯುಗಳ ವೈಯೋಲಿನ್ ವಾದನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ : ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಮೈಸೂರು ಮಿತ್ರ ಮಂಗಳವಾರ 6 ಮೇ 2025

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಡಿಸ್ಚಾರ್ಜ್ ಆದ ನಟ ಉಪೇಂದ್ರ

ಬೆಂಗಳೂರು, ಮೇ.5– ನಟ, ನಿರ್ದೇಶಕ ಉಪೇಂದ್ರ ಅವರ ಆರೋಗ್ಯದಲ್ಲಿ ಸೋಮವಾರ (ಮೇ 5) ಏರುಪೇರಾಗಿದ್ದು, ಕೂಡಲೇ ಅವರನ್ನು ಬೆಂಗಳೂರಿನ ಸ್ಪರ್ಶ್ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಆದರೆ ಸ್ವಲ್ಪ ಹೊತ್ತು ಚಿಕಿತ್ಸೆ ನೀಡಿದ ಬಳಿಕ ಆರೋಗ್ಯದಲ್ಲಿ ಚೇತರಿಕೆ ಕಂಡು ಅವರನ್ನು ಕೆಲವೇ ಗಂಟೆಗಳಲ್ಲಿ ಡಿಸ್ಚಾರ್ಜ್ ಮಾಡಿ, ಮನೆಗೆ ಕಳಿಸಲಾಗಿದೆ.



ಅತಿಯಾದ ಆಸಿಡಿಟಿ ಉಂಟಾಗಿದ್ದರಿಂದ ಉಪೇಂದ್ರ ಅವರ ಆರೋಗ್ಯದಲ್ಲಿ ಏರುಪೇರು ಆಗಿತ್ತು ಈ ಮೊದಲು 'ಯುಐ' ಸಿನಿಮಾದ ಶೂಟಿಂಗ್ ಸಂದರ್ಭದಲ್ಲಿ ಕೂಡ ಉಪೇಂದ್ರ ಅವರು ಇದೇ ಸಮಸ್ಯೆ ಎದುರಿಸಿದ್ದರು.

ಕನ್ನಡಿಗರ ಕ್ಷಮೆ ಕೇಳಿದ ಸೋನು ನಿಗಮ್

ಬೆಂಗಳೂರು: ಕನ್ನಡ ಹಾಡಿಗಾಗಿ ಒತ್ತಾಯ ಮಾಡಿದಾಗ ಅದನ್ನು ಪಹಲ್ಗಾಮ್ ದಾಳಿಗೆ ತಳುಕು ಹಾಕಿ ಕನ್ನಡಿಗರಿಗಿಂದ ಭಾರಿ ವಿರೋಧ ಎದುರಿಸಿದ ಗಾಯಕ ಸೋನು ನಿಗಮ್ ಕ್ಷಮೆ ಯಾಚಿಸಿದ್ದಾರೆ. ಈ ಬಗ್ಗೆ ಇನ್‌ಸ್ಟಾಗ್ರಾಮ್‌ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. 'Sorry Karnataka, ನಿಮ್ಮ ಮೇಲಿನ ನನ್ನ ಪ್ರೀತಿ ಅಹಂಗಿಂತ ದೊಡ್ಡದು. ಯಾವಾಗಲೂ ನಿಮ್ಮನ್ನು ಪ್ರೀತಿಸುವೆ ಎಂದು ಬರೆದುಕೊಂಡಿದ್ದಾರೆ.



ಏನಿದು ಘಟನೆ: ಖಾಸಗಿ ಸಂಸ್ಥೆಯೊಂದು ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಸೋನು ನಿಗಮ್ ಕನ್ನಡ ಕುರಿತು ಆಡಿದ ಮಾತು ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಯುವಕನೊಬ್ಬ ಕನ್ನಡ ಹಾಡಿಗಾಗಿ ಒತ್ತಾಯ ಮಾಡಿದಾಗ ಅದನ್ನು ಪಹಲ್ಗಾಮ್ ದಾಳಿಗೆ ತಳಕು ಹಾಕಿ ಗಾಯಕ ಮಾತನಾಡಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

ಸಿಬಿಐ ನಿರ್ದೇಶಕರ ನೇಮಕಾತಿ; ಪ್ರಧಾನಿ ಮೋದಿ ಕಚೇರಿಗೆ ರಾಹುಲ್ ಗಾಂಧಿ ಭೇಟಿ

ನವದೆಹಲಿ, ಮೇ.5– ಕೇಂದ್ರೀಯ ತನಿಖಾ ದಳದ (ಸಿಬಿಐ) ಮುಂದಿನ ನಿರ್ದೇಶಕರ ನೇಮಕಾತಿಗಾಗಿ ವಿರೋಧ ಪಕ್ಷದ ನಾಯಕ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಮಂತ್ರಿ ಕಚೇರಿಗೆ ಆಗಮಿಸಿ, ಸಭೆಯಲ್ಲಿ ಭಾಗಿಯಾದರು. ಸಿಬಿಐ ನಿರ್ದೇಶಕರ ನೇಮಕಾತಿಯನ್ನು ಕೇಂದ್ರ ಸರ್ಕಾರವು ಮೂವರು ಸದಸ್ಯರ ನೇಮಕಾತಿ ಸಮಿತಿಯ ಶಿಫಾರಸಿನ ಮೇರೆಗೆ ಮಾಡುತ್ತದೆ. ಪ್ರಧಾನ ಮಂತ್ರಿ ನೇತೃತ್ವದ ಈ ಸಮಿತಿಯು ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿ ಅಥವಾ ಅವರಿಂದ ನಾಮನಿರ್ದೇಶನಗೊಂಡ ಸುಪ್ರೀಂಕೋರ್ಟ್ ನ್ಯಾಯಾಧೀಶರನ್ನು ಒಳಗೊಂಡಿರುತ್ತದೆ. ಕೋರ್ಟ್ ನಿರ್ದೇಶನಗಳ ಪ್ರಕಾರ 6 ತಿಂಗಳಿಗಿಂತ ಕಡಿಮೆ ಅವಧಿಯ ಯಾವುದೇ ಅಧಿಕಾರಿಯನ್ನು ಸಿಬಿಐ ನಿರ್ದೇಶಕ ಹುದ್ದೆಗೆ ಪರಿಗಣಿಸಲಾಗುವುದಿಲ್ಲ. ನಿರ್ದೇಶಕರ ಅಧಿಕಾರಾವಧಿ 2 ವರ್ಷಗಳಿಗಿಂತ ಕಡಿಮೆ ಇರಬಾರದು ಮತ್ತು ನೇಮಕಾತಿ ಸಮಿತಿಯ ಒಪ್ಪಿಗೆಯೊಂದಿಗೆ ಮಾತ್ರ ವರ್ಗಾವಣೆ ಮಾಡಬಹುದು ಎಂದು ನ್ಯಾಯಾಲಯ ಹೇಳಿದೆ.



ಪ್ರಧಾನಿ ಕಚೇರಿಯಲ್ಲಿ ನಡೆದ ಸಭೆ ನೇಮಕಾತಿ ಪ್ರಕ್ರಿಯೆಯಲ್ಲಿ ಒಂದು ಪ್ರಮುಖ ಬೆಳವಣಿಗೆಯಾಗಿದ್ದು, ಸಿಜೆಐ ಸಂಜೀವ್ ಖನ್ನಾ, ಎಲ್‌ಒಪಿ ಮತ್ತು ರಾಹುಲ್ ಗಾಂಧಿ ಚರ್ಚೆಗಳಲ್ಲಿ ಭಾಗವಹಿಸಿದ್ದರು. ಪ್ರಸ್ತುತ ಸಿಬಿಐ ನಿರ್ದೇಶಕ ಪ್ರವೀಣ್ ಸೂದ್ ಅವರ ಅಧಿಕಾರಾವಧಿ ಮೇ 25 ರಂದು ಕೊನೆಗೊಳ್ಳಲಿದೆ. 1986 ರ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಅಧಿಕಾರಿ ಪ್ರವೀಣ್ ಸೂದ್, ಮೇ 2023 ರಲ್ಲಿ ಕೇಂದ್ರ ತನಿಖಾ ಸಂಸ್ಥೆಯ ಅಧಿಕಾರ ವಹಿಸಿಕೊಂಡರು.

ಪ್ರಕ್ಷುಬ್ಧ ಬಲೂಚಿಸ್ತಾನ ಪ್ರಾಂತ್ಯದಲ್ಲಿ 19 ಮಂದಿ ಸಾವು

ಇಸ್ಲಾಮಾಬಾದ್: ಇರಾನ್ ಹಾಗೂ ಅಫ್ಘಾನಿಸ್ತಾನದ ಗಡಿಯಲ್ಲಿರುವ ನೈಋತ್ಯ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಉಗ್ರಗಾಮಿಗಳು ಹಾಗೂ ಪಾಕ್ ಸೇನೆ ನಡುವಿನ ಗುಂಡಿನ ಕಾಳಗ ಪ್ರತಿದಿನ ನಡೆಯುತ್ತಿದ್ದು, ದೀರ್ಘ ಕಾಲದಿಂದ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ನಡೆದ ಗುಂಡಿನ ಕಾಳಗದಲ್ಲಿ 10 ಮಂದಿ ಸೈನಿಕರು ಮೃತಪಟ್ಟಿದ್ದರು.

ಈ ಮಧ್ಯೆ, ನೈಋತ್ಯ ಪಾಕಿಸ್ತಾನದಲ್ಲಿ ತೈಲ ಟ್ಯಾಂಕರ್ ಸ್ಫೋಟದಿಂದ ಮೃತಪಟ್ಟವರ ಸಂಖ್ಯೆ 19ಕ್ಕೆ ಏರಿದೆ ಎಂದು ಘಟನೆಯ ಒಂದು ವಾರದ ನಂತರ ಅಧಿಕಾರಿಗಳು ತಿಳಿಸಿದ್ದಾರೆ.

ಮಾರುಕಟ್ಟೆಯೊಂದರ ಬಳಿ ತೈಲ ಟ್ಯಾಂಕರ್ ಸ್ಫೋಟಗೊಂಡ ನಂತರ ಬೆಂಕಿಯನ್ನು ನಂದಿಸಲು ಭಾರಿ ಜನಸ್ತೋಮ ನೆರೆದಿತ್ತು. ಈ ವೇಳೆ 40ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ, ಅವರಲ್ಲಿ ಅನೇಕರನ್ನು ಚಿಕಿತ್ಸೆಗಾಗಿ ಮೆಗಾ ಸಿಟಿ ಕರಾಚಿಗೆ ಸಾಗಿಸಲಾಯಿತು. ಸಾವಿನ ಸಂಖ್ಯೆ 19ಕ್ಕೆ ಏರಿದೆ ಎಂದು ಸ್ಥಳೀಯ ಪೊಲೀಸ್ ಅಧಿಕಾರಿ ಮುಹಮ್ಮದ್ ಹಸನ್ ಮೆಂಗಲ್ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ ತೋಟಗಾರಿಕೆ ಇಲಾಖೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ರಾಜ್ಯವಲಯ ಕಚೇರಿ, ಹಾಸನ

email:sadhsshsn@gmail.com Ph: 08172-269995

ಸಂ:ಹಿಸತೋನಿ:ರಾವ:ಹಾ:ತಾಸ:05:2025–26 ದಿನಾಂಕ: 03.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ: ಗೋನಿಯೋಜಸ್ ಪರೋಪಜೀವಿ ಉತ್ಪಾದನೆಗೆ ಮಾನವ ಸಂಪನ್ಮೂಲ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಕರೆಯುವ ಬಗ್ಗೆ. ಹಾಸನ ಜಿಲ್ಲೆಯ ಅರಸೀಕೆರೆ ಹಾಗೂ ಹೊಳೆನರಸೀಪುರ ಪ್ರಯೋಗಶಾಲೆಗಳಲ್ಲಿ 2025–26ನೇ ಸಾಲಿನ ತೆಂಗು ಬೆಳೆಗೆ ತಗಲುವ ಕಪ್ಪು ತಲೆ ಹುಳುವಿನ ಬಾಧೆಯನ್ನು ಜೈವಿಕವಾಗಿ ಹತೋಟಿ ಮಾಡಲು ಗೋನಿಯೋಜಸ್ ಪರೋಪಜೀವಿಗಳನ್ನು ಉತ್ಪಾದನೆ ಮಾಡಿಕೊಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2001ರ ಪ್ರಕಾರ, ದ್ವಿ–ಲಕೋಟೆಯಲಿ (Two cover system) ಮೊಹರು ಪದ್ಧತಿಯಲ್ಲಿ ಅನುಭವವುಳ್ಳ ಸಂಸ್ಥೆಗಳಿಂದ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 17.05.2025 ಆಗಿರುತ್ತದೆ. ಹೆಚ್ಚಿನ ಮಾಹಿತಿಗೆ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ರಾಜ್ಯವಲಯ, ಹಾಸನ.

ವಾಇಸಂಇ/ಹಿಸನಿ/ಹಾಸನ/71/ಕಿಎಸ್ಎಂಸಿಎ/2025–26

ದಿ ಮೈಸೂರು ಕಾಫಿ ಸಂಸ್ಕರಣಾ ಸಹಕಾರ ಸಂಘ ನಿ,

ಕೆ.ಆರ್.ಎಸ್. ರಸ್ತೆ, ಯಾದವಗಿರಿ, ಮೈಸೂರು.

ಕ್ರಸಂ: ಎಂಸಿಪಿಸಿಎಸ್ ನಿ/ಪ್ರಕಟಣೆ /2/2025–26 ದಿನಾಂಕ: 28–04–2025

ಪ್ರಕಟಣೆ

2024–25ನೇ ಸಾಲಿನ ವಿಶೇಷ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆ

ಮೇಲ್ಕಂಡ ಸಂಘದ 2024–25ನೇ ಸಾಲಿನ ವಿಶೇಷ ಸರ್ವ ಸದಸ್ಯರ ಸಭೆಯನ್ನು ದಿನಾಂಕ: 09–05–2025 ಶುಕ್ರವಾರ ಸಮಯ: ಪೂರ್ವಾಹ್ನ 11.00 ಗಂಟೆಗೆ ಸಂಘದ ಕಛೇರಿ ಆವರಣದಲ್ಲಿ ಶ್ರೀ ಎ.ಎಸ್ ಪೊನ್ನಣ್ಣ, ಅಧ್ಯಕ್ಷರು, ಮಾನ್ಯ ಶಾಸಕರು, ವಿರಾಜಪೇಟೆ ಕ್ಷೇತ್ರ ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಕಾನೂನು ಸಲಹೆಗಾರರು–ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಭೆಯ ಆಹ್ವಾನ ಪತ್ರಿಕೆ ತಲುಪದೆ ಇದ್ದವರು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡಲು ಕೋರಿದೆ.

ಅಧ್ಯಕ್ಷರು/ಉಪಾಧ್ಯಕ್ಷರ ಅನುಮತಿಯ ಮೇರೆಗೆ

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ
ದಿ ಮೈಸೂರು ಕಾಫಿ ಸಂಸ್ಕರಣಾ ಸಹಕಾರ ಸಂಘ ನಿ, ಮೈಸೂರು.

ಇಮೇಲ್: mcpcs1959@gmail.com
ಮೊ. ನಂ. 9845807364

RIFA-HUL-MUSLIMEEN EDUCATIONAL TRUST (Regd), MYSORE.

FAROOQIA POLYTECHNIC for WOMEN

(Recognised by Govt. of Karnataka & Approved by AICTE New Delhi)

ADMISSION NOTICE FOR 2025 -26

DIPLOMA IN ENGINEERING

APPLICATIONS ARE INVITED FOR DIRECT ADMISSION TO THE DIPLOMA. FOR GIRLS PASS IN SSLC.

NOTE: FOR ITI & PUC PASS STUDENTS DIRECT ADMISSION TO 3RD SEMESTER / 2ND YEAR, FOR THE FOLLOWING 3 YEARS (6 SEMESTER) COURSES.

1) COMPUTER SCIENCE AND ENGINEERING.
2) ELECTRONICS & COMMUNICATION ENGINEERING.
3) FASHION TECHNOLOGY(A.D.F.T).

RESERVED SEATS : 20% FOR SC & 5% FOR ST.
100% PLACEMENT NO DONATION, WITH EXCELLENT COACHING.

VISITING HOURS: 10:00AM TO 5:00PM.


MR. TAJ MOHAMMED KHAN, Hon. Secretary, RIFA-HUL-MUSLIMEEN EDUCATIONALTRUST (Regd) MYSORE.
Mrs. SEEMA KAUSAR, Principal, Farooqia Polytechic for Women, Mysore

☎: + 91-0821-2448180, 9008691804, 9972005822

FAROOQIA WOMENS' EDUCATIONAL COMPLEX,
Lal Bahadur Shastri Circle, Azeez Sait Road, Udayagiri, MYSORE - 570019
E-Mail : fwp@yahoo.in Website: http://www.fwp.ac.in



GOLDEN OPPORTUNITY FOR GIRL STUDENTS



ನಕ್ಕರೆ ಅದೇ ಸ್ವರ್ಗ

ಗುರು : ಮೀನು ಇಲ್ಲದ ಬಲೆ, ಬೆಂಕಿ ಇಲ್ಲದ ಒಲೆ, ಖಾಲಿ ಇರುವ ನಿನ್ನ ತಲೆ ಇದ್ದರೆಷ್ಟು ಬಿಟ್ಟರೆಷ್ಟು? ಈ ತರಹ ಒಂದು ಉದಾಹರಣೆ ಕೊಡು.

ಶಿಷ್ಯ : ಹೂವಿಲ್ಲದ ತೋಟ, ಸೌಂದರ್ಯವಿಲ್ಲದ ನೋಟ, ಅರ್ಥವಾಗದ ನಿಮ್ಮ ಪಾಠ, ಕೇಳಿದರೆಷ್ಟು, ಬಿಟ್ಟರೆಷ್ಟು.

ಮೈಸೂರು ಮಿತ್ರ

ಮಂಗಳವಾರ, 6 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಂಬಿಕೆ ಇದ್ದರೆ ಮೌನವೂ ಅರ್ಥವಾಗುತ್ತದೆ.
ನಂಬಿಕೆ ಇಲ್ಲದಿದ್ದರೆ ಪ್ರತಿ ಶಬ್ದದಲ್ಲೂ ಅಪಾರ್ಥ ಗೋಚರಿಸುತ್ತದೆ.
ನಂಬಿಕೆ ಎಲ್ಲಾ ಸಂಬಂಧಗಳ ಜೀವಾಳ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಜಾಣನಿಗೆ ಮಾತಿನ ಪೆಟ್ಟು, ದಡ್ಡನಿಗೆ ದೊಣ್ಣೆ ಪೆಟ್ಟು

ನಿಮ್ಮ ಪತ್ರಗಳು

ಪಾಕ್ ಇಬ್ಬಂದಿತನ–ಪಾಕ್ ದೇಶವನ್ನು ನಂಬುವಂತಿಲ್ಲ

ಮಾನ್ಯರೆ,

ಪಾಕ್ ಗಡಿಯಲ್ಲಿ ಯುದ್ಧದ ಭೀತಿ ತಲೆದೋರಿರುವುದು ಸರಿಯಷ್ಟೆ, ಪಾಕ್ ತಾನು ತಪ್ಪು ಮಾಡಿ, ಭಾರತದ ಪಾಕ್ ಗಡಿಯಲ್ಲಿ ಈಗ ತನ್ನ ಸೇನೆಯನ್ನು ನುಗ್ಗಿಸಿದೆ. ಭಾರತ ದೇಶವು ಈ ಕೀಟಲೆಗೆ ಈಗಾಗಲೇ ಸರಿಯಾದ ಉತ್ತರವನ್ನೇ ಕೊಟ್ಟಿದೆ. ಭಾರತದ ಯೋಧರು ಪಾಕ್ ದೇಶದ ಬಂದೂಕಿನ ಧಾಳಿಗೆ ಆ ದೇಶದ ಜನತೆಯೇ ಒಪ್ಪದಿರುವುದು ಆ ದೇಶ ಈಗ ಪೀಕಲಾಟದಿಂದ ತೊಳಲಾಡುತ್ತಿದೆ. ಈಗ ಎಚ್ಚರಗೊಂಡ ಪಾಕಿಸ್ತಾನವು ಒಂದು ವೇಳೆ ಯುದ್ಧ ಸಂಭವಿಸಿದರೆ ತನಗೆ ಉಳಿಗಾಲವಿಲ್ಲ ಎಂಬುದನ್ನು ಮನಗಂಡು ಅಮೇರಿಕಾ ಮತ್ತು ಚೀನಾ ದೇಶಗಳನ್ನು ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸುವಂತೆ ಅಂಗಲಾಚುತ್ತಿದೆ.

ಆ ದೇಶಕ್ಕೆ ತಾನು ಈ ರೀತಿ ನಡೆದುಕೊಳ್ಳುವುದಕ್ಕಿಂತ ಮುಂಚೆ ಬುದ್ಧಿ ಇರಬೇಕಾಗಿತ್ತು ಇಂತಹ ಸಂದರ್ಭದಲ್ಲಿ ನಟಿ ರಮ್ಯಾ ಅವರು ಪಾಕಿಸ್ತಾನದ ಮತ್ತು ಮುಸ್ಲಿಂ ಬಂಧುಗಳ ಮೇಲಿನ ಪ್ರೀತಿಯಿಂದ ಈ ಯುದ್ಧ ಅನಿವಾರ್ಯವೇನೂ ಅಲ್ಲ. ಈಗ ಉಂಟಾಗಿರುವ ಸಮಸ್ಯೆಯನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದು ಎನ್ನುತ್ತಿದ್ದಾರೆ. ಎಷ್ಟಾದರೂ ಅವರು ಕಾಂಗ್ರೆಸ್ ಮಾಜಿ ಸಂಸದೆ ತಾನೆ. ಅದಕ್ಕೋಸ್ಕರವಾಗಿ ಯುದ್ಧ ಅನಿವಾರ್ಯವೇನೂ ಅಲ್ಲ ಎನ್ನುತ್ತಿರುವುದು ನಾಚಿಕೆಗೇಡಿನ ವಿಷಯ. ಭಾರತ ಮತ್ತು ಪಾಕಿಸ್ತಾನದ ನಡುವೆ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸುವಂತೆ ಅಮೇರಿಕಾ, ಚೀನಾ ಮತ್ತು ಇಂಗ್ಲೆಂಡ್ ಮತ್ತು ಗಲ್ಫ್ ದೇಶಗಳನ್ನು ಬೇಡುತ್ತಿದ್ದಾರೆ. ತಾನು ತಪ್ಪು ಹೆಜ್ಜೆಯನ್ನು ಇಡುವ ಮೊದಲು ಯೋಚಿಸಬೇಕಾಗಿತ್ತಲ್ಲವೆ? ನಮ್ಮ ಬಿಎಸ್‌ಎಫ್ ಯೋಧರು ಆ ದೇಶದ ಧಾಳಿಗೆ ಸರಿಯಾದ ಪ್ರತ್ಯುತ್ತರವನ್ನು ನೀಡುತ್ತಿದ್ದಾರೆ. ಈಗ ಇಕ್ಕಟ್ಟಿಗೆ ಸಿಲುಕಿರುವ ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್‌ಗೆ ಬುದ್ಧಿ ಬಂದಿರುವ ಹಾಗೆ ಕಾಣುತ್ತಿದೆ. ಕಾದು ನೋಡೋಣ ಏನಾಗುತ್ತದೆ ಎಂದು.

–ಬೇಲೂರು ದ.ಶಂ.ಪ್ರಕಾಶ್, ಮೈಸೂರು

ಜಾತಿಗಣತಿ ವರದಿ; ಯಾವ ಸಮುದಾಯಕ್ಕೂ ಅನ್ಯಾಯವಾಗಬಾರದು

ಮಾನ್ಯರೇ,

ಮೂರು ದಶಕಗಳ ಅವ್ಯಾಹತ ಹೋರಾಟದ ಫಲವಾಗಿ ಒಳಮೀಸಲಾತಿ



ಜಾರಿಗಾಗಿ ಕರ್ನಾಟಕ ಸರ್ಕಾರ ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಘನತೆವೆತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗ ರಚಿಸಿರುವುದು ಆಶಾದಾಯಕವಾದ ಬೆಳವಣಿಗೆ. ಆದರೆ, ಇದರಿಂದ ನಮಗೆ ನ್ಯಾಯ ಸಿಗುವುದೇ ಎಂಬುದು ಸಂದೇಹಾಸ್ಪದವಾಗಿದೆ. ಹಾಗೆ ನೋಡಿದರೆ, ಈ ಮೊದಲು ಪರಿಶಿಷ್ಟ ಜಾತಿಯ ಉಪಪಂಗಡಗಳಿಗೆ ಒಳಮೀಸಲಾತಿ ನೀಡಲು ನ್ಯಾಯಮೂರ್ತಿ ಸದಾಶಿವ ಆಯೋಗ, ಮಾಧುಸ್ವಾಮಿ ಸಮಿತಿ ಮತ್ತು ಕಾಂಗ್ರೆಸ್ ಸರ್ಕಾರವೇ ರಚನೆ ಮಾಡಿದ್ದ ಕಾಂತರಾಜು ಆಯೋಗ ಜನಸಂಖ್ಯೆಯಲ್ಲಿ ಮಾದಿಗ ಸಮುದಾಯವೇ ಮೊದಲ ಸ್ಥಾನದಲ್ಲಿದೆ ಎಂದು ತಿಳಿಸಿವೆ. ಆದಾಗ್ಯೂ ನಾಗಮೋಹನ್‌ದಾಸ್ ಆಯೋಗ ಪರಿಶಿಷ್ಟ ಜಾತಿಯೊಳಗಿನ ಎಲ್ಲಾ (101) ಜಾತಿಗಳ ನಿಖರ ದತ್ತಾಂಶಕ್ಕಾಗಿ ಇದೇ ಮೇ 5 ರಿಂದ 17 ರವರೆಗೆ ಮೊದಲ ಹಂತದಲ್ಲಿ ಗಣತಿದಾರರ ಮನೆ ಮನೆಗೆ ತೆರಳಿ ದತ್ತಾಂಶಗಳ ಸಂಗ್ರಹಣೆ ಮಾಡಲು ಮಾಧ್ಯಮಗಳ ಮೂಲಕ ಪ್ರಕಟಣೆ ನೀಡಿದೆ. ಜಾತಿ ಸಮೀಕ್ಷೆಗೆ ಬಹುಪಾಲು ಎಲ್ಲ ಸಮುದಾಯದ ಹೋರಾಟಗಾರರು ಸಹಮತ ಸೂಚಿಸಿದ್ದರೂ, ಸರ್ಕಾರವು ಕೆಲವು ನಿರ್ಧಾರಗಳಿಂದ ಒಳಮೀಸಲಾತಿ ಜಾರಿ ಮಾಡಲು ವಿಳಂಬ ನೀತಿಯನ್ನು ಅನುಸರಿಸುತ್ತಿದೆ ಎಂಬ ಶಂಕೆ ನಮಗಿದೆ.

ಇದಕ್ಕೆ ಕಾರಣಗಳು ಹೀಗಿವೆ : ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗದನ್ವಯ ಸಮೀಕ್ಷೆಗೆ ನಿಯೋಜಿಸಿರುವವರಲ್ಲಿ ಬಹುಪಾಲು ಬಲಗೈನವರು ಇರುವುದರಿಂದ, ಎಡಗೈ ಸಮುದಾಯದವರನ್ನೂ ಬಲಗೈನವರೆಂದು (ಹೊಲಯ) ಎಂದು ದಾಖಲಿಸುವ ಸಾಧ್ಯತೆ ಇದೆ. ಹಾಗೆಯೇ ಎಡಗೈನವರು ಹೆಚ್ಚಾಗಿರುವ ಸಮೀಕ್ಷೆದಾರರು ಹೊಲಯ ಸಮುದಾಯದವರನ್ನು ಎಡಗೈನವರೆಂದು ದಾಖಲಿಸಿರುವ ಸಾಧ್ಯತೆಗಳಿವೆ ಎಂದು ಅನುಮಾನಿಸುವ ಸಾಧ್ಯತೆಗಳಿರುವುದರಿಂದ ಇವರಿಬ್ಬರನ್ನೂ ಹೊರತುಪಡಿಸಿ, ಸಮೀಕ್ಷೆ ನಡೆಸಿ ದತ್ತಾಂಶವನ್ನು ಸಂಗ್ರಹಿಸಿದರೆ ಅನುಮಾನಕ್ಕೆ ಆಸ್ಪದ ಇರುವುದಿಲ್ಲ ಎಂಬ ಬಲವಾದ ನಂಬಿಕೆ ನಮ್ಮದು.

ಒಳಮೀಸಲಾತಿಗಾಗಿ ಆರಂಭದಿಂದಲೂ ಹೋರಾಟ ಮಾಡಿದವರು ಮಾದಿಗರು ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಹಾಗೆಯೇ ಹೋರಾಟದಲ್ಲಿ ಪ್ರಾಣ ತೆತ್ತವರೂ ಸಹ ಮಾದಿಗರೇ. ಸಾಮಾಜಿಕವಾಗಿ ಇಂದಿಗೂ ಅವಮಾನ, ದೌರ್ಜನ್ಯವನ್ನು ಅನುಭವಿಸುತ್ತಿರುವುದು ಇದೇ ಜನಾಂಗ. ಒಟ್ಟಾರೆಯಾಗಿ ನ್ಯಾಯಮೂರ್ತಿ ನಾಗಮೋಹನ್ ದಾಸ್‌ರವರ ಆಯೋಗದಿಂದ ನ್ಯಾಯ ಸಮ್ಮತವಾದ ಸಮೀಕ್ಷೆ ಹಾಗೂ ದತ್ತಾಂಶ ಒಳಗೊಂಡ ವರದಿ ನಮ್ಮೆಲ್ಲರ ಅಪೇಕ್ಷೆಯಾಗಿದೆ.

– ಕೃಷ್ಣ, ಸಂಚಾಲಕರು,
ಕರ್ನಾಟಕ ಸಮಾನ ಮನಸ್ಕರ ವೇದಿಕೆ, ಮೈಸೂರು.

ಕಿ(ಕ)ವಿ ಮಾತು!

ಮಾನ್ಯರೇ,

ಗಣತಿಯಲ್ಲಿ, ಜಾತಿ ಹೆಸರನ್ನು
ಸರಿಯಾಗಿ ಬರೆಸಿ ಎಂಬುದು
ಆಯಾಯ ಮುಖಂಡರ
ಕಿವಿಮಾತು..!
ಸಾಧ್ಯವಾದರೆ..
ಜಾತೀಯತೆಯನ್ನೇ
ಅಳಿಸಿ ಎಂಬುದು
ನಮ್ಮ ಕವಿ ಮಾತು !

ಮ.ಗು.ಬಸವಣ್ಣ, ಜೆಎಸ್‌ಎಸ್ ಬಡಾವಣೆ, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಒಂದಲ್ಲ ಒಂದು ಅವಮಾನ ಅನುಭವಿಸಿದವರೇ ಸಾಧಕರು!

ಹುಟ್ಟು ಸಾವಿನ ನಡುವೆ ಚಿಗುರೊಡೆದು ಬಳ್ಳಿ ಹಬ್ಬಿ, ಎತ್ತರದ ಮರವಾಗಿ, ಗೊನೆ ಕಚ್ಚಿ, ಕಾಯಾಗಿ... ಹಾಯಾಗಿ... ಹಣ್ಣಾಗುವ ಭಾವದ ಬೆಳಕು ಈ ಬದುಕು. ಈ ಬದುಕು ಕಂಡಂತೆ ಕಾಣುವ, ಕಾಣದಾ ಮಂದಿಗೆ ಕಾಣೆಯಾಗುವುದು. ಇಂತಹ ಶ್ರೇಷ್ಠವಾದ ಬದುಕಿನಲ್ಲಿ ತನ್ನ ಇರುವಂತಿಕೆಯಲ್ಲಿ ಜನಿಸುವ ನಲಿವಾಗಲಿ, ನೋವಾಗಲಿ ನನಗಿರಲಿ, ನಲಿವನ್ನು ಯಾರಿಗಾದರೂ ಹಂಚುವ ನಾನು ಅಳುವನ್ನು ನಾನೇ ನುಂಗುತ್ತೇನೆ ಎಂಬ ಭರವಸೆಯಲ್ಲಿಯೇ ಇಲ್ಲಿಯತನಕ ತಿಳಿಸುವುದು ಬೇಡವೆಂದು ಸುಮ್ಮನಿದ್ದೆ ಗೆಳೆಯ..... ನಿರಂತರವಾಗಿ ಬದುಕು ಕೊಡುವ ಪೆಟ್ಟುಗಳನ್ನು ತಿಂದು ಗಟ್ಟಿ ಶಿಲೆಯಾಗಿ ರೂಪುಗೊಂಡು ಅನುಭವದಲ್ಲಿ ಹಣ್ಣಾದಂತೆ–ಪ್ರಬುದ್ಧನಂತೆ ಆಡಿದ ಆತನ ನುಡಿಗಳಿಗೆ ಕ್ಷಣ ಕಾಲ ಉತ್ತರಿಸಲಾಗದೇ ಮೂಕಜೀವಿಯಂತೆ ಹಾಗೆಯೇ ನಿಂತುಬಿಟ್ಟೆ.



ಬದುಕಿನ ಬಗೆಗೆ ಬಲ್ಲವರೆಲ್ಲರೂ ತಮ್ಮ ಗ್ರಹಿಕೆಗೆ ಒಗ್ಗಿದಂತೆ ತಿಳಿಸಲು ಪ್ರಯತ್ನಿಸಿದ್ದಾರೆ. ಕೆಲವರಿಗೆ ಬದುಕು ಪುಸ್ತಕದ ರೀತಿ ಎಂದು ಹೇಳಿದ್ದಾರೆ. ಆದರೆ ಪುಸ್ತಕ ಎಂದಾಕ್ಷಣ ಬರೆದು ಓದುವುದಲ್ಲ, ಓದಿ ಬರೆಯುವುದಲ್ಲ, ಬದುಕುತ್ತಲೇ ಬರೆಯಬೇಕಾಗಿರುವ ಅನುಭವದ ಕ್ಷಣ ಕ್ಷಣಗಳ ಸುವರ್ಣಾಕ್ಷರ. ನನಗೆ ತೋಚಿದ್ದು ಬರೆದಿಟ್ಟಂತೆ ಬದುಕಲು ಎಂದಿಗೂ ಸಾಧ್ಯವಾಗುವುದಿಲ್ಲ. ಜೀವನದಲ್ಲಿ ನಾವು ಅಂದುಕೊಳ್ಳುವುದಕ್ಕೂ, ನಡೆಯುವುದಕ್ಕೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಸಮಸ್ಯೆಗಳು, ಸಂಕಷ್ಟಗಳು ಒಂದರ ಹಿಂದೆ ಒಂದರಂತೆ ನಿರಂತರವಾಗಿ ಬರುತ್ತಲೇ ಇರುತ್ತದೆ. ಅಂತಹ ಸಂಕಷ್ಟಗಳು ಬಂದಾಗ ಅಳುಕದೆ ಅವುಗಳನ್ನು ಧೈರ್ಯವಾಗಿ ನಿಂತು ಎದುರಿಸಬೇಕು. ಇದು ಸಾಧ್ಯವಾಗಬೇಕಾದರೆ ಬದುಕಿನಲ್ಲಿ ಭರವಸೆ ತುಂಬಾ ಅಗತ್ಯವಾದದ್ದು. ಎಲ್ಲವೂ ಬದಲಾಗಲೇಬೇಕು ಎಂಬ ಮನೋಧರ್ಮ ನಮ್ಮದಾಗಬೇಕು. ಬದುಕಿನಲ್ಲಿ ಭರವಸೆಗಳಿದ್ದಾಗ ಏನು ಬೇಕಾದರೂ ಸಾಧಿಸಲು ಸಾಧ್ಯವಿದೆ.

ಉಜ್ವಲ ಭರವಸೆ ನಮ್ಮದಾಗಬೇಕು : ಬದುಕಿನ ರೂಪ ಒಂದೇ ತೆರನಾಗಿರುತ್ತದೆ ಎಂದೇನೂ ಇಲ್ಲ. ಬಗೆ ಬಗೆಯ ಆಕಾರದಲ್ಲಿ ಸಾಕಾರಗೊಂಡಿರುತ್ತದೆ. ಪ್ರತಿಯೊಬ್ಬರಿಗೂ ಅವರದೇ ಆದ ಕಷ್ಟಕಾರ್ಪಣ್ಯಗಳಿರುತ್ತವೆ. ಕೆಲವರು ಅದನ್ನು ತೋರ್ಪಡಿಸಿಕೊಳ್ಳುತ್ತಾರೆ ಮತ್ತೆ ಕೆಲವರು ಮುಚ್ಚಿಟ್ಟು ಬದುಕನ್ನು ನಡೆಸುತ್ತಿರುತ್ತಾರೆ. ಜೀವನ ವಾಟ್ಸಪ್ ಸ್ಟೇಟಸ್‌ನಲ್ಲಿ ಕಾಣಿಸುವಷ್ಟು ಸುಂದರವಾಗಿಯಾಗಲೀ, ಇನ್ಸ್ಟಾಗ್ರಾಮ್‌ನಲ್ಲಿ ಕಾಣಿಸುವಷ್ಟು ಮೋಹಕವಾಗಿಯಾಗಲೀ ಇರಲಾರದು. ಕಷ್ಟವಾದರೂ ಸರಿಯೇ, ಇಷ್ಟವಾದರೂ ಸರಿಯೇ ಎಲ್ಲವೂ ಕ್ಷಣಿಕದ ಸಂಗಾತಗಳು. ಆದರೂ ಕಾಲ ಬದಲಾದಂತೆ ಸಮಸ್ಯೆಗಳು ಇನ್ನಿಲ್ಲವಾಗಿ ಉತ್ತಮ ಮಟ್ಟದ ಜೀವನ ನಮ್ಮದಾಗುತ್ತದೆ ಎಂಬ ಭರವಸೆ ನಮ್ಮಲ್ಲಿರಬೇಕು. ಇಂದಿನ ಕಷ್ಟ ನಾಳೆಯ ಪಾಲಿಗೆ ಸುಖವಾಗಿ ಬಾಳಲು ಬುನಾದಿಯಂತೆ ಇರುತ್ತದೆ ಎಂಬ ಆತ್ಮವಿಶ್ವಾಸದಿಂದ ಬದುಕನ್ನು ನಡೆಸಬೇಕು. ಕತ್ತಲೆ ಕಳೆದ ಮೇಲೆ ಬೆಳಕು, ಮೋಡ ಸರಿದ ಮೇಲೆ ಮಳೆ ಬರುವಂತೆ ಕಷ್ಟಗಳೆಲ್ಲ ಕಳೆದ ನಂತರ ಸುಖವು ಬರುತ್ತದೆ. ಸಮಯ ಸ್ವಲ್ಪ ಹೆಚ್ಚಾಗಬಹುದು ಆದರೆ ಖಂಡಿತವಾಗಿಯೂ ಉತ್ತಮ ದಿನಗಳು ನಮ್ಮದಾಗುತ್ತವೆ. ಈ ಮನೋಭಾವ ನಮ್ಮಲ್ಲಿದ್ದಾಗ ಏನೇ ಕಷ್ಟಗಳು ಬಂದರೂ ಅವು ನಮ್ಮನ್ನು ಕುಗ್ಗಿಸಲಾರವು.

ಅವಮಾನಗಳಿಂದಲೇ ಸನ್ಮಾನ : ಸಾಧನೆಯ ಪಥದಲ್ಲಿ ಸಾಗುವವನಿಗೆ ಮೊದಲು ಸಿಗುವಂತದ್ದೆ ಅವಮಾನ. ಅಪಮಾನ. ಅವಮಾನಗಳಿಲ್ಲದೆ ಸಾಧಕರಾಗಿರುವವರ ಸಂಖ್ಯೆ ತೀರಾ ಕಡಿಮೆ ಎಂದು ಹೇಳಬಹುದು. ಜೀವನದಲ್ಲಿ ಯಾರೂ ರತ್ನಗಂಬಳಿಯನ್ನು ಹಾಸಿ ನಮ್ಮನ್ನು ಸ್ವಾಗತಿಸುವುದಿಲ್ಲ. ಅಂತಹ ಸಂದರ್ಭವನ್ನು ನಾವೇ ಸೃಷ್ಟಿಸಿಕೊಳ್ಳುವಂತೆ ಮಾಡಿಕೊಳ್ಳಬೇಕು. ದೊಡ್ಡ ದೊಡ್ಡ ಸಾಧನೆ ಮಾಡಿರುವ ಸಾಧಕರೆಲ್ಲರೂ ಮೊದಲಿಗೆ ಅವಮಾನಕ್ಕೆ ಒಳಗಾದವರೇ ಆಗಿರುತ್ತಾರೆ. ಯಾವುದೇ ಕ್ಷೇತ್ರದಲ್ಲಿ ನಮ್ಮದೇ ಆದ ಕೊಡುಗೆಯನ್ನು ನೀಡಬೇಕೆಂದು ಕೊಂಡಾಗ ಮೊದಲಿಗೆ ಅವಮಾನಗಳು ಆಗುವುದು ಸಹಜ. ಆದರೆ ಈ ಅವಮಾನಗಳಿಗೆ ಅಳುಕದೇ ಅವುಗಳನ್ನು ಧೈರ್ಯವಾಗಿ ಎದುರಿಸಿ ಮುನ್ನುಗ್ಗುವ ಛಲ ನಮ್ಮದಾಗಬೇಕು. ಹಿಡಿದ ಕೆಲಸವನ್ನು ಬಿಡದಂತೆ ಸಾಧಿಸಿ ತೋರಿಸುವ ಹಠ ನಮ್ಮದಾಗಿದ್ದರೆ ಖಂಡಿತವಾಗಿಯೂ ಸಾಧನೆಯ ತೋರಲು ಸಾಧ್ಯವಿದೆ. ಇದುವರೆಗೂ ಸಾಧನೆ ಮಾಡಿರುವ ಯಾರನ್ನು ಬೇಕಾದರೂ ನಾವು ನೋಡಿದರು ಇದು ತಿಳಿಯುತ್ತದೆ.

> ಸಾಧನೆಯ ಪಥದಲ್ಲಿ ಸಾಗುವವನಿಗೆ ಮೊದಲು ಸಿಗುವಂತದ್ದೆ ಅವಮಾನ. ಅಪಮಾನ. ಅವಮಾನಗಳಿಲ್ಲದೆ ಸಾಧಕರಾಗಿರುವವರ ಸಂಖ್ಯೆ ತೀರಾ ಕಡಿಮೆ ಎಂದು ಹೇಳಬಹುದು. ಜೀವನದಲ್ಲಿ ಯಾರೂ ರತ್ನಗಂಬಳಿಯನ್ನು ಹಾಸಿ ನಮ್ಮನ್ನು ಸ್ವಾಗತಿಸುವುದಿಲ್ಲ. ಅಂತಹ ಸಂದರ್ಭವನ್ನು ನಾವೇ ಸೃಷ್ಟಿಸಿಕೊಳ್ಳುವಂತೆ ಮಾಡಿಕೊಳ್ಳಬೇಕು. ದೊಡ್ಡ–ದೊಡ್ಡ ಸಾಧನೆ ಮಾಡಿರುವ ಸಾಧಕರೆಲ್ಲರೂ ಮೊದಲಿಗೆ ಅವಮಾನಕ್ಕೆ ಒಳಗಾದವರೇ ಆಗಿರುತ್ತಾರೆ.

ಉಳಿ ಪೆಟ್ಟು ತಿಂದ ಕಲ್ಲು ಶಿಲೆಯಾಗಿ ರೂಪುಗೊಳ್ಳುತ್ತದೆ. ಹಾಗೆಯೇ ಅಪಮಾನ–ಅವಮಾನಗಳು ಬದುಕಿನಲ್ಲಿ ಅನುಭವಿಸಿರುವ ವ್ಯಕ್ತಿಗಳು ಖಂಡಿತವಾಗಿಯೂ ಮುಂದೊಂದು ದಿನ ಸಾಧನೆಯ ಶಿಖರವನ್ನು ತಲುಪಿ ಎಲ್ಲರಿಂದಲೂ ಸನ್ಮಾನಿತರಾಗುತ್ತಾರೆ. ಇತ್ತೀಚಿನ ಉದಾಹರಣೆಯನ್ನು ನೋಡುವುದಾದರೆ ಕೇವಲ 14 ವರ್ಷದ ಯುವಕ ವೈಭವ್ ಸೂರ್ಯವಂಶಿ ಐಪಿಎಲ್‌ಗೆ ಆಯ್ಕೆಯಾದಾಗ ಇವನು ಏನು ಆಟ ಆಡಬಲ್ಲ ಎಂದೇ ಕೊಂಕು ನುಡಿದಿದ್ದರು. ಇಂದು ಅದೇ ಜನ ಅತೀ ಕಡಿಮೆ ಚೆಂಡಿನಲ್ಲಿ ಶತಕ ಸಿಡಿಸಿ, ತಂಡದ ಗೆಲುವಿಗೆ ಕಾರಣವಾದ ಮೇಲೆ ಪ್ರತಿಯೊಬ್ಬರು ಆತನ ಪ್ರತಿಭೆಯನ್ನು ಕೊಂಡಾಡುತ್ತಿದ್ದಾರೆ.

ಇಂದು ತೋರುವ ಅವಮಾನದ ಅದೆಷ್ಟೋ ಪ್ರಸಂಗಗಳು ನಾಳೆ ಒದಲಿರುವ ಸನ್ಮಾನದ ಸುದ್ದಿಗಳಾಗಬಹುದು. ನಾನಾ ಕಾರಣಗಳಿಗಾಗಿ ದೂರವಾದವರೇ ನಾಳೆ ದಿನ ಹತ್ತಿರವಾಗಲೂಬಹುದು. ಸನ್ಮಾನವನ್ನಾಗಲಿ, ಅವಮಾನವನ್ನಾಗಲಿ ತಲೆಕೆಡಿಸಿಕೊಂಡು ಮೆದುಳಿಗೆ ತಂದುಕೊಳ್ಳದೆ ಸಮದರ್ಶಿತ್ವದ ಮನೋಭಾವ ಅತಿ ಅಗತ್ಯ. ಅಪಮಾನ–ಅವಮಾನಗಳು ಜೀವನದಲ್ಲಿ ಸಂಭವಿಸಿದಾಗಲೇ ಮತ್ತೆ ಗೆಲ್ಲಲೇಬೇಕೆಂಬ ಛಲ, ಹಠ ಹುಟ್ಟುತ್ತದೆ. ಹಾಗಾಗಿ ಅಪಮಾನಗಳಿಗೆ ಬೇಸರಪಟ್ಟುಕೊಳ್ಳದೇ ಅವುಗಳನ್ನು ಎದುರಿಸಿ ನಿಂತು ಮುಂದೆ ಸಾಗಬೇಕು. ಮುಂದೆ ಅವಮಾನ ಮಾಡಿದವರೇ ಸನ್ಮಾನ ಮಾಡುವ ಕಾಲ ಬಂದೇ ಬರುತ್ತದೆ.

ಪ್ರತಿಭೆಗೆ ತಕ್ಕ ಮನ್ನಣೆ ಸಿಗಲೇಬೇಕು, ಸಿಗುತ್ತದೆ : ಕೆಲವೊಮ್ಮೆ ಹಣ್ಣಿರುವ ಮರಕ್ಕೆ ಪೆಟ್ಟು ಹೆಚ್ಚು ಬೀಳುವಂತೆ ಒಳ್ಳೆಯತನದಿಂದ ಕೂಡಿರುವವರಿಗೆ ಹೆಚ್ಚು ಸಂಕಷ್ಟಗಳು ಎದುರಾಗುತ್ತವೆ. ಆದರೆ ಖಂಡಿತವಾಗಿಯೂ ಮುಂದೆ ಅವರ ಪ್ರತಿಭೆಗೆ ತಕ್ಕ ಮನ್ನಣೆ ಸಿಗಲೇಬೇಕು. ಅದು ಖಂಡಿತವಾಗಿಯೂ ಸಿಗುತ್ತದೆ. ನಮ್ಮಲ್ಲಿರುವ ಹಣ ಆಸ್ತಿಯನ್ನು ಯಾರು ಬೇಕಾದರೂ ಮೋಸ ಮಾಡಿಯಾದರೂ ಕಬಳಿಸಬಹುದು. ಆದರೆ ನಮ್ಮಲ್ಲಿರುವ ಪ್ರತಿಭೆಯನ್ನು ಕದಿಯಲಾಗದು. ಪ್ರತಿಭೆಗೆ ತಕ್ಕ ಮನ್ನಣೆ ಸಿಗುವವರೆಗೂ ಕಾಯಲೇಬೇಕಾಗುತ್ತದೆ, ಆತ್ಮವಿಶ್ವಾಸದಿಂದ ಮುನ್ನುಗ್ಗಲೇ ಬೇಕಾಗುತ್ತದೆ.

ಸೋಲುಗಳಿಗೆ ಹೆದರಬೇಕಿಲ್ಲ : ಸೋಲು ಮರಳಿ ಪ್ರಯತ್ನವ ಮಾಡು ಎಂದು ಅನುಭವದ ಪಾಠವನ್ನು ಹೇಳಿಕೊಡುತ್ತದೆ. ಬದುಕಿನಲ್ಲಿ ಸೋಲುಗಳು, ಕಷ್ಟಗಳು ಪ್ರತಿಯೊಬ್ಬರಿಗೂ ಬಂದೇ ಬರುತ್ತವೆ. ಬರೀ ಸಿಹಿಯನ್ನೇ ತಿಂದರೆ ಕಹಿಯ ಅನುಭವವಾಗಲಾರದು ಅಥವಾ ಸಿಹಿಯ ಮಹತ್ವ ಅರಿಯಲಾಗದು. ಸಿಹಿಯ ಮಹತ್ವ ಅರಿವಾಗಬೇಕಾದರೆ ಕಹಿಯ ರುಚಿಯ ನೋಡಲೇಬೇಕು. ಹಾಗೆಯೇ ಕಷ್ಟಗಳು, ಸೋಲುಗಳು ಮನುಷ್ಯನನ್ನು ಮತ್ತಷ್ಟು, ಮಗದಷ್ಟು ಗಟ್ಟಿಗನನ್ನಾಗಿ ಮಾಡುತ್ತವೆ. ಸೋಲೇ ಕೊನೆಯಲ್ಲ, ಗೆಲುವಿಗೆ ಕೊನೆಯಿಲ್ಲ. ಈ ತತ್ವವನ್ನು ಅರ್ಥಮಾಡಿಕೊಂಡಾಗ ಖಂಡಿತವಾಗಿಯೂ ನಮ್ಮಲ್ಲಿ ಗೆದ್ದೇ ಗೆಲ್ಲುವೆಂಬ ಛಲ ಮೂಡುತ್ತದೆ. ನನಗೆ ಈ ಮಾತನ್ನು ಹೇಳುವಾಗ ಕ್ರಿಕೆಟರ್ ಆಗಿರುವ ರೋಹಿತ್ ಶರ್ಮ ಅವರ ಚಿತ್ರಣ ಮುಂದೆ ಬರುತ್ತದೆ. ನಮ್ಮೆಲ್ಲರಿಗೂ ತಿಳಿದ ತಿಳಿದಿರುವ ಹಾಗೆ ರೋಹಿತ್ ಶರ್ಮ ಮೊದಲು ಆಫ್ ಸ್ಪಿನ್ ಬೌಲರ್ ಆಗಿ 6/7 ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದರು. ಪಂದ್ಯ ಒಂದರಲ್ಲಿ ಬಿದ್ದ ಬಾಲ್‌ನ ಪೆಟ್ಟಿಗೆ ಮುಂದೆ ಎಂದೂ ಬೌಲಿಂಗ್ ಮಾಡಲು ಸಾಧ್ಯವಿಲ್ಲ ಎಂಬ ವಿಷಯ ತಿಳಿದಾಗ ಶರ್ಮ ಕುಗ್ಗಲಿಲ್ಲ. ಬೌಲಿಂಗ್ ಮಾಡಲು ಆಗದಿದ್ದರೆ ಏನಂತೆ? ಬ್ಯಾಟಿನಲ್ಲಿ ತನ್ನ ಪ್ರತಿಭೆಯನ್ನು ತೋರುತ್ತ, ದಾಖಲೆಗಳನ್ನು ಮಾಡುತ್ತಾ ಇವತ್ತು ವಿಶ್ವಮಟ್ಟದಲ್ಲಿ ಗುರುತಿಸಿಕೊಳ್ಳುವ ಕೆಲಸವನ್ನು ಮಾಡಿದ್ದಾರೆ. ತೀರ ಇತ್ತೀಚೆಗೆ ವಯಸ್ಸಾಗಿದೆ, ಡುಮ್ಮ, ನಿವೃತ್ತಿ ನೀಡಬೇಕು ಎಂಬೆಲ್ಲಾ ಟೀಕೆಗಳನ್ನು ಎದುರಿಸಿಯೂ ಕೂಡ ಮತ್ತೆ ಫೀನಿಕ್ಸ್ ರೀತಿಯಲ್ಲಿ ಗೆದ್ದು ತನ್ನ ಪ್ರತಿಭೆಯನ್ನು ಮತ್ತೊಮ್ಮೆ ತೋರಿಸಿದ್ದಾರೆ.

ಬದುಕಿನಲ್ಲಿ ಸೋಲುಗಳು ಕಲಿಸುವ ಪಾಠವನ್ನು ಗೆಲುವು ಕಲಿಸಲಾರದು. ಸೋತಾಗಲೇ ನಮ್ಮ ಬಲ, ಬಲಹೀನತೆಗಳು ನಮಗೆ ಚೆನ್ನಾಗಿ ಅರಿವಾಗುವುದು. ಹಾಗೆಂದ ಮಾತ್ರಕ್ಕೆ ಸೋಲುಗಳನ್ನೇ ಅರಸುತ್ತ ಕೂರುವುದಲ್ಲ ನಿಜವಾಗಿಯೂ ನಮ್ಮವರು ಯಾರು ಎಂದು ತಿಳಿಯುವುದು ಸೋತಾಗಲೇ! ಹಾಗಾಗಿ ಸೋಲುಗಳಿಗೆ ಹೆದರದೆ ಸೋಲನ್ನೇ ಗೆಲುವನ್ನಾಗಿ ಪರಿವರ್ತಿಸಿಕೊಳ್ಳುವ ಗುರಿ ನಮ್ಮದಾಗಬೇಕು.

ಪ್ರಕೃತಿ ಕಲಿಸುವ ಪಾಠ : ಬಹುಶಃ ಪ್ರಕೃತಿಗಿಂತ ದೊಡ್ಡ ಬದುಕಿನ ಪಾಠವನ್ನು ಯಾರೂ ಹೇಳಿಕೊಡಲು ಸಾಧ್ಯವಿಲ್ಲ ಎನ್ನಿಸುತ್ತದೆ. ಎಲೆಗಳು ಉದುರಿ ಬೋಳು ಮರವಾಗಿದ್ದು ಮುಂದೆ ಅದೇ ಮರ ಎಲೆಗಳನ್ನು ಚಿಗುರಿಸಿಕೊಂಡು ಬಂದವರಿಗೆ ನೆರಳನ್ನು ನೀಡುವ ಕೆಲಸವನ್ನು ಮಾಡುತ್ತದೆ. ಒಂದೇ ದಿನ ಬದುಕಿದರೂ ಹೂವು ತನ್ನ ಪರಿಮಳವನ್ನು ಬೀರಿ ಸಾರ್ಥಕತೆಯನ್ನು ಪಡೆಯುತ್ತದೆ. ಕಾಲಕ್ಕೆ ತಕ್ಕಂತೆ ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ ಏನೇ ಬದಲಾದರೂ ಬದಲಾದ ಋತುಮಾನಕ್ಕೆ ಅನುಗುಣವಾಗಿ ಸ್ಪಂದಿಸುವ ಕೆಲಸವನ್ನು ಪ್ರಕೃತಿ ಮಾಡುತ್ತದೆ. ಪ್ರಕೃತಿಯಿಂದ ಮನುಷ್ಯ ಈ ಗುಣವನ್ನು ಮೊದಲು ಕಲಿಯಬೇಕು. ಕಾಲಕ್ಕೆ ತಕ್ಕಂತೆ ಸಂದರ್ಭಕ್ಕೆ ಅನುಗುಣವಾಗಿ ಬದುಕು ಬಂದಂತೆ ಸ್ವೀಕರಿಸುವ ಗುಣವನ್ನು ನಾವು ಅರಿತಾಗ ನಿಜಕ್ಕೂ ಸುಂದರ ಬದುಕನ್ನು ಜೀವಿಸಲು ಸಾಧ್ಯ.

ಒಟ್ಟಾರೆಯಾಗಿ ಭರವಸೆಯು ನಾಳೆಗೆ ದಿಕ್ಸೂಚಿ. ಬಡವನಾಗಿ ಹುಟ್ಟುವುದು ತಪ್ಪಲ್ಲ ಬಡವನಾಗಿ ಸಾಯುವುದು ತಪ್ಪು ಎಂಬ ದೊಡ್ಡವರ ಈ ಮಾತನ್ನು ಸರಿಯಾಗಿ ಅರ್ಥ ಮಾಡಿಕೊಂಡು ಬರಲಿರುವ ಭರವಸೆಗಳ ನಾಳೆಗಳಿಗಾಗಿ ಇಂದಿನ ನೋವುಗಳನ್ನು ಅರಗಿಸಿಕೊಂಡು ಮುಂದೆ ಸಾಗಲೇಬೇಕು. ಬಾಳ ಕದನದಲ್ಲಿ ಭರವಸೆಗಳು ಬೇಕು, ನಾಳೆ ನನ್ನದೆನ್ನುವ ನಂಬಿಕೆಗಳು ಬೇಕು ಎಂಬ ಆಕಸ್ಮಿಕ ಚಿತ್ರದ ಹಾಡಿನ ತತ್ವವನ್ನು ಅರಿತುಕೊಂಡು ಏನೇ ಕಷ್ಟಗಳು ಬಂದರೂ ಅವುಗಳನ್ನು ಧೈರ್ಯದಿ ಎದುರಿಸುತ್ತಾ ಮುನ್ನುಗ್ಗುವ ಮಾನಸಿಕ ಸ್ಥೈರ್ಯ ನಮ್ಮದಾಗಬೇಕು.

ಆಳುವವರ ನಿರ್ಲಕ್ಷ್ಯ ; ಕಲ್ಮಶ ತುಂಬಿದ ಗುಂಡಿಗಳಾಗಿರುವ

ಮೈಸೂರಿನ ಪುರಾತನ ಕಲ್ಯಾಣಿಗಳ ಸ್ಥಿತಿ ಶೋಚನೀಯ

ಮಾಜಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಆಕ್ರೋಶ





ಮೈಸೂರಿನ ಸರಸ್ವತಿಪುರಂನ ಚಂದ್ರವನ ಹಾಗೂ ಈಜುಕೊಳದ ಬಳಿ ಇರುವ ಪುರಾತನ ಕಲ್ಯಾಣಿಗಳ ದುಃಸ್ಥಿತಿ.

ಮೈಸೂರು, ಮೇ 5(ಎಸ್‌ಬಿಡಿ)– ನಗರದ ಸರಸ್ವತಿಪುರಂನ ಈಜುಕೊಳದ ಬಳಿ ಇರುವ ಪುರಾತನವಾದ ಎರಡು ಕಲ್ಯಾಣಿಗಳು (ನೀರು ತೊಟ್ಟಿಗಳು) ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನದಿಂದ ತ್ಯಾಜ್ಯ ಬಿಸಾಡುವ ಸ್ಥಳವಾಗಿ ಪರಿವರ್ತನೆಗೊಂಡಿದ್ದು, ಇದು ಸ್ವಚ್ಛ ಭಾರತ, ಸ್ವಚ್ಛ ಮೈಸೂರು ಪರಿಕಲ್ಪನೆಯನ್ನು ಅಣಕಿಸುವಂತಿದೆ ಎಂದು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ, ಮಾಜಿ ಕಾರ್ಪೊರೇಟರ್ ಕೆ.ವಿ. ಶ್ರೀಧರ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಪರಂಪರೆಯೊಂದಿಗೆ ಬೆಸೆದುಕೊಂಡಿರುವ ಈ ಕಲ್ಯಾಣಿಗಳು, ರಾಜಪ್ರಭುತ್ವದ ಕಾಲದಿಂದಲೂ ಪ್ರಮುಖ ನೀರಿನ ಸೆಲೆಗಳಾಗಿವೆ. ಆದರೆ ಇವು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದ ಮೂಲ ಸ್ವರೂಪವನ್ನೇ ಕಳೆದುಕೊಂಡಿವೆ. ಇಲ್ಲಿ ಸಂಗ್ರಹವಾಗಿರುವ ಮಳೆ ನೀರು ಹಸಿರು ಬಣ್ಣಕ್ಕೆ ತಿರುಗಿದ್ದು, ಸೊಳ್ಳೆಗಳ ಆವಾಸ ಸ್ಥಾನವಾಗಿ ಮಾರ್ಪಟ್ಟಿದೆ. ಪರಿಣಾಮ ಸುತ್ತಮುತ್ತಲಿನ ನಿವಾಸಿಗಳಲ್ಲಿ ಸಾಂಕ್ರಾಮಿಕ ರೋಗಗಳ ಭೀತಿ ಮನೆ ಮಾಡಿದೆ. ಜನಸಂಚಾರವಿರುವ ಪ್ರಮುಖ ಸ್ಥಳದಲ್ಲಿರುವ ಈ ಎರಡು ಕಲ್ಯಾಣಿಗಳ ದುಸ್ಥಿತಿಗೆ ಜನಪ್ರತಿನಿಧಿಗಳು, ಸರಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಮಹಾನಗರ ಪಾಲಿಕೆ ಅಧಿಕಾರಿಗಳೇ ನೇರ ಹೊಣೆ ಎಂದು ಕಿಡಿಕಾರಿದ್ದಾರೆ.

ಆಯುರ್ವೇದ ಗಿಡಮೂಲಿಕೆಗಳ ವನದ ನಡುವೆ ಹಾಗೂ ಹೊರಗೆ ಈ ಕಲ್ಯಾಣಿಗಳಿವೆ. ಇದಕ್ಕೆ ಹೊಂದಿಕೊಂಡಂತೆ ಶನೇಶ್ವರ ಸ್ವಾಮಿ ದೇವಸ್ಥಾನವಿದೆ. ದೇಗುಲಕ್ಕೆ ಸಾಕಷ್ಟು ಭಕ್ತರು ಬಂದುಹೋಗುತ್ತಾರೆ. ಕಲ್ಯಾಣಿಯ ದುಸ್ಥಿತಿಯಿಂದ ಎಲ್ಲರೂ ಮೂಗುಮುಚ್ಚಿಕೊಂಡು ಓಡಾಡುವಂತಾಗಿದೆ. ನೋಡುವುದಕ್ಕೂ ಅಸಹ್ಯವಾಗುವಷ್ಟು ಪಾರಂಪರಿಕ ಕಲ್ಯಾಣಿಗಳು ಹಾಳಾಗಿವೆ. ಆಯುರ್ವೇದ ವನದ ಕಲ್ಯಾಣಿಯ ನೀರೇ ಶುದ್ಧವಿಲ್ಲವೆಂದರೆ ಹೇಗೆ? ಇದು ಸಂಬಂಧಪಟ್ಟ ಅಧಿಕಾರಿಗಳ ಹೊಣೆಗೇಡಿತನವನ್ನು ತೋರಿಸುತ್ತದೆ. ಈಗಲಾದರೂ ಶಾಸಕರು, ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ ಹಾಗೂ ಮಹಾನಗರ ಪಾಲಿಕೆ ಅಧಿಕಾರಿಗಳು ತಕ್ಷಣವೇ ಕಲ್ಯಾಣಿಗಳ ಉಳಿವಿಗೆ ಮುಂದಾಗದಿದ್ದರೆ ಸಾರ್ವಜನಿಕರ ಸಹಕಾರದೊಂದಿಗೆ ಬೃಹತ್ ಹೋರಾಟ ನಡೆಸುವುದಾಗಿ ಕೆ.ವಿ.ಶ್ರೀಧರ್ ಎಚ್ಚರಿಕೆ ನೀಡಿದ್ದಾರೆ.

ಕಲ್ಯಾಣಿಯಿಂದ ಅಂತರ್ಜಲ ವೃದ್ಧಿ: ಒಂದೆಡೆ ಅಂತರ್ಜಲ ಅಭಿವೃದ್ಧಿಗಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿ, ಕೋಟ್ಯಂತರ ಹಣ ಖರ್ಚು ಮಾಡುತ್ತಿದ್ದರೆ, ಮತ್ತೊಂದೆಡೆ ಅತ್ಯಂತ ಸುಲಭವಾಗಿ ಅಂತರ್ಜಲ ವೃದ್ಧಿಸಬಹುದಾದ ವ್ಯವಸ್ಥೆಗಳನ್ನು ಎಮ್ಮೆ ಚರ್ಮದ ಅಧಿಕಾರಿ ವರ್ಗ ಹಾಳು ಮಾಡುತ್ತಿದೆ. ಅದಕ್ಕೆ ಈ ಎರಡೂ ಕಲ್ಯಾಣಿಗಳೇ ಸಾಕ್ಷಿ. ಕಲ್ಯಾಣಿಗಳು ತುಂಬಿದರೆ ಸುತ್ತಲಿನ ಐದು ಮೈಲಿ ವ್ಯಾಪ್ತಿಯಲ್ಲಿ ಅಂತರ್ಜಲ ವೃದ್ಧಿಯಾಗುತ್ತದೆ ಎಂದು ಪರಿಸರ ತಜ್ಞರು ಸಾಕಷ್ಟು ಬಾರಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ, ಅದಾವುದಕ್ಕೂ ತಲೆಕೆಡಿಸಿಕೊಳ್ಳದ ಅಧಿಕಾರಿಗಳು, ಕಲ್ಯಾಣಿಗೆ ಕಸ ಸುರಿಯಲು ಬಿಟ್ಟು ಕಣ್ಮುಚ್ಚಿ ಕುಳಿತಿರುವುದು ದುರಂತ.

ಕುಕ್ಕರಹಳ್ಳಿ ಕೆರೆಯಿಂದ ಬಿಟ್ಟ ಹೆಚ್ಚುವರಿ ನೀರು ಮೊದಲು ಆಯುರ್ವೇದ ಗಿಡ ಮೂಲಿಕೆಗಳ ಚಂದ್ರವನದಲ್ಲಿರುವ ಕಲ್ಯಾಣಿಗೆ ಹರಿದು ನಂತರ ಮೈಸೂರು ವಿವಿ ಈಜುಕೊಳದ ಪಕ್ಕದಲ್ಲಿರುವ ದೊಡ್ಡ ಕಲ್ಯಾಣಿಯನ್ನು ತುಂಬುತ್ತಿತ್ತು. ಅಲ್ಲಿಂದ ರಾಜಕಾಲುವೆ ಸೇರಿ ಬಂಡೀಪಾಳ್ಯದವರೆಗೂ ಹರಿಯುವ ಮೂಲಕ ನಗರದ ನೀರಿನ ಪ್ರಮುಖ ನೀರಿನ ಸೆಲೆಯಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಆ ವ್ಯವಸ್ಥೆ ನಶಿಸುವುದರೊಂದಿಗೆ ಈ ಎರಡೂ ಕಲ್ಯಾಣಿಗಳು ಗತವೈಭವ ಕಳೆದುಕೊಂಡು ನಿರ್ಲಕ್ಷ್ಯಕ್ಕೆ ತುತ್ತಾಗಿವೆ ಎಂದು ಕೆ.ವಿ. ಶ್ರೀಧರ್ ವಿಷಾದ ವ್ಯಕ್ತಪಡಿಸಿದ್ದಾರೆ.

ಮೂಲಸ್ವರೂಪಕ್ಕೆ ಧಕ್ಕೆಯಾಗದಂತೆ ಅಭಿವೃದ್ಧಿಪಡಿಸಲಿ

ಮೂಲಸ್ವರೂಪಕ್ಕೆ ಧಕ್ಕೆ ಆಗದಂತೆ ಕಲ್ಯಾಣಿಗಳನ್ನು ಅಭಿವೃದ್ಧಿ ಪಡಿಸಬೇಕಿದೆ.



ಈ ನಿಟ್ಟಿನಲ್ಲಿ ಮೊದಲು ಗಿಡಗಂಟಿ ಗಳನ್ನು ತೆರವು ಗೊಳಿಸಿ, ಹೂಳು ತೆಗೆಸಬೇಕು. ಕಲ್ಯಾಣಿ ಕಲ್ಲಿನ ಹಂತಗಳಿಗೆ ಹಾನಿಯಾಗದಂತೆ ಸ್ವಚ್ಛಗೊಳಿಸಬೇಕು. ನೀರಿನ ಸೆಲೆಗಳಿಗೆ ತೊಂದರೆಯಾಗದಂತೆ ನಿಗಾ ವಹಿಸಬೇಕು. ಕಲ್ಯಾಣಿಯ ಸುತ್ತಮುತ್ತ ಹಾಗೂ ಹೊರ ಭಾಗದಲ್ಲಿ ಸೌಂದರ್ಯೀಕರಣಕ್ಕೆ ಯೋಜನೆ ರೂಪಿಸಬೇಕು. ಹೀಗೆ ತಜ್ಞರ ನೆರವಿನಿಂದ ವ್ಯವಸ್ಥಿತವಾಗಿ ಎರಡೂ ಕಲ್ಯಾಣಿಗಳನ್ನು ರಕ್ಷಿಸಿಕೊಳ್ಳಬೇಕಿದೆ.

– ಕೆ.ವಿ.ಶ್ರೀಧರ್, ಮಾಜಿ ಕಾರ್ಪೊರೇಟರ್.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

'ನವ ಮೈಸೂರು ನಿರ್ಮಾಣ' ಸಭೆ ಮುಂದೂಡಿಕೆ

ಮೈಸೂರು, ಮೇ 5– ಮುಖ್ಯ ಮಂತ್ರಿ ಸಿದ್ದರಾಮಯ್ಯನವರ ಅಧ್ಯಕ್ಷತೆ ಯಲ್ಲಿ ಬೆಂಗಳೂರಿನಲ್ಲಿ ಸೋಮವಾರ ನಡೆಯ ಬೇಕಿದ್ದ 'ನವ ಮೈಸೂರು ನಿರ್ಮಾಣ' ಕುರಿತ ಸಭೆ ಮುಂದೂಡಲ್ಪಟ್ಟಿದೆ.

ನವ ದೆಹಲಿ ಹಾಗೂ ಚಂಡೀಗಡ ಮಾದರಿಯಲ್ಲಿ 'ನವ ಮೈಸೂರು ನಿರ್ಮಾಣ' ಕುರಿತು ಚರ್ಚಿಸಲು ಮುಖ್ಯ ಮಂತ್ರಿಯವರ ಅಧಿಕೃತ ನಿವಾಸ 'ಕಾವೇರಿ' ಯಲ್ಲಿ ಇಂದು ಸಂಜೆ 4ಕ್ಕೆ ಸಭೆ ನಿಗದಿ ಯಾಗಿತ್ತು. ಮೈಸೂರು ಜಿಲ್ಲಾ ಉಸ್ತು ವಾರಿ ಸಚಿವರು ಸೇರಿದಂತೆ ಐದಾರು ಸಚಿವರು, ಮೈಸೂರು ಜಿಲ್ಲಾಧಿ ಕಾರಿ ಸೇರಿದಂತೆ ಕೆಲ ಇಲಾಖೆಗಳ ಕಾರ್ಯ ದರ್ಶಿಗಳನ್ನು ಸಭೆಗೆ ಆಹ್ವಾನಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಸಭೆ ಯನ್ನು ಮುಂದೂಡಲಾಗಿದ್ದು, ಮುಂದಿನ ದಿನಾಂಕವೂ ನಿಗಧಿ ಯಾಗಿಲ್ಲ. ಸಭೆ ಮುಂದೂಡಿರುವುದನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಖಚಿತಪಡಿಸಿದ್ದಾರೆ.

ವಿಧಾನಸಭೆ ಅಧಿವೇಶನದಲ್ಲಿ ಪ್ರಶ್ನೆ ಕೇಳದಿರಲು ಲಂಚ: 20 ಲಕ್ಷ ಪಡೆಯುತ್ತಿದ್ದಾಗಲೇ ಶಾಸಕನ ಬಂಧನ

ಜೈಪುರ, ಮೇ.5– ಲಂಚ ಪಡೆಯುತ್ತಿದ್ದಾಗ ರಾಜಸ್ಥಾನ ಶಾಸಕ ಜೈಕೃಷ್ಣ ಪಟೇಲ್ ಅವರನ್ನು ರಾಜಸ್ಥಾನ ಭ್ರಷ್ಟಾ ಚಾರ ನಿಗ್ರಹ ದಳ ಬಂಧಿಸಿದೆ. ಜೈಪುರದ ತಮ್ಮ ಅಧಿಕೃತ ನಿವಾಸದಲ್ಲಿ 20 ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದಾಗ ಭಾರತ್ ಆದಿವಾಸಿ ಪಕ್ಷದ ಶಾಸಕ ಜೈಕೃಷ್ಣ ಪಟೇಲ್ ಅವರನ್ನು ಬಂಧಿಸಿದೆ.


ಜೈಕೃಷ್ಣ ಪಟೇಲ್

ರಾಜಸ್ಥಾನ ವಿಧಾನಸಭೆಯ ಹಿಂದಿನ ಅಧಿವೇಶನಕ್ಕೆ ಸಲ್ಲಿಸಲಾಗಿದ್ದ ತೋಡಾಭಿಮ್ ಪ್ರದೇಶದಲ್ಲಿ ಗಣಿಗಾರಿಕೆ ಗುತ್ತಿಗೆಗಳಿಗೆ ಸಂಬಂಧಿಸಿದ ಮೂರು ಪ್ರಶ್ನೆಗಳನ್ನು ಕೇಳದಿರಲು ಪಟೇಲ್ ದೂರು ದಾರರಿಂದ 2 ಕೋಟಿ ರೂ. ಬೇಡಿಕೆ ಇಟ್ಟಿದ್ದರು ಎಂದು ಆರೋಪಿಸಲಾಗಿದೆ. ಇವುಗಳಲ್ಲಿ ಎರಡು ಪ್ರಶ್ನೆಗಳು ನಕ್ಷತ್ರ ಚಿಹ್ನೆಯ ಪ್ರಶ್ನೆಗಳಾಗಿದ್ದು, ಸಂಬಂಧಪಟ್ಟ ಸಚಿವರಿಂದ ಮೌಖಿಕ ಉತ್ತರಗಳ ಅಗತ್ಯವಿತ್ತು ಮತ್ತು ಒಂದು ನಕ್ಷತ್ರ ಚಿಹ್ನೆಯಿಲ್ಲದ ಪ್ರಶ್ನೆಯಾಗಿತ್ತು.

2024 ರ ಏಪ್ರಿಲ್‌ನಲ್ಲಿ ನಡೆದ ಉಪಚುನಾವಣೆಯಲ್ಲಿ ಬನ್ಸ್ವಾರಾ ಜಿಲ್ಲೆಯ ಬಾಗಿಡೋರಾ ಕ್ಷೇತ್ರದಿಂದ ಆಯ್ಕೆಯಾದ ಪಟೇಲ್, ಗಣಿ ಮಾಲೀಕರ ದೂರಿನ ನಂತರ ಏಪ್ರಿಲ್ 4 ರಿಂದ ಎಸಿಬಿಯ ಪರಿಶೀಲನೆಗೆ ಒಳಗಾಗಿದ್ದರು. ಎಸಿಬಿ ಮಹಾನಿರ್ದೇಶಕ ರವಿಪ್ರಕಾಶ್ ಮೆಹರ್ದ ಅವರ ಪ್ರಕಾರ ಈ ಒಪ್ಪಂದವನ್ನು 2 ಕೋಟಿ ರೂ.ಗಳಿಗೆ ಅಂತಿಮಗೊಳಿಸಲಾಗಿದ್ದು, ಲಂಚವನ್ನು ಕಂತುಗಳಲ್ಲಿ ಪಾವತಿಸಲಾಗುವುದು. ದೂರುದಾರರು ಈ ಹಿಂದೆ ಬನ್ಸ್ವಾರಾದಲ್ಲಿ ಪಟೇಲ್‌ಗೆ 1 ಲಕ್ಷ ರೂ.ಗಳನ್ನು ನೀಡಿದ್ದರು.

ವಿಧಾನಸಭೆ ಸ್ಪೀಕರ್ ವಾಸುದೇವ್ ದೇವ್ನಾನಿ ಮತ್ತು ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಅವರಿಂದ ಪೂರ್ವಾನುಮತಿ ಪಡೆದ ನಂತರ ಎಸಿಬಿ ಕಾರ್ಯಾಚರಣೆ ನಡೆಸಿತು. ದೂರುದಾರರು ಭಾನುವಾರ ಪಟೇಲ್ ಅವರ ನಿವಾಸಕ್ಕೆ ಭೇಟಿ ನೀಡಿ ಎರಡನೇ ಕಂತಿನ 20 ಲಕ್ಷ ರೂ.ಗಳನ್ನು ಹಸ್ತಾಂತರಿಸಿದರು, ಈ ಸಮಯದಲ್ಲಿ ಎಸಿಬಿ ತಂಡ ಅವರನ್ನು ರೆಡ್ ಹ್ಯಾಂಡ್ ಆಗಿ ಬಂಧಿಸಿತು. ಲಂಚ ಪಡೆದ ನಂತರ ಶಾಸಕ ಜೈಕೃಷ್ಣ ಪಟೇಲ್ ಹಣದ ಚೀಲವನ್ನು ವ್ಯಕ್ತಿಯೊಬ್ಬರಿಗೆ ನೀಡಿದ್ದಾರೆ. ಆತ ಅದನ್ನು ತೆಗೆದುಕೊಂಡು ಪರಾರಿಯಾಗಿದ್ದಾನೆ. ಸದ್ಯ ಎಸಿಬಿ ಅಧಿಕಾರಿಗಳು ಶಾಸಕರನ್ನು ವಿಚಾರಣೆ ನಡೆಸುತ್ತಿದ್ದಾರೆ. ಶಾಸಕರು ಲಂಚಕ್ಕೆ ಬೇಡಿಕೆಯಿಟ್ಟಿರುವ ಮತ್ತು ಲಂಚ ಪಡೆದಿರುವ ಆಡಿಯೋ ಮತ್ತು ವಿಡಿಯೋ ಸಾಕ್ಷ್ಯಗಳು ಎಸಿಬಿ ಬಳಿ ಇವೆ.

ಕೆಪಿಎಸ್‌ಸಿ: ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ಶ್ಲಾಘನೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ಅಧ್ಯಕ್ಷ ಮತ್ತು ಸದಸ್ಯರ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ ಪಿ.ಸಿ.ಹೋಟಾ ಸಮಿತಿಯ ಶಿಫಾರಸಿಗೆ ಅನುಗುಣವಾಗಿ ಶೋಧನಾ ಸಮಿತಿ ರಚಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಆದೇಶಿಸಿರುವುದನ್ನು ಹೈಕೋರ್ಟ್ ಶ್ಲಾಘಿಸಿದೆ.

ಎಂಜಿನಿಯರ್‌ಗಳ ನೇಮಕಾತಿಗೆ ಸಂಬಂಧಿಸಿದ ಪ್ರಕರಣದಲ್ಲಿ, ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ) ಆದೇಶ ಪ್ರಶ್ನಿಸಿ ಎಂಜಿನಿಯರ್‌ಗಳಾದ ವಿಶ್ವಾಸ್ ಮತ್ತಿತರರು ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು ನೀಡಿರುವ ಹೇಳಿಕೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ತನ್ನ ದೈನಂದಿನ ಆದೇಶದಲ್ಲಿ ಉಲ್ಲೇಖಿಸಿದೆ.

ಶೋಧನಾ ಸಮಿತಿಯಲ್ಲಿ ತಲಾ ಒಬ್ಬರು ಮಹಿಳೆ ಮತ್ತು ತುಳಿತಕ್ಕೊಳಗಾದ ಸಮುದಾಯದ ವ್ಯಕ್ತಿಯನ್ನು ಸದಸ್ಯರನ್ನಾಗಿ ಮಾಡಬೇಕೆಂಬ ನ್ಯಾಯಪೀಠದ ಸಲಹೆಯನ್ನು ಸಂಪುಟ ಸಭೆಯ ಮುಂದೆ ಇರಿಸಲಾಗುವುದು. ಇದನ್ನು ಸಚಿವ ಸಂಪುಟ ಪರಿಶೀಲಿಸಲಿದೆ ಎಂಬ ಅಡ್ವೊಕೇಟ್ ಜನರಲ್ ಅವರ ಹೇಳಿಕೆಯನ್ನೂ ನ್ಯಾಯಪೀಠ ಶ್ಲಾಘಿಸಿದೆ ಇದೇ ವೇಳೆ ನ್ಯಾಯಪೀಠಕ್ಕೆ ಮುಚ್ಚಿದ ಲಕೋಟೆಯೊಂದನ್ನು ಸಲ್ಲಿಸಿರುವ ರಾಜ್ಯ ಸರ್ಕಾರ, 'ಒಂದು ವೇಳೆ ನ್ಯಾಯಾಲಯ ಕೆಪಿಎಸ್‌ಸಿ ಹಗರಣದ ತನಿಖೆ ನಡೆಸಲು ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಿದರೆ ಅದಕ್ಕಾಗಿ ಮೂವರು ಐಪಿಎಸ್ ಅಧಿಕಾರಿಗಳನ್ನು ಪರಿಗಣಿಸಬಹುದು' ಎಂದು ಮೂವರು ಅಧಿಕಾರಿಗಳ ಹೆಸರುಗಳನ್ನು ನಮೂದಿಸಿದೆ ಪ್ರಕರಣದಲ್ಲಿ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರಾದ ವಿ.ಲಕ್ಷ್ಮಿನಾರಾಯಣ, ಎಂ.ಎಸ್. ಭಾಗವತ್ ಮತ್ತು ಕೆಪಿಎಸ್‌ಸಿ ಪರ ಪದಾಂಕಿತ ಹಿರಿಯ ವಕೀಲ ಪಿ.ಎಸ್.ರಾಜಗೋಪಾಲ್ ವಾದ ಮಂಡಿಸಿದ್ದಾರೆ.

ಶೋಭಿತಾಗೆ 574 ಅಂಕ

ಮೈಸೂರು, ಮೇ 5– ಮೈಸೂರಿನ ಶ್ರೀರಾಂಪುರದಲ್ಲಿನ ಶ್ರೀ ಆದಿ ಚುಂಚನಗಿರಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ಎಂ.ಎನ್.ಶೋಭಿತಾ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 91.84 ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ.



ಕನ್ನಡದಲ್ಲಿ 122, ಇಂಗ್ಲಿಷ್ 95, ಹಿಂದಿ 97, ಗಣಿತ 75, ವಿಜ್ಞಾನ 94 ಹಾಗೂ ಸಮಾಜವಿಜ್ಞಾನ 91 ಸೇರಿ ಒಟ್ಟು 574 ಅಂಕ ಗಳಿಸಿದ್ದಾಳೆ. ಈಕೆ ವಿವೇಕಾನಂದ ನಗರದ ನಿವಾಸಿ, ವಿಶ್ವಕರ್ಮ ಬಡಗಿ ಕೆಲಸಗಾರ ಸಂಘದ ಅಧ್ಯಕ್ಷರು ಹಾಗೂ ಕೆಪಿಸಿಸಿ ಓಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ಮೊಗಣ್ಣಾಚಾರ್ ಹಾಗೂ ಆರ್. ನಾಗರತ್ನ ದಂಪತಿಯ ದ್ವಿತೀಯ ಪುತ್ರಿ.

ಮೈಸೂರಲ್ಲಿ ಮುಸ್ಸಂಜೆ ವೇಳೆಗೆ ಸುರಿದ ಸಾಧಾರಣ ಮಳೆ

ಮೈಸೂರು, ಮೇ 5(ಪಿಎಂ)– ಮೈಸೂರು ನಗರದ ಹಲವು ಭಾಗಗಳಲ್ಲಿ ಸೋಮವಾರ ಸಂಜೆ ಜಿಟಿ ಜಿಟಿ ಮಳೆಯಾಗಿದ್ದು, ಬೆಳಗ್ಗೆಯಿಂದ ಬಿಸಿಲಿನ ಬೇಗೆಯಿಂದ ಕಂಗಟ್ಟಿದ್ದ ನಗರದ ಜನತೆಗೆ ಮುಸ್ಸಂಜೆ ಮಳೆ ಒಂದಿಷ್ಟು ತಂಪೆರೆಯಿತು.

ಗುಡುಗು–ಮಿಂಚಿನೊಂದಿಗೆ ಆರಂಭವಾದ ಮಳೆ ಮೈಸೂರು ಹೃದಯಭಾಗವೂ ಸೇರಿದಂತೆ ಬಹುತೇಕ ಕಡೆಗಳಲ್ಲಿ ಅರ್ಧ ತಾಸಿಗೂ ಹೆಚ್ಚು ಕಾಲ ಜಿಟಿ ಜಿಟಿಯಾಗಿ ಸುರಿಯಿತು. ನಗರದ ಪ್ರಮುಖ ವೃತ್ತ ಹಾಗೂ ರಸ್ತೆಗಳು ಜಲಾವೃತಗೊಂಡಿದ್ದವು. ನಜರ್‌ಬಾದ್, ಆಲನಹಳ್ಳಿ, ಬೋಗಾದಿ, ಎನ್‌ಆರ್ ಮೊಹಲ್ಲಾ ಸೇರಿದಂತೆ ನಗರದ ಭಾಗಶಃ ಭಾಗದಲ್ಲಿ ಸಾಧಾರಣಾ ಮಳೆಯಾಗಿದೆ.


ಮೈಸೂರಿನ ಎನ್‌ಆರ್ ಮೊಹಲ್ಲಾದ ಶನೇಶ್ವರಸ್ವಾಮಿ ಕಮಾನು ವೃತ್ತದ ಬಳಿ ಸೋಮವಾರ ಸಂಜೆ ಕಂಡು ಬಂದ ಮಳೆ ದೃಶ್ಯ.

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮೈಸೂರು, ಕೊಡಗು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಮೇ 7ರವರೆಗೆ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣ ಮಳೆ ಬರುವ ಸಾಧ್ಯತೆ ಇದೆ ಎಂದು ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಐತಿಹಾಸಿಕ ಕೆಂಪು ಕೋಟೆ ಸ್ವಾಧೀನ ಕೋರಿದ್ದ ಅರ್ಜಿ ತಿರಸ್ಕರಿಸಿದ ಸುಪ್ರೀಂಕೋರ್ಟ್

ನವದೆಹಲಿ, ಮೇ.5– ಮೊಘಲ್ ದೊರೆ ಎರಡನೇ ಬಹದ್ದೂರ್ ಷಾ ಜಾಫರ್ ಅವರ ಮರಿಮೊಮ್ಮಗನ ಪತ್ನಿ ಎಂದು ವಾದಿಸಿ, ಐತಿಹಾಸಿಕ ಕೆಂಪು ಕೋಟೆಯ ಸ್ವಾಧೀನ ಕೇಳಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಳ್ಳಿ ಹಾಕಿದೆ.



ದೆಹಲಿ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾದ ಮೇಲ್ಮನವಿ ಅರ್ಜಿ ಯನ್ನು ಅನರ್ಹ ಹಾಗೂ ತಪ್ಪು ಕಲ್ಪನೆ ಎಂದು ಹೇಳಿದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ಸಂಜಯ್ ಕುಮಾರ್ ಅವರಿದ್ದ ಪೀಠ ಅರ್ಜಿಯನ್ನು ತಳ್ಳಿ ಹಾಕಿದೆ.

ಅಲ್ಲದೆ ಅರ್ಜಿದಾರರ ಪರ ವಕೀಲೆ ಸುಲ್ತಾನ ಬೇಗಂ ಅವರಿಗೆ ಅರ್ಜಿಯನ್ನು ಹಿಂಪಡೆಯಲು ಅವಕಾಶ ನೀಡಲೂ ನಿರಾಕರಿಸಿತು. ಅರ್ಜಿದಾರರು ದೇಶದ ಮೊದಲ ಸ್ವಾತಂತ್ರ್ಯ ಹೋರಾಟಗಾರನ ಕುಟುಂಬಸ್ಥೆ ಎನ್ನುವುದನ್ನು ಅವರ ವಕೀಲರು ಕೋರ್ಟ್‌ಗೆ ಹೇಳಿದರು.

'ಕೇವಲ ಕೆಂಪು ಕೋಟೆ ಮಾತ್ರ ಯಾಕೆ? ಆಗ್ರಾ, ಫತೇಪುರ ಸಿಕ್ರಿ ಬೇಡವೇ?' ಎಂದು ಸಿಜೆಐ ಪ್ರಶ್ನಿಸಿದರು. ಕಳೆದ ವರ್ಷ ಡಿಸೆಂಬರ್ 13ರಂದು ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠವು, 2021 ಡಿಸೆಂಬರ್‌ನಲ್ಲಿ ಹೈಕೋರ್ಟ್ ಏಕ ಸದಸ್ಯ ಪೀಠದ ತೀರ್ಪಿನ ವಿರುದ್ಧ ಬೇಗಂ ಸಲ್ಲಿಸಿದ ಮೇಲ್ಮನವಿಯನ್ನು ವಜಾಗೊಳಿಸಿತ್ತು.

1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಕುಟುಂಬದ ಆಸ್ತಿಯನ್ನು ಕಸಿದುಕೊಂಡರು. ನಂತರ ಚಕ್ರವರ್ತಿಯನ್ನು ದೇಶದಿಂದ ಗಡೀಪಾರು ಮಾಡಲಾಯಿತು. ಕೆಂಪು ಕೋಟೆಯ ಸ್ವಾಧೀನವನ್ನು ಮೊಘಲರಿಂದ ಬಲವಂತವಾಗಿ ಕಸಿದುಕೊಳ್ಳಲಾಯಿತು ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

ಏಕೆಂದರೆ ಅವರು ತಮ್ಮ ಪೂರ್ವಜ ಎಡರನೇ ಬಹದ್ದೂರ್ ಷಾ ಜಾಫರ್ ಅವರಿಂದ ಕೆಂಪುಕೋಟೆ ಆನುವಂಶಿಕವಾಗಿ ಬೇಗಂ ಅವರಿಗೆ ಸಲ್ಲಬೇಕು. ಭಾರತ ಸರ್ಕಾರವು ಆಸ್ತಿಯನ್ನು ಕಾನೂನು ಬಾಹಿರವಾಗಿ ವಶಪಡಿಸಿಕೊಂಡಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತದಲ್ಲದೇ, ಕೆಂಪು ಕೋಟೆಯನ್ನು ಅರ್ಜಿದಾರರಿಗೆ ಹಸ್ತಾಂತರಿಸಬೇಕು ಅಥವಾ ಸಾಕಷ್ಟು ಪರಿಹಾರವನ್ನು ನೀಡಲು ಕೇಂದ್ರಕ್ಕೆ ನಿರ್ದೇಶನ ನೀಡಬೇಕೆಂದು ಕೋರಲಾಗಿತ್ತು.

ಹಾಸನ ಮಿತ್ರ

ರೈತರ ಜಮೀನು ಹರಾಜು ಹಾಕಲು ಮುಂದಾದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಮುಂದೆ ರೈತ ಸಂಘ ಪ್ರತಿಭಟನೆ


ರೈತನ ಮೇಲೆ ಹಲ್ಲೆ ಮಾಡಿ, ಕೈ ಮುರಿದಿರುವುದನ್ನು ಖಂಡಿಸಿ ಬ್ಯಾಂಕ್ ಮುಂದೆ ರೈತ ಸಂಘ ಪ್ರತಿಭಟನೆ ನಡೆಸಿತು.

ಹಾಸನ, ಮೇ 5– ಜಮೀನು ಹರಾಜಿಗೆ ಇಟ್ಟಿರುವುದನ್ನು ಕೇಳಲು ಹೋದ ರೈತನ ಮೇಲೆ ಹಲ್ಲೆ ಮಾಡಿ, ಕೈ ಮುರಿದಿರುವುದನ್ನು ಖಂಡಿಸಿ ರೈತ ಸಂಘದಿಂದ ಕೆ.ಆರ್. ಪುರಂ ಬಳಿ ಇರುವ ಕರ್ನಾಟಕ ಗ್ರಾಮೀಣ ಬ್ಯಾಂಕ್ ಮುಂದೆ ರಸ್ತೆ ತಡೆ ಮಾಡಿದಲ್ಲದೇ ಬ್ಯಾಂಕ್ ಮುಖ್ಯ ಬಾಗಿಲಿಗೆ ಬೀಗ ಹಾಕಲು ಮುಂದಾದ ಘಟನೆ ಸೋಮವಾರ ಮಧ್ಯಾಹ್ನ ನಡೆದಿದೆ.

ಇದೆ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಮಾಧ್ಯಮದೊಂದಿಗೆ ಮಾತನಾಡಿ, ಕಳೆದ 15 ದಿನಗಳ ಹಿಂದೆ ಊರಿಗೆ ಹೋಗಿ ತಮಟೆ ಹೊಡೆದು ಮೃತರಾಗಿರುವ ಶಾಂತೇಗೌಡರ ಪುತ್ರ ಶಿವಕುಮಾರ್ ಅವರ ಜಮೀನು ಹರಾಜು ಹಾಕಲು ಬ್ಯಾಂಕಿನ ಮ್ಯಾನೇಜರ್ ಹೊರಟಿದ್ದರು. ಜಮೀನು ಹರಾಜು ಹಾಕುತ್ತೇವೆ. ಯಾರಾದರೂ ಖರೀದಿ ಮಾಡಬಹುದು ಎಂದಿದ್ದಾರೆ. ನಮಗೆ ನೋಟಿಸ್ ಕೊಟ್ಟಿಲ್ಲ. ಯಾಕೆ ಹರಾಜು ಹಾಕುತ್ತಿದ್ದೀರಿ ಎಂದು ಜಮೀನು ಮಾಲೀಕರು ಬ್ಯಾಂಕಿನವರಿಗೆ ಕೇಳಿದ್ದು, ಇದು ಕೋರ್ಟ್ ಆದೇಶ ಎಂದಿದ್ದಾರೆ. ಈ ವೇಳೆ ಒಬ್ಬರಿಗೊಬ್ಬರು ಕೈಕೈ ಮಿಲಾಯಿಸಿದ್ದಾರೆ. ಈ ವೇಳೆ ಬ್ಯಾಂಕಿನವರು ಸಾಲ ಪಡೆದವನನ್ನು ನೂಕಿದಾಗ ಅವರು ಚರಂಡಿಗೆ ಬಿದ್ದು, ಕೈ ಮುರಿದು ಹೋಗಿದೆ ಎಂದು ದೂರಿದರು. ಈ ಬಗ್ಗೆ ಬ್ಯಾಂಕಿನವರಿಂದ ವಿಚಾರಣೆ ಮಾಡಲು ರೈತ ಸಂಘದಿಂದ ಬಂದಿದ್ದೇವೆ ಈ ಗ್ರಾಮೀಣ ಬ್ಯಾಂಕ್ ಹಾಸನದಲ್ಲಿ ಬಾಲ ಬಿಚ್ಚುತ್ತಿದ್ದಾರೆ. ಕೇಂದ್ರ ಸರಕಾರದವರೇ ರೈತರ ಹಣ ಮುಟ್ಟಲು ಹೆದರುತ್ತಿದ್ದಾರೆ. ರಾಜ್ಯ ಸರಕಾರದವರು ಹಣ ವಸೂಲಿ ಮಾಡಲು ಹೇಳಿರುವುದಾಗಿ ನೇರವಾಗಿ ಈ ಬ್ಯಾಂಕಿನವರು ಹೇಳುತ್ತಿದ್ದಾರೆ. ನಮ್ಮ ಹೋರಾಟಕ್ಕೆ ಉತ್ತರ ಕೊಡಲಿ. ನಾವು ಹೇಳುವುದಾಗಿ ತಿಳಿಸಿದರು.

ಬ್ಯಾಂಕಿನವರು ಪ್ರತಿಭಟನಾಕಾರರ ಬಳಿ ಬಂದು ಸಮಸ್ಯೆ ಆಲಿಸಿದರು. ಈ ಬ್ಯಾಂಕ್ ವಿಲೀನ ಆಗಿರುವುದರಿಂದ ಸದ್ಯಕ್ಕೆ ಹರಾಜು ಪ್ರಕ್ರಿಯೆ ನಡೆಸುವುದಿಲ್ಲ. ರೈತರಿಗೆ ಸ್ಪಂದಿಸುವ ರೀತಿ ನಡೆದುಕೊಳ್ಳುವುದಾಗಿ ಹೇಳುವ ಮೂಲಕ ರೈತರ ಪ್ರತಿಭಟನೆ ಶಾಂತಗೊಳಿಸಿದರು.

ರೈತ ಸಂಘದ ಬಿಟ್ಟಗೌಡನಹಳ್ಳಿ ಮಂಜು, ಆಲದಹಳ್ಳಿ ಶಶಿಧರ್, ರಾಜಣ್ಣ, ಶಿವಕುಮಾರ್, ಸೋಮಶೇಖರ್, ಪಾಲಾಕ್ಷ, ಶಂಕ ಮಂಜಣ್ಣ, ಮನು ಉಪಸ್ಥಿತರಿದ್ದರು.

ಮೇ.20 ರಂದು ಅಂಗನವಾಡಿ ಕೇಂದ್ರ ಬಂದ್

ಹಾಸನ, ಮೇ 5– ಸಾಮಾಜಿಕ ನ್ಯಾಯದ ಹಿನ್ನೆಲೆ ಈ ಯೋಜನೆಯನ್ನು ಕಾಯಂ ಮಾಡಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೇ 20 ರಂದು ಅಂಗನವಾಡಿ ನೌಕರರ ಮುಷ್ಕರ ಹಮ್ಮಿಕೊಂಡಿದ್ದು, ಈ ವೇಳೆ ಸಾಮೂಹಿಕ ಬಂಧನಕ್ಕೊಳಗಾಗುವುದಾಗಿ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಎಂ.ಬಿ. ಪುಷ್ಪ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಅಂಗನವಾಡಿ ನೌಕರರು 50 ವರ್ಷಗಳಿಂದ ಐಸಿಡಿಎಸ್ ಅಡಿಯಲ್ಲಿ ದುಡಿಯುತ್ತಿದ್ದಾರೆ. ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಕಾಯಂ ಮಾಡಬೇಕು. ಕಾಯಂ ಮಾಡುವ ತನಕ ಕನಿಷ್ಠ ವೇತನ ನೀಡಬೇಕು. ಫಲಾನುಭವಿಗಳ ಘಟಕ ವೆಚ್ಚ ಹೆಚ್ಚಳ ಮಾಡಬೇಕೆಂಬ ಬೇಡಿಕೆಗಳನ್ನು ನಿರಂತರವಾಗಿ ಕೇಳಲಾಗುತ್ತಿದೆ. ಹೊಸದಾಗಿ ತಂದಿರುವ 4 ಸಂಹಿತೆಗಳನ್ನು ರದ್ದುಗೊಳಿಸಿ ಐಸಿಡಿಎಸ್ ಯೋಜನೆಗೆ ಬಜೆಟ್ ಅನ್ನು ಹೆಚ್ಚಿಸಬೇಕು. 26 ಸಾವಿರ ಕನಿಷ್ಠ ವೇತನ, 10 ಸಾವಿರ ಮಾಸಿಕ ಪಿಂಚಣಿ ಕೊಡಬೇಕು ಎಂದು ಒತ್ತಾಯಿಸಿದರು. ಟಿಹೆಚ್‌ಆರ್ ಮೂಲಕ ಫಲಾನುಭವಿಗಳ ಪೋಷಣ್ ಟ್ರಾಕ್ಟರ್‌ನ ಕೆಲಸಗಳಲ್ಲಿ ಅಂಗನವಾಡಿ ನೌಕರರಿಗೆ ತೊಂದರೆ ಕೊಡಬಾರದು. 2011 ರಿಂದ ನಿವೃತ್ತಿ ಆದ ಎಲ್ಲಾ ಕಾರ್ಯಕರ್ತೆ, ಸಹಾಯಕಿಯರಿಗೆ ಗ್ರಾಚ್ಯುಟಿ ನೀಡಬೇಕು. ಈಗಾಗಲೇ ಬಿಡುಗಡೆ ಆದವರಿಗೆ ಗ್ರಾಚ್ಯುಟಿ ಲೆಕ್ಕಾಚಾರ ಪ್ರಕಾರ ನೀಡದೇ ಸಾವಿರಾರು ರೂಗಳು ಕಡಿತ ಆಗಿರುವುದನ್ನು ವಾಪಸ್ ನೀಡಬೇಕು ಹಾಗೂ ಇನ್ನುಂದೆ ಗ್ರಾಚ್ಯುಟಿ ಹಣ ಬಿಡುಗಡೆ ಮಾಡುವವರಿಗೆ ಸರಿಯಾದ ಕ್ರಮದಲ್ಲಿ ಲೆಕ್ಕ ಹಾಕಿ ನೀಡಬೇಕು ಎಂದು ಆಗ್ರಹಿಸಿದರು. ಈ ಎಲ್ಲಾ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೇ 20 ರಂದು ಅಂಗನವಾಡಿ ಕೇಂದ್ರಗಳನ್ನು ಬಂದ್ ಮಾಡಿ, ಸಾಮೂಹಿಕ ಬಂಧನಕ್ಕೊಳಗಾಗುವ ಮುಖಾಂತರ ಸಾರ್ವತ್ರಿಕ ಮುಷ್ಕರದಲ್ಲಿ ಪಾಲ್ಗೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಮಂಜುಳಾ, ಖಜಾಂಚಿ ಜೆ.ಪಿ. ಶೈಲಜಾ, ಜಿಲ್ಲಾ ಕಾರ್ಯದರ್ಶಿ ಟಿ.ಹೆಚ್. ಜಯಂತಿ, ತಾಲೂಕು ಅಧ್ಯಕ್ಷೆ ಎನ್.ಕೆ ನಾಗಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಜರೀನಾ ಬಾನು ಇತರರಿದ್ದರು.

6 ಡಿವೈಎಸ್ಪಿ, 27 ಪಿಐ ವರ್ಗಾವಣೆ

ಮೈಸೂರು, ಮೇ 5(ಎಸ್‌ಪಿಎನ್)– ರಾಜ್ಯ ಪೊಲೀಸ್ ಮಂಡಳಿಯ ನಿರ್ದೇಶನದಂತೆ ವಿವಿಧ ಠಾಣೆಯ 27 ಮಂದಿ ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ 6 ಮಂದಿ ಡಿವೈಎಸ್ಪಿ ಅವರನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಸೋಮವಾರ ಆದೇಶಿಸಿದೆ.

ಮೈಸೂರು ಮೇಟಗಳ್ಳಿ ಠಾಣೆಯ ಇನ್ಸ್‌ಪೆಕ್ಟರ್ ಆರ್.ದಿವಾಕರ್ ಅವರನ್ನು ಮಂಡಿ ಠಾಣೆಗೆ, ನಂಜನಗೂಡು ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ವೈ.ಎಸ್.ಚಂದ್ರಶೇಖರ್ ಅವರನ್ನು ತಿ.ನರಸೀಪುರ ತಾಲೂಕಿನ ತಲಕಾಡು ಠಾಣೆಗೆ, ಮೈಸೂರು ಜಿಲ್ಲೆ ಸಾಲಿಗ್ರಾಮ ಠಾಣೆಯ ಇನ್ಸ್‌ಪೆಕ್ಟರ್ ಜಿ.ಕೃಷ್ಣರಾಜು ಅವರನ್ನು ಕೊಡಗು ಜಿಲ್ಲೆ ಶನಿವಾರ ಸಂತೆ ಠಾಣೆಗೆ, ಚಾಮರಾಜನಗರ ಜಿಲ್ಲೆ ಡಿಎಸ್‌ಬಿಯ ಇನ್ಸ್‌ಪೆಕ್ಟರ್ ಎಲ್.ಸಿ. ಶ್ರೀಧರ್ ಅವರನ್ನು ಮಂಡ್ಯ ಸೆಸ್ಕ್ ಜಾಗೃತ ದಳಕ್ಕೆ ವರ್ಗಾವಣೆ ಮಾಡಲಾಗಿದೆ ಎಂದು ಡಿಜಿ ಮತ್ತು ಐಜಿ ಪರವಾಗಿ ಹಿರಿಯ ಐಪಿಎಸ್ ಅಧಿಕಾರಿ ಸೌಮೇಂದು ಮುಖರ್ಜಿ ಆದೇಶಿಸಿದ್ದಾರೆ.

6 ಮಂದಿ ಡಿವೈಎಸ್ಪಿ ವರ್ಗಾವಣೆ: ಈ ವೇಳೆ ರಾಜ್ಯದ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದ 6 ಮಂದಿ ಡಿವೈಎಸ್ಪಿ ಅವರನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿದೆ. ಈ ಅಧಿಕಾರಿಗಳ ಕರ್ತವ್ಯದಿಂದ ಬಿಡುಗಡೆ ಹಾಗೂ ಹಾಜರಾತಿ ಆಯಾಯ ಘಟಕಾಧಿಕಾರಿಗಳು ಕ್ರಮವಹಿಸುವಂತೆ ಸೂಚಿಸಿದ್ದಾರೆ.

ಮಳೆಗಾಲದಲ್ಲಿ ವೈರಸ್ ಹಾವಳಿ; ಎಚ್ಚರಿಕೆ ವಹಿಸಲು ಸಲಹೆ

ಮೈಸೂರು, ಮೇ 5(ಎಸ್‌ಪಿಎನ್)– ಪ್ರಸ್ತುತ ಮಳೆಗಾಲ ಆರಂಭವಾಗುತ್ತಿದೆ. ಮಳೆಗಾಲದಲ್ಲಿ ಉತ್ಪತ್ತಿಯಾಗುವ ವೈರಸ್‌ಗಳು ಹಿರಿಯ ನಾಗರಿಕರಿಗೆ ಹರಡದಂತೆ ಎಚ್ಚರಿಕೆ ವಹಿಸಬೇಕು ಎಂದು ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಡಾ.ಕೆ. ಕುಮಾರನ್ ಸಲಹೆ ನೀಡಿದರು.


ಮೈಸೂರು ಜಯಲಕ್ಷ್ಮೀಪುರಂ ಹಿರಿಯ ನಾಗರಿಕ ಪರಿಷತ್ ಕಚೇರಿ ಆವರಣದ ಸರಸ್ವತಿ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ 'ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕ್ರಮಗಳು' ಕುರಿತು ವಿಶೇಷ ಉಪನ್ಯಾಸ ಹಾಗೂ ಸದಸ್ಯರೊಂದಿಗೆ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದರು.

ಜನರು ತಮ್ಮ ಮನೆ ಸುತ್ತಮುತ್ತಲಿನ ಚರಂಡಿ ಸ್ವಚ್ಛತೆ ಮಾಡಬೇಕು. ಮಳೆನೀರು ನಿಲ್ಲದಂತೆ ಕ್ರಮವಹಿಸಬೇಕು. ಸಮುದಾಯದಲ್ಲಿ ವೈರಸ್ ಮೂಲಕ ಸಾಂಕ್ರಾಮಿಕ ರೋಗ ಹರಡದಂತೆ ಎಚ್ಚರಿಕೆ ವಹಿಸಬೇಕು. ವೈರಸ್ ಮೂಲಕ ಒಬ್ಬರಿಂದ ಒಬ್ಬರಿಗೆ ಮಲೇರಿಯಾ, ಕಾಲರಾ, ಡೆಂಗ್ಯೂ ವೈರಸ್ ಹರಡದಂತೆ ಸಮುದಾಯದಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ನಾವು ವಾಸಿಸುವ ಪರಿಸರ ಸ್ವಚ್ಛತೆ ಇಲ್ಲದಿದ್ದರೆ ರೋಗಗಳ ಉತ್ಪತ್ತಿಗೆ ನಾಂದಿ. ಸ್ಥಳೀಯ ಆಡಳಿತ ರೋಗ ಮುಕ್ತ ನಗರ ಇಲ್ಲವೇ ಗ್ರಾಮವಾಗಿಸಲು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಅಂತೆಯೇ ಮಳೆಗಾಲ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸಾಂಕ್ರಾಮಿಕ ರೋಗ ಹಿರಿಯರಲ್ಲಿ ಕಾಣಿಸಿಕೊಳ್ಳುತ್ತವೆ. ಈ ಕುರಿತು ಎಚ್ಚರಿಕೆ ವಹಿಸಿದರೆ, ಮುಂದಾಗುವ ಅನಾಹುತ ತಪ್ಪಿಸಬಹುದು ಎಂದು ಮಾಹಿತಿ ನೀಡಿದರು.

ಸಾರ್ವಜನಿಕರು, ಶುಚಿತ್ವವಿಲ್ಲದ ಆಹಾರ ಸೇವಿಸಬಾರದು. ಹಾಗೆಯೇ ಕಲುಷಿತ ನೀರು ಸೇವನೆಯಿಂದ ವೈರಸ್ ದೇಹಕ್ಕೆ ಹೋಗುವ ಸಾಧ್ಯತೆಯಿದ್ದು, ಸ್ವಲ್ಪ ಎಚ್ಚರ ತಪ್ಪಿದರೂ ರೋಗಗಳನ್ನು ಬರಮಾಡಿಕೊಂಡಂತೆ. ನಮ್ಮ ದೇಶದಲ್ಲಿ ಕೋವಿಡ್–19 ಕಾಣಿಸಿಕೊಳ್ಳುವ ಮೊದಲು ಸಾವು ಹೆಚ್ಚಾಗಿತ್ತು. ಎರಡನೇ ಬಾರಿಗೆ ಅದರ ಪರಿಣಾಮ ಸಮುದಾಯದಲ್ಲಿ ಕಡಿಮೆಯಿತ್ತು. ಭಾರತದಲ್ಲಿ ಲಸಿಕೆ ವಿತರಣೆಯಾದ ನಂತರ ವೈರಸ್ ಹರಡುವಿಕೆ ಕಡಿಮೆ ಆಯ್ತು ಎಂದು ವಿವರಿಸಿದರು.

ಪ್ರಸ್ತುತ ಸಾಂಕ್ರಾಮಿಕ ರೋಗಗಳು, ಸಮುದಾಯದಲ್ಲಿ ಕಾಣಿಸಿಕೊಂಡರೂ ವೈದ್ಯರ ಸಲಹೆಯಂತೆ ಔಷಧಿ ಪಡೆದರೆ, ನಿಯಂತ್ರಣಕ್ಕೆ ತರಬಹುದು. ಕೊರೊನಾ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಹಿರಿಯರಿಗೆ ಕೊರೊನಾ ಹರಡದಂತೆ ಮೊದಲು ಲಸಿಕೆ ನೀಡಿದ ಪರಿಣಾಮ ಅಷ್ಟೊಂದು


'ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕ್ರಮಗಳು' ಕುರಿತು ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಡಾ.ಕೆ.ಕುಮಾರನ್ ಉಪನ್ಯಾಸ ನೀಡಿದರು.

ಸಾವು–ನೋವು ಸಂಭವಿಸಲಿಲ್ಲ. ಅಂತೆಯೆ ಸಾಂಕ್ರಾಮಿಕ ರೋಗದಿಂದ ಬಳಲುವ ವ್ಯಕ್ತಿ ಮಾಸ್ಕ್ ಧರಿಸಿದರೆ ಬೇರೆಯವರಿಗೆ ವೈರಸ್ ಹರಡದಂತೆ ತಡೆಗಟ್ಟಬಹುದು ಎಂದು ತಿಳಿಸಿದರು.

ಸಾರ್ವಜನಿಕವಾಗಿ ಕಾಣಿಸಿಕೊಳ್ಳುವ ಹೆಚ್ಚಿನ ಕಾಯಿಲೆಗಳು ಸೋಂಕುಗಳಿಂದ ಕೂಡಿರುತ್ತವೆ.. ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ರೋಗಳಾಗಿವೆ. ಹಾಗಾಗಿ ಸಾಂಕ್ರಾಮಿಕ ರೋಗ ಯಾರೋ ಒಬ್ಬರಿಗೆ ಬಂದು ಹೋಗುವಂತಹದ್ದಲ್ಲ. ಮಧುಮೇಹ ಇರುವವರು ಸೂಕ್ತ ಚಿಕಿತ್ಸೆ ಪಡೆದು ಆಹಾರ ತಜ್ಞರ ಸಲಹೆಯಂತೆ ಆಹಾರ ಸೇವನೆ ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ, ಈ ಕಾಯಿಲೆ ಟಿ.ಬಿ.ಕಾಯಿಲೆಯಾಗಿ ಪರಿವರ್ತಿತವಾಗಬಹುದು. ಹಿರಿಯರು ಇರುವ ಮನೆಗಳಲ್ಲಿ ವೈರಸ್‌ಗಳ ತಡೆಗಟ್ಟುವಿಕೆ ಅತೀ ಮುಖ್ಯ ಎಂದು ಹೇಳಿದರು.

ವೇದಿಕೆಯಲ್ಲಿ ಹಿರಿಯ ನಾಗರಿಕ ಪರಿಷತ್ ಅಧ್ಯಕ್ಷ ಡಾ.ಎಚ್.ಎಂ.ನಾಗರಾಜು, ಸದಸ್ಯರಾದ ಸಿ.ರಾಜು, ಸಿ.ಬಾಲಚಂದ್ರ, ಎನ್.ಸ್ವಾಮಿಗೌಡ, ಪಿ.ಶ್ರೀಧರ, ಕೆ.ಎಸ್.ಕೃಷ್ಣ, ಎಸ್.ಪಿ.ವೆಂಕಟೇಶ, ಎಸ್.ಸುರೇಶ್, ವಿ.ಭಾನುರೇಖಾ, ಎಸ್.ಮನೋರಮ, ಎಸ್.ನಿರ್ಮಲ, ಸ್ವಾಮಿ, ಡಿ.ಶ್ರೀನಿವಾಸ, ಜಯಪಾಲ, ಜವರೇಗೌಡ, ವಿ.ಎನ್.ಆಚಾರ್, ಎಸ್.ವಿ.ರಾಮನಾಥ್ ಸೇರಿದಂತೆ ಇತರರಿದ್ದರು.


ಶ್ರೀಮತಿ ರಾಧಾ ಮತ್ತು ಎನ್.ಎಸ್.ವಿಜೇಂದ್ರ ರವರಿಗೆ
೩೩ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು
ಶುಭಕೋರುವವರು: ಕುಟುಂಬವರ್ಗದವರು ಮತ್ತು ಸ್ನೇಹಿತರು, ನಾಗನಹಳ್ಳಿ, ಮೈಸೂರು ತಾ॥.

ತೋಟಗಾರಿಕೆ ಬೆಳೆಗಳು ಆರ್ಥಿಕ ಸ್ವಾವಲಂಬನೆಗೆ ಸಹಕಾರಿ

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಹೆಚ್.ಎಂ.ನಾಗರಾಜು ಅಭಿಮತ


ರೈತರ ಶಿಬಿರದಲ್ಲಿ ಹೆಚ್.ಎಂ. ನಾಗರಾಜು ಸಮಾರೋಪ ಭಾಷಣ ಮಾಡಿದರು.

ಮೈಸೂರು, ಮೇ 5– ತೋಟಗಾರಿಕೆ ಬೆಳೆಗಳು ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿವೆ ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಹೆಚ್.ಎಂ. ನಾಗರಾಜು ತಿಳಿಸಿದರು.

ಸುತ್ತೂರು ಶ್ರೀ ಕ್ಷೇತ್ರದಲ್ಲಿ ರೈತರ ಶಿಬಿರದ ಸಮಾರೋಪ ಭಾಷಣ ಮಾಡುತ್ತಾ ಅವರು, ರೈತರು ಸಾವಯವ ಕೃಷಿಗೆ ಒತ್ತುಕೊಡಬೇಕು, ಭೂಮಿಗೆ ನೈಸರ್ಗಿಕ ಗೊಬ್ಬರಗಳನ್ನು ನೀಡುವುದರಿಂದ ಉತ್ತಮ ಪೋಷಕಾಂಶಗಳು ಬೆಳೆಗೆ ದೊರೆಯುತ್ತವೆ. ರೈತರು ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು ಮಣ್ಣು ನೀರು ಪರೀಕ್ಷೆಗಳನ್ನು ಆಗಾಗ್ಗೆ ಮಾಡಿಸಬೇಕು. ಅಡಿಕೆ, ತೆಂಗು, ಮಾವು, ಬಾಳೆಯ ಜೊತೆಗೆ ಅಲಂಕಾರಿಕ ಹೂವುಗಳನ್ನು ಬೆಳೆಯಲು ತೋಟಗಾರಿಕೆ ಇಲಾಖೆಯಿಂದ ಸಹಾಯ ಧನ ಸಿಗುತ್ತದೆ ಎಂದು ಹೇಳಿದರು.

ಎಸ್‌ಬಿಐ ಲೀಡ್ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ಬಿ.ಎನ್. ನಾಗೇಶ್, ಕೃಷಿಚಟುವಟಿಕೆಗೆ ಸಂಬಂಧಿಸಿದ ಉತ್ತಮ ಮಾಹಿತಿಗಳು ಶಿಬಿರದಿಂದ ದೊರಕಿವೆ. ಬ್ಯಾಂಕುಗಳು ಕೃಷಿಗೆ ವಿಶೇಷ ಮಹತ್ವವನ್ನು ಕೊಟ್ಟು ಸಾಲ ಸೌಲಭ್ಯಗಳನ್ನು ಒದಗಿಸಿವೆ. ಕೃಷಿಗೆ ಯೋಗ್ಯವಾದ ಭೂಮಿಯನ್ನು ಪಾಳು ಬೀಳಿಸದೆ ವ್ಯವಸಾಯ ಮಾಡಬೇಕು. ರೈತರು ಬೆಳೆದ ಬೆಳೆಗಳನ್ನು ಸಾಧ್ಯವಾದಷ್ಟು ಸ್ವತಃ ಸಂಸ್ಕರಿಸಿ ನೇರವಾಗಿ ಗ್ರಾಹಕರಿಗೆ ಮಾರಿದರೆ ಉತ್ತಮ ಬೆಲೆ ಸಿಗುತ್ತದೆ ಎಂದರು.

ಸಹಜ ಸಮೃದ್ಧ ಸಂಸ್ಥೆ ಜಿ. ಕೃಷ್ಣಪ್ರಸಾದ್, ಕೃಷಿಯ ಮೂಲ ಬೀಜ. ಆಯಾಯ ಭೌಗೋಳಿಕ ಸನ್ನಿವೇಶಕ್ಕೆ ಹೊಂದಿಕೊಳ್ಳುವ ಬಿತ್ತನೆ ಬೀಜಗಳನ್ನು ಬಳಕೆ ಮಾಡಬೇಕು. ಪ್ರಸ್ತುತ ಮಾರುಕಟ್ಟೆಯಲ್ಲಿ ದೇಶೀಯ ಬೀಜಗಳಿಗೆ ಹೆಚ್ಚು ಬೇಡಿಕೆ ಇದೆ. ಇಳುವರಿಯು ಬಿತ್ತನೆ ಬೀಜಗಳಿಂದ ಅಷ್ಟೇ ಅಲ್ಲದೆ ಅನುಸರಿಸುವ ಕೃಷಿ ಪದ್ಧತಿಯನ್ನು ಅವಲಂಬಿಸಿರುತ್ತದೆ. ವಿಷಮುಕ್ತವಾದ ವ್ಯವಸಾಯವನ್ನು ಮಾಡಬೇಕು ಎಂದು ತಿಳಿಸಿದರು. ಪ್ರಾತಿಪರ ರೈತ ಪಿ. ಶಿವಕುಮಾರಸ್ವಾಮಿ, ಬೇಸಾಯವು ಪ್ರಯೋಗಾತ್ಮಕವಾಗಿದ್ದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ ಉದ್ಯಮಶೀಲತೆ ಇರುವುದು ಬೇಸಾಯದಲ್ಲಿ. ಜನರ ಅಗತ್ಯತೆ ಅರಿತು ಸೂಕ್ತ ಬೆಳೆಗಳನ್ನು ಬೆಳೆದು ಲಾಭ ಗಳಿಸಿ ರೈತರು ಸ್ವಾವಲಂಬಿಗಳಾಗಬೇಕು. ಇದಕ್ಕೆ ಮನಸ್ಥಿತಿ ಮತ್ತು ಆತ್ಮಸ್ಥೈರ್ಯ ಬಹಳ ಮುಖ್ಯ ಎಂದು ತಿಳಿಸಿದರು.

ಮೈಸೂರು ಆಕಾಶವಾಣಿಯ ಕಾರ್ಯನಿರ್ವಾಹಕ ಎನ್. ಕೇಶವಮೂರ್ತಿ, ಭಾರತೀಯ ಕೃಷಿಗೆ ಐದು ಸಾವಿರ ವರ್ಷಗಳ ಇತಿಹಾಸವಿದ್ದು, ಹಿಂದಿನ ಕಾಲದಲ್ಲಿ ಕೃಷಿಯೇ ನಮ್ಮ ಬದುಕಾಗಿತ್ತು. ಒಂದು ತುಂಡು ಜಮೀನಿನಲ್ಲಿ ಜೀವನ ಕಲ್ಪಿಸಿಕೊಳ್ಳುವುದು ಒಂದು ಕಲೆ. ಭಾರತೀಯರು ಆಚರಿಸುವ ಹಬ್ಬಗಳು ಮತ್ತು ಕೃಷಿ ಸಂಸ್ಕೃತಿಯ ನಡುವೆ ಸಂಬಂಧವಿದೆ. ಸಮುದಾಯಗಳನ್ನು ಒಟ್ಟುಗೂಡಿಸುವ ಶಕ್ತಿ ಇರುವುದು ಕೃಷಿಗೆ ಮಾತ್ರ ಎಂದರು.

ಶಿಬಿರಾರ್ಥಿಗಳಾದ ಸ್ವಾಮಿಲವಣ, ಹೆಚ್.ಆರ್. ಶಿವಮಾದು, ಎಂ.ಪಿ. ರಾಮಶೆಟ್ಟಿ, ಶ್ರೀಮತಿ ಎಸ್.ಬಿ ಶೀತಲ, ಕೆ.ಎಸ್. ಪ್ರದೀಪ್ ಅವರುಗಳು ಅನಿಸಿಕೆಗಳನ್ನು ಹಂಚಿಕೊಂಡರು. ವೈ.ಎಸ್. ಮಂಜು ಪಟೇಲ್ ಶಿಬಿರದ ವರದಿ ಮಂಡಿಸಿದರು. ಶ್ರೀಮತಿ ಧಾನ್ಯಾ ಪ್ರಾರ್ಥಿಸಿದರು. ಡಾ. ಯು.ಎಂ. ರಕ್ಷಿತ್ ರಾಜ್ ಸ್ವಾಗತಿಸಿದರು. ಡಾ. ಬಿ.ಎನ್ ಜ್ಞಾನೇಶ್ ವಂದಿಸಿದರು. ಡಾ. ಜಿ.ಎಂ. ವಿನಯ್ ಕಾರ್ಯಕ್ರಮ ನಿರೂಪಿಸಿದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ
ನೆಹರು ವೃತ್ತ, ಅಶೋಕ ರಸ್ತೆ, ಮೈಸೂರು –570001

ಪತ್ರಿಕಾ ಪ್ರಕಟಣೆ

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ನೆಹರು ವೃತ್ತ, ಅಶೋಕ ರಸ್ತೆ, ಮೈಸೂರು, ಇದರ ಸದಸ್ಯ ಸಹಕಾರ ಸಂಘಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೇ, ಬ್ಯಾಂಕಿನ 2025 ರಿಂದ 2030 ನೇ ಸಾಲಿನ ಮುಂದಿನ ಐದು ವರ್ಷಗಳ ಅವಧಿಗೆ ಚುನಾವಣೆ ನಡೆಸಲು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಫೆಡರಲ್ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರು ದಿನಾಂಕ:15.06.2025 ಕ್ಕೆ ಚುನಾವಣಾ ದಿನಾಂಕವನ್ನು ನಿಗಧಿಪಡಿಸಿರುತ್ತಾರೆ. ಬ್ಯಾಂಕಿನ ಸದಸ್ಯ ಸಹಕಾರ ಸಂಘಗಳು ದಿನಾಂಕ:05.04.2025 ರಿಂದ 20.04.2025 ರವರೆಗೆ ಸಲ್ಲಿಸಿರುವ ಡೆಲಿಗೇಷನ್ ಫಾರಂಗಳನ್ನು ಪರಿಶೀಲಿಸಲು ಮಾನ್ಯ ಜಿಲ್ಲಾಧಿಕಾರಿಗಳು ಪರಿಶೀಲನಾಧಿಕಾರಿಗಳನ್ನು ನೇಮಿಸಿ ಆದೇಶ ಹೊರಡಿಸಿದ್ದು, ಪರಿಶೀಲನಾಧಿಕಾರಿಗಳು ಮತಕ್ಷೇತ್ರವಾರು ಡೆಲಿಗೇಷನ್ ಫಾರಂಗಳನ್ನು ಬ್ಯಾಂಕಿನ ಸಭಾಂಗಣದಲ್ಲಿ ಪರಿಶೀಲಿಸಲಿದ್ದು, ಬ್ಯಾಂಕಿನ ಸದಸ್ಯ ಸಹಕಾರ ಸಂಘಗಳು ಪರಿಶೀಲನೆಗೆ ಈ ಕೆಳಕಂಡ ದಿನಾಂಕಗಳಂದು ಈ ದಾಖಲಾತಿಗಳನ್ನು ಪರಿಶೀಲನಾಧಿಕಾರಿಗಳ ಮುಂದೆ ಹಾಜರಾಗಲು ಈಗಾಗಲೇ ನೋಟಿಸ್ ನೀಡಲಾಗಿರುತ್ತದೆ.

ನೋಟಿಸ್ ತಲುಪದ ಸದಸ್ಯ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಇದನ್ನೇ ನೋಟಿಸ್ ಎಂದು ಭಾವಿಸಿ ನಿಗಧಿಪಡಿಸಿದ ದಿನಾಂಕ ಮತ್ತು ಸಮಯದಂದು ಹಾಜರಾಗಲು ತಿಳಿಸಿದೆ.

1. ಸಭಾ ಸೂಚನಾ ಪತ್ರ, 2. ಆಡಳಿತ ಮಂಡಳಿ ಠರಾವಿನ ಮೂಲ ಪುಸ್ತಕ, 3. ಸಂಘದ ಚುನಾವಣಾ ಘೋಷಣಾ ಪತ್ರ/ಫಲಿತಾಂಶದ ಪ್ರತಿ.

ಕ್ರ.ಸಂ	ಕ್ಷೇತ್ರ	ಕ್ಷೇತ್ರವಾರು ವಿವರ	ದಿನಾಂಕ ಮತ್ತು ಸಮಯ
1	ಕ್ಷೇತ್ರ-01	ಮೈಸೂರು ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರ	08.05.2025 ರ ಬೆಳಗ್ಗೆ 10 ರಿಂದ 2 ಘಂಟೆಯವರೆಗೆ
		ಚಾಮರಾಜನಗರ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರ	08.05.2025 ರ ಮಧ್ಯಾಹ್ನ 3 ರಿಂದ 5 ಘಂಟೆಯವರೆಗೆ
2	ಕ್ಷೇತ್ರ-02	ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳ ಕ್ಷೇತ್ರ.	09.05.2025 ರ ಬೆಳಗ್ಗೆ 10 ರಿಂದ 2 ಘಂಟೆಯವರೆಗೆ
3	ಕ್ಷೇತ್ರ-03	ಬಳಕೆದಾರರ ಸಹಕಾರ ಸಂಘಗಳು (ಕನ್‌ಸ್ಯೂಮರ್ಸ್) ಹಾಗೂ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಮತ್ತು ಟಿ.ಎ.ಪಿ.ಸಿ.ಎಂ.ಎಸ್ ಕ್ಷೇತ್ರ	09.05.2025 ರ ಮಧ್ಯಾಹ್ನ 3 ರಿಂದ 5 ಘಂಟೆಯವರೆಗೆ
4	ಕ್ಷೇತ್ರ-04	ಕ್ಷೇತ್ರ (01) ರಿಂದ (03) ನ್ನು ಹೊರತುಪಡಿಸಿ ತಾಲ್ಲೂಕು ಜಿಲ್ಲೆ ಹಾಗೂ ಜಿಲ್ಲಾ ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಕ್ಷೇತ್ರ.	10.05.2025 ರ ಬೆಳಗ್ಗೆ 10 ರಿಂದ 2 ಘಂಟೆಯವರೆಗೆ
5	ಕ್ಷೇತ್ರ-06	ಕ್ಷೇತ್ರ (01) ರಿಂದ (05) ರ ವರೆಗಿನ ಸಹಕಾರ ಸಂಘಗಳನ್ನು ಹೊರತುಪಡಿಸಿ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಸಹಕಾರ ಸಂಘಗಳ ಕ್ಷೇತ್ರ.	10.05.2025 ರ ಮಧ್ಯಾಹ್ನ 3 ರಿಂದ 5 ಘಂಟೆಯವರೆಗೆ
6	ಕ್ಷೇತ್ರ-05	ಕ್ಷೇತ್ರ (01) ರಿಂದ (04) ರ ವರೆಗಿನ ಸಹಕಾರ ಸಂಘಗಳನ್ನು ಹೊರತುಪಡಿಸಿ ಮೈಸೂರು, ನಂಜನಗೂಡು, ಟಿ.ನರಸೀಪುರ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಸಹಕಾರ ಸಂಘಗಳ ಕ್ಷೇತ್ರ.	11.05.2025 ರ ಬೆಳಗ್ಗೆ 10 ರಿಂದ 2 ಘಂಟೆಯವರೆಗೆ
		ಕ್ಷೇತ್ರ (01) ರಿಂದ (04) ರ ವರೆಗಿನ ಸಹಕಾರ ಸಂಘಗಳನ್ನು ಹೊರತುಪಡಿಸಿ ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಸಾಲಿಗ್ರಾಮ, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಸಹಕಾರ ಸಂಘಗಳ ಕ್ಷೇತ್ರ.	11.05.2025 ರ ಮಧ್ಯಾಹ್ನ 3 ರಿಂದ 5 ಘಂಟೆಯವರೆಗೆ

ಸಹಿ/- ಮುಖ್ಯಕಾರ್ಯನಿರ್ವಹಣಾಧಿಕಾರಿಗಳು

ನಾಳೆ ಶ್ರೀ ನಿಮಿಷಾಂಬ ಅಮ್ಮನವರ ವರ್ಧಂತಿ



ಮಂಡ್ಯ, ಮೇ 5– ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ವತಿಯಿಂದ ಶ್ರೀರಂಗಪಟ್ಟಣದ ಗಂಜಾಂನಲ್ಲಿರುವ ಶ್ರೀ ನಿಮಿಷಾಂಬ ದೇವಸ್ಥಾನದಲ್ಲಿ ಮೇ 7 ರಂದು ಶ್ರೀ ನಿಮಿಷಾಂಬ ಅಮ್ಮನವರ ವರ್ಧಂತಿಯನ್ನು ಹಮ್ಮಿಕೊಳ್ಳಲಾಗಿದೆ.

ವರ್ಧಂತಿ ಅಂಗವಾಗಿ ಮೇ 6ರಂದು ಗಣಪತಿ ಪೂಜೆ, ಪುಣ್ಯಾಹ ಮಹಾ ಸಂಕಲ್ಪ ಕಲಶಸ್ಥಾಪನೆ, ಸಪ್ತಶತೀ ಪಾರಾಯಣ, ಕಲಶ ಪೂಜೆ ಮತ್ತು ಮಹಾಮಂಗಳಾರತಿ ನೆರವೇರಿಸಲಾಗುವುದು.

ಮೇ 7ರಂದು ಬೆಳಗ್ಗೆ 8 ಗಂಟೆಗೆ ನಿಮಿಷಾಂಬ ಹೋಮ, 10.30 ಗಂಟೆಗೆ ಪೂರ್ಣಾಹುತಿ, 10.45 ಗಂಟೆಗೆ ಕಳಶ ಪೂಜೆ ಮತ್ತು 121 ಕಲಶಗಳ ಮಹಾಭಿಷೇಕ ನಂತರ ಅಷ್ಟದಿಗ್ಬಲಿ, ಮಧ್ಯಾಹ್ನ 1 ಗಂಟೆಗೆ ಮಹಾಮಂಗಳಾರತಿ ಪ್ರಸಾದ ವಿತರಣೆ, ಸಂಜೆ 6.30 ಗಂಟೆಗೆ ದಕ್ಷಿಣ ಗಂಗೆ ಕಾವೇರಿ ಮಾತೆಗೆ ಪೂಜೆ ಮತ್ತು ಮಹಾ ಆರತಿ, ಸಂಜೆ 7 ಗಂಟೆಗೆ ಉತ್ಸವ, ಮಹಾಪೂಜೆ, ಮಹಾಮಂಗಳಾರತಿ ಪ್ರಸಾದ ವಿತರಣೆ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಲಾಗುವುದು.

ಕಾವೇರಿ ನದಿಯಿಂದ ರಾಮನಗರ ಜಿಲ್ಲೆಯ ಕುಡಿಯುವ ನೀರು ಯೋಜನೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೂಮಿ ಪೂಜೆ

ಮಳವಳ್ಳಿ, ಮೇ 5– ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಬೆಳಕವಾಡಿ ಸಮೀಪದ ಸತ್ತೇಗಾಲದ ಬಳಿ ಕಾವೇರಿ ನದಿ ಅಣೆಕಟ್ಟೆಯಿಂದ ರಾಮನಗರ ಜಿಲ್ಲೆಯ ನಾನಾ ಕಡೆಗೆ ಶಾಶ್ವತ ಕುಡಿಯುವ ನೀರು ಪೂರೈಕೆ ಯೋಜನೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಸ್ಥಳ ಪರಿಶೀಲನೆ ನಡೆಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸತ್ತೇಗಾಲದಿಂದ ರಾಮನಗರ ಜಿಲ್ಲೆಗೆ ನೀರು ತೆಗೆದುಕೊಂಡು ಹೋಗುವ ಕಾರ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದೇನೆ. ಯೋಜನೆ ವಿಳಂಬವಾಗುತ್ತಿತ್ತು. ಅದಕ್ಕೆ ಖುದ್ದು ನಾನೇ ಆಗಮಿಸಿ, ಸ್ಥಳ ಪರಿಶೀಲನೆ ನಡೆಸಿದ್ದು, ಯೋಜನೆ ಶೀಘ್ರ ಆರಂಭವಾಗಲಿದೆ ಎಂದರು.

ನೀರು ಲಿಫ್ಟ್ ಮಾಡುವ ಸ್ಥಳದಲ್ಲಿ ರೈತರ ಜಾಗದ ಸಮಸ್ಯೆ ಇತ್ತು. ಅದು ಈಗ ಬಗೆಹರಿದಿದೆ. ರೈತರಿಗೆ ಸೂಕ್ತ ಪರಿಹಾರ ನೀಡಲು ಸೂಚನೆ ನೀಡಿದ್ದೇನೆ. ಸುಮಾರು 26 ಕಿಮೀ ಸ್ವಾಭಾವಿಕವಾಗಿ ನೀರು ಹರಿಯಲಿದೆ. ಸತ್ತೇಗಾಲದಿಂದ ಚನ್ನಪಟ್ಟಣದ ಇಗ್ಗಲೂರು ಡ್ಯಾಂವರೆಗೆ ಈ ನೀರನ್ನು ತೆಗೆದುಕೊಂಡು ಹೋಗಲಾಗುತ್ತದೆ. ಸುಮಾರು 12 ಕಿಮೀ ಟನಲ್ ಕೊರೆಯಲಾಗಿದೆ. ಟನಲ್ ಕೆಲಸ ಬಹುತೇಕ ಮುಗಿದಿದೆ ಎಂದು ವಿವರಿಸಿದರು.

ಈ ಯೋಜನೆಯಿಂದ ಚನ್ನಪಟ್ಟಣ, ರಾಮನಗರ, ಮಾಗಡಿ ತಾಲೂಕುಗಳಿಗೆ ಕುಡಿಯುವ ನೀರು ಸಿಗಲಿದೆ. 543 ಕೋಟಿ ರೂ. ವೆಚ್ಚದಲ್ಲಿ ಯೋಜನೆ ಮಾಡಲಾಗಿದೆ. ಈ ಯೋಜನೆ ರಾಜ್ಯಕ್ಕೆ ಮಾದರಿಯಾಗಲಿದ್ದು, ಸುಮಾರು 3.3 ಟಿಎಂಸಿ ನೀರು ಕುಡಿಯುವ ಬಳಕೆಗೆ ಸಿಗಲಿದೆ. ಇಗ್ಗಲೂರು ಡ್ಯಾಂನಿಂದ ಮಂಚಿನಬೆಲೆ ಡ್ಯಾಂ, ಕಣ್ವ ಡ್ಯಾಂಗೆ ಈ ನೀರನ್ನ ಪಂಪ್ ಮಾಡಲಿದ್ದೇವೆ ಎಂದ ಅವರು, ಚನ್ನಪಟ್ಟಣ ಉಪಚುನಾವಣೆ ಸಮಯದಲ್ಲಿ ಸಿ.ಪಿ.ಯೋಗೇಶ್ವರ್ ಈ ಯೋಜನೆ ಬಗ್ಗೆ ಜನರಿಗೆ ಮಾತು ಕೊಟ್ಟಿದ್ದರು. ಆದಷ್ಟು ಬೇಗ ಈ ಕಾಮಗಾರಿ ಮುಗಿದು ಲೋಕಾರ್ಪಣೆಗೊಳ್ಳಲಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಾಜಿ ಸಂಸದ ಡಿ.ಕೆ.ಸುರೇಶ್, ಶಾಸಕರಾದ ಸಿ.ಪಿ.ಯೋಗೇಶ್ವರ್, ಕೆ.ಎಂ.ಉದಯ್, ಎಂಎಲ್‌ಸಿಗಳಾದ ಎಸ್.ರವಿ, ಸುಧಾಮ್ ದಾಸ್, ಜಿಲ್ಲಾಧಿಕಾರಿ ಡಾ.ಕುಮಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಗುದ್ದಲಿ ಪೂಜೆ ನೆರವೇರಿಸುತ್ತಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್.

ಮೇ 8, ಮಂಡ್ಯ ನಗರಕ್ಕೆ ಸಿಎಂ

ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಮಂಡ್ಯ,ಮೇ 5– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 8ರಂದು ಮಂಡ್ಯ ನಗರಕ್ಕೆ ಭೇಟಿ ನೀಡಲಿದ್ದು, ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನಗರದ ಕನಕಭವನ ಆವರಣದಲ್ಲಿ ಬಾಲಕರ ವಿದ್ಯಾರ್ಥಿನಿಲಯ ನೂತನ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಮೈಷುಗರ್ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲಿಗೆ ಗಿರಿಜಾ ಚಿತ್ರಮಂದಿರದ ಪಕ್ಕ ಎಂಡಿಸಿಸಿ ಬ್ಯಾಂಕ್ ನೂತನ ಆಡಳಿತ ಕಚೇರಿಯ ಶಂಕುಸ್ಥಾಪನೆ ನೆರವೇರಿಸಿ, ಮೈಷುಗರ್ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಂಚಿನ ಪುತ್ಥಳಿ ಅನಾವರಣ ಮಾಡಲಿದ್ದಾರೆ. ನಂತರ ಬಾಲಕರ ವಿದ್ಯಾರ್ಥಿನಿಲಯ ನೂತನ ಕಟ್ಟಡದ ಶಂಕುಸ್ಥಾಪನೆ ನೆರವೇರಿಸುವರು ಎಂದರು.

ಮಂಡ್ಯ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಎಂ.ಎಲ್.ಸುರೇಶ್ ಅಧ್ಯಕ್ಷತೆಯಲ್ಲಿ ಶಂಕುಸ್ಥಾಪನೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಕಾಗಿನೆಲೆ ಮಹಾಸಂಸ್ಥಾನದ ಶಿವಾನಂದಪುರಿ ಸ್ವಾಮೀಜಿಗಳು ವಹಿಸಲಿದ್ದು, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಚಿವರುಗಳಾದ ಶಿವರಾಜ ತಂಗಡಗಿ, ಡಾ.ಹೆಚ್.ಸಿ.ಮಹದೇವಪ್ಪ, ಬೈರತಿ ಸುರೇಶ್, ಜಮೀರ್ ಅಹಮದ್ ಖಾನ್, ಗ್ಯಾರಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಪಿ.ಎಂ. ನರೇಂದ್ರಸ್ವಾಮಿ, ರವಿಕುಮಾರ್ ಗಣಿಗ ಉಪಸ್ಥಿತಿ ವಹಿಸುವರು ಎಂದು ಹೇಳಿದರು.

ಗೋಷ್ಠಿಯಲ್ಲಿ ಕುರುಬರ ಸಂಘದ ಜಿಲ್ಲಾಧ್ಯಕ್ಷ ಎಂ.ಎಲ್.ಸುರೇಶ್, ಉಪಾಧ್ಯಕ್ಷ ಶ್ರೀನಿವಾಸ್, ಖಜಾಂಚಿ ರಾಜು, ನಗರಸಭೆ ಮಾಜಿ ಸದಸ್ಯ ಮಹೇಶ್, ಮುಖಂಡರಾದ ಮಂಜುನಾಥ್, ವಿಜಿಕುಮಾರ್, ಕೆಂಚಪ್ಪ ಇದ್ದರು.

ಗ್ರಾಪಂ ನೂತನ ಅಧ್ಯಕ್ಷೆ ಆಯ್ಕೆ



ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಜಯಲಕ್ಷ್ಮಿ ಬಿ.ನಾರಾಯಣ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಪಿ.ಎಸ್ ರಮೇಶ್ ಬಾಬು, ಜಯ ಕುಮಾರ್, ಪಿಡಿ ತಿಮ್ಮಪ್ಪ, ಚೆನ್ನೇಗೌಡ, ನರಸಿಂಹ, ಗ್ರಾಮ ಪಂಚಾಯಿತಿ ಸದಸ್ಯರುಗಳು ಉಪಸ್ಥಿತರಿದ್ದರು.

ರಾಜಶೇಖರ್ ನಿಧನ



ಭಾರತೀನಗರ, ಮೇ 5– ಇಲ್ಲಿಗೆ ಸಮೀಪದ ಅಣ್ಣೂರು ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಕಾರ್ಯದರ್ಶಿ ಹಾಗೂ ಹಿರಿಯ ರೈತ ಮುಖಂಡ ರಾಜಶೇಖರ್(70) ಅವರು ಸೋಮವಾರ ಮಧ್ಯಾಹ್ನ ನಿಧನ ಹೊಂದಿದ್ದಾರೆ.

ಮೃತರು ಪತ್ನಿ ಚಂದ್ರಮ್ಮ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಸ್ವಗ್ರಾಮವಾದ ಅಣ್ಣೂರು ಗ್ರಾಮದ ತಮ್ಮ ಜಮೀನಿನಲ್ಲಿ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮಂಡ್ಯ ಜನ ನಾಲ್ವಡಿ, ವಿಶ್ವೇಶ್ವರಯ್ಯ ಕೊಡುಗೆಗಳನ್ನು ಸ್ಮರಿಸಬೇಕು

ವಿಧಾನ ಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ



ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಗಣ್ಯರು.

ಮಂಡ್ಯ, ಮೇ 5– ಜಿಲ್ಲೆಯ ಜನರಿಗೆ ಸಹಾಯ ಮಾಡಿದವರನ್ನು ಸ್ಮರಿಸುವ ಮಹದ್ಗುಣ ರಕ್ತದಲ್ಲೇ ಬಂದಿದೆ. ರಾಜಶ್ರೀ ಕೃಷ್ಣರಾಜ ಒಡೆಯರ್ ಅವರು ಮತ್ತು ಜಗತ್ತಿನ ಅತ್ಯಂತ ಬುದ್ಧಿವಂತ, ತಾಂತ್ರಿಕ ನಿಪುಣರಾದ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರ ಕೊಡುಗೆಗಳನ್ನು ಸ್ಮರಿಸುತ್ತಾ ಮುಂದಿನ ದಿನಮಾನಗಳಲ್ಲಿ ಯುವ ಜನತೆಗೆ ತಿಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಒಂದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ವಿಧಾನಪರಿಷತ್ ಶಾಸಕ ದಿನೇಶ್ ಗೂಳಿಗೌಡ ಹೇಳಿದರು.

ಸೋಮವಾರ ತಾಲೂಕಿನ ಚಂದಗಾಲು ಗ್ರಾಮದಲ್ಲಿ ಶ್ರೀ ಪಟ್ಟಲದಮ್ಮ ಮತ್ತು ಕೊಲ್ಲಾಪುರದಮ್ಮ ದೇವಿಯ ಮಹಾದ್ವಾರ ಪ್ರತಿಷ್ಠಾಪನೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್.ಎಂ. ವಿಶ್ವೇಶ್ವರಯ್ಯ ಅವರ ಪ್ರತಿಮೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಈ ಮಹಾನ್ ಚೇತನರು ಸೇರಿ ಕೃಷ್ಣರಾಜ ಸಾಗರ ಜಲಾಶಯವನ್ನು ನಿರ್ಮಾಣ ಮಾಡಿರದಿದ್ದರೆ ಇವತ್ತು ಮಂಡ್ಯ ಜಿಲ್ಲೆ ಬರಪೀಡಿತವಾಗಿರುತ್ತಿತ್ತು. ರಾಜಕಾರಣಿಗಳ ಕೊಡುಗೆಗಿಂತ ಇವರಿಬ್ಬರ ಕೊಡುಗೆ ಮೈಸೂರು ಮಹಾಸಂಸ್ಥಾನಕ್ಕೆ ಅಗಾಧವಾಗಿದೆ ಎಂದು ಅಭಿಪ್ರಾಯಪಟ್ಟರು.

ಒಡೆಯರ್ ಅವರು ಅಧಿಕಾರ ವಹಿಸಿಕೊಂಡು ಮೈಸೂರನ್ನು 'ಮಾದರಿ ಮೈಸೂರು' ಮಾಡಿದರು. ಪ್ರಜಾ ಪ್ರತಿನಿಧಿ, ನ್ಯಾಯ ವಿಧಾಯಕ ಸಭೆ ಸ್ಥಾಪಿಸಿ ಜನತೆಯ ಆಡಳಿತಕ್ಕೆ ಉತ್ತೇಜನ ನೀಡಿದರು. ಗ್ರಾಮ ಪಂಚಾಯಿತಿಗಳನ್ನು ರಚಿಸಿದರು. ಶಿಕ್ಷಣ, ವೈದ್ಯಕೀಯ, ನೀರಾವರಿ, ಸಾರಿಗೆ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದರು. ಉಚಿತ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿದ್ದಲ್ಲದೆ, ಮೈಸೂರು ವಿವಿಯನ್ನು ಸ್ಥಾಪನೆ ಮಾಡಿದ್ದರು. ಮೈಸೂರಿನಲ್ಲಿ ಉತ್ತಮ ಕಟ್ಟಡ, ರಸ್ತೆ, ಉದ್ಯಾನ ನಿರ್ಮಿಸಿದರು. ದೇವದಾಸಿ ಪದ್ಧತಿ ನಿಷೇಧ, ವಿಧವೆಯರ ಮರುವಿವಾಹಕ್ಕೆ ಅವಕಾಶ, ಸ್ತ್ರೀಯರಿಗೆ ಮತದಾನದ ಹಕ್ಕು ನೀಡಿದರು. ರೈತರಿಗೆ ಸಹಕಾರಿ ಸಂಘವನ್ನು ಸ್ಥಾಪಿಸುವ ಮೂಲಕ ರೈತಸ್ನೇಹಿಯಾಗಿ ಆಡಳಿತವನ್ನು ನಡೆಸಿದ್ದರು ಎಂದು ಹೇಳಿದರು.

ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರು ಆಧುನಿಕ ಭಾರತದ ನಿರ್ಮಾತೃಗಳಲ್ಲಿ ಒಬ್ಬರು. ನೀರಾವರಿ ಕ್ಷೇತ್ರದ ದಿಗ್ಗಜರಾಗಿ ದಖನ್ ಪ್ರಸ್ಥಭೂಮಿಯಲ್ಲಿ ಕ್ರಾಂತಿ ಮಾಡಿದರು. ಸೆಪ್ಟೆಂಬರ್ 15 ಅನ್ನು ಎಂಜಿನಿಯರ್ ದಿನವೆಂದು ಆಚರಿಸಲಾಗುತ್ತದೆ. ಮೈಸೂರು ಸಂಸ್ಥಾನದ ದಿವಾನರಾಗಿ ಕೈಗಾರಿಕೆ ಸ್ಥಾಪನೆಗೆ ನೆರವಾದರು. ಮೈಸೂರು ಸಂಪದಭಿವೃದ್ಧಿ ಸಮ್ಮೇಳನವನ್ನು ಆರಂಭಿಸಿದರು. ಮುಖ್ಯ ಎಂಜಿನಿಯರ್ ಆಗಿ ರಸ್ತೆ, ರೈಲ್ವೆ, ನೀರಾವರಿ ಯೋಜನೆ ರೂಪಿಸಿದರು. ಕೃಷ್ಣರಾಜ ಸಾಗರ ಅಣೆಕಟ್ಟು, ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಮೈಸೂರು ಸಾಬೂನು ಕಾರ್ಖಾನೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಬ್ಯಾಂಕ್, ಸಾರ್ವಜನಿಕ ಗ್ರಂಥಾಲಯಗಳು, ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಗೆ ಕಾರಣರಾದರು ಎಂದು ಬಣ್ಣಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ರವಿಕುಮಾರ್ ಗಣಿಗ ಅವರು ವಹಿಸಿದ್ದರು. ಜಂಗಮಮಠದ ಸಿದ್ದಲಿಂಗ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಿದ್ದರು. ಕಾಂಗ್ರೆಸ್ ನಾಯಕರು, ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದ ಸ್ಟಾರ್‌ಚಂದ್ರು ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದರು. ಶಾಸಕರಾದ ದಿನೇಶ್ ಗೂಳಿಗೌಡ ಅವರು ಸರ್.ಎಂ. ವಿಶ್ವೇಶ್ವರಯ್ಯ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದರು.

ಯುವ ಮುಖಂಡ ಸಚಿನ್ ಚಲುವರಾಯಸ್ವಾಮಿ, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ನಿವೇಶನ ಬೇರೊಬ್ಬರಿಗೆ ಮರು ಮಂಜೂರು

ಖಾತೆ ವರ್ಗಾಯಿಸಿಕೊಂಡಿದ್ದರು. ಅಲ್ಲದೆ ಮಾರ್ಚ್ 27, 2023 ರಂದು ಮೈಸೂರು ಪಾಲಿಕೆಯಲ್ಲಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರು. ಅಲ್ಲಿಂದ ಇಲ್ಲಿ ತನಕ ಡಾ.ನಾರಾಯಣಸ್ವಾಮಿ ಅವರು ನಿರಂತರವಾಗಿ ತಮ್ಮ ನಿವೇಶನದ ಕಂದಾಯ ಪಾವತಿ ಮಾಡಿಕೊಂಡು ಬಂದಿದ್ದಾರೆ. ಭೂಗಳ್ಳರ ಹಾವಳಿಯ ಹಿನ್ನೆಲೆಯಲ್ಲಿ ಯಾರಾದರೂ ತಮ್ಮ ನಿವೇಶನ ಅತಿಕ್ರಮಿಸಿಕೊಳ್ಳಬಹುದು ಎಂಬ ಎಚ್ಚರಿಕೆಯಿಂದ ಡಾ.ನಾರಾಯಣ ಸ್ವಾಮಿ ಅವರು ತಮ್ಮ ನಿವೇಶನದ ಸುತ್ತ ಸಹ ಕಾಂಪೌಂಡ್ ನಿರ್ಮಾಣ ಮಾಡಿದ್ದರು.

ಘಟಾಘಟ್ ಮಂಜೂರು: ಇಷ್ಟಾಗಿಯೂ ಮೇ 14, 2024ರಂದು 222/ ಎ ಎಂದು ಹೊಸ ಸಂಖ್ಯೆ ನಮೂದಿಸಿದ ಹಿಂದಿನ ಮುಡಾ ಆಯುಕ್ತ ದಿನೇಶ್ ಕುಮಾರ್, ಅದನ್ನು ಮಹದೇವ್ ಎಂಬುವವರಿಗೆ ಅಕ್ರಮವಾಗಿ ಮರು ಮಂಜೂರು ಮಾಡಿದ್ದಾರೆ. ಜಮೀನು ಕಳೆದುಕೊಂಡವರಿಗೆ ನೀಡುವ ಪ್ರೋತ್ಸಾಹಕ ನಿವೇಶನ ಎಂದು ನಮೂದಿಸಿ, ದಿನೇಶ್‌ಕುಮಾರ್ ಮತ್ತೊಂದು ಹಗರಣವೆಸಗಿರುವುದು ಈಗ ಬಟಾ ಬಯಲಾಗಿದೆ.

ಮಹದೇವ್‌ಗೆ ಮರು ಮಂಜೂರಾದ ನಿವೇಶನಕ್ಕೆ ಕ್ರಯ ಪತ್ರ ನೀಡಿ, ಖಾತೆ ಕೂಡ ನೀಡಲಾಗಿದೆ. ಇದೇ ವೇಳೆ ತನಗೆ ಮರು ಮಂಜೂರಾದ ನಿವೇಶನವನ್ನು ಮಹದೇವ್, ಎಸ್.ಸತೀಶ್ ಎಂಬಾತನಿಗೆ ಮಾರಾಟ ಮಾಡಿದ್ದಾರೆ. ನಿವೇಶನ ಖರೀದಿ ಮಾಡಿದ ಸತೀಶ್‌ಗೆ ಜೂನ್ 25, 2024ರಂದು ಖಾತೆ ವರ್ಗಾವಣೆ ಮಾಡಲಾಗಿದೆ. ಅಲ್ಲದೆ ಆಗಸ್ಟ್ 9, 2024ರಂದು ಸತೀಶ್, ಪಾಲಿಕೆಯಿಂದ ಕಟ್ಟಡ ಪರವಾನಿಗೆ ಕೂಡ ಪಡೆದಿದ್ದಾರೆ. ಕಳೆದ 6 ತಿಂಗಳ ಹಿಂದೆ ಡಾ.ನಾರಾಯಣ ಸ್ವಾಮಿ ಅವರು ತಮ್ಮ ನಿವೇಶನದ ಬಳಿ ಹೋದಾಗ ಅಲ್ಲಿ ಯಾವುದೇ ಬದಲಾವಣೆ ಕಂಡು ಬರಲಿಲ್ಲ. ಜನವರಿ ತಿಂಗಳಲ್ಲಿ ಮನೆ ನಿರ್ಮಾಣ ಮಾಡಲು ಡಾ.ನಾರಾಯಣಸ್ವಾಮಿ ಯೋಜಿಸಿದ್ದರು. ಆದರೆ, ಕೆಲಸದ ಒತ್ತಡದಿಂದ ಮನೆ ನಿರ್ಮಾಣ ಮಾಡಲು ಸಾಧ್ಯವಾಗಲಿಲ್ಲ. ಜೊತೆಗೆ ಮೈಸೂರಿಗೆ ಬಂದು ಮತ್ತೆ ತಮ್ಮ ನಿವೇಶನ ಬಳಿ ಹೋಗಲು ಸಾಧ್ಯವಾಗಲಿಲ್ಲ.

ಶನಿವಾರ ಡಾ.ನಾರಾಯಣಸ್ವಾಮಿ ಅವರಿಗೆ, ಅವರ ಸ್ನೇಹಿತರೊಬ್ಬರು ದೂರವಾಣಿ ಕರೆ ಮಾಡಿ ನಿಮ್ಮ ನಿವೇಶನವನ್ನು ಯಾರಿಗಾದರೂ ಮಾರಾಟ ಮಾಡಿದ್ದೀರಾ ಎಂದು ಪ್ರಶ್ನಿಸಿದ್ದಾರೆ. ಇಲ್ಲವಲ್ಲ ಎಂದು ಹೇಳಿದ್ದಾರೆ. ಆಗ, ನಿಮ್ಮ ನಿವೇಶನದಲ್ಲಿ ಕೆಫೆ ಕಾಫಿ ನಿರ್ಮಾಣವಾಗುತ್ತಿದೆಯಲ್ಲ ಎಂದು ಅವರು ಮಾಹಿತಿ ನೀಡಿದ್ದಾರೆ. ಇದರಿಂದ ಆಘಾತಕ್ಕೊಳಗಾದ ಡಾ.ನಾರಾಯಣ ಸ್ವಾಮಿ ಅವರು ಇಂದು ತಮ್ಮ ನಿವೇಶನಕ್ಕೆ ಭೇಟಿ ನೀಡಿದಾಗ ಅಲ್ಲಿ ಕೆಫೆ ಕಾಫಿ ನಿರ್ಮಾಣ ಕಾರ್ಯ ನಡೆಯುತ್ತಿತ್ತು.

ನಿವೇಶನ ಖರೀದಿ ಮಾಡಿ ಎಲ್ಲಾ ರೀತಿಯ ಮೂಲ ದಾಖಲಾತಿ ಇದ್ದರೂ ಮೋಸವಾಗಿದೆಯಲ್ಲ ಎಂದು ಡಾ.ನಾರಾಯಣಸ್ವಾಮಿ ಅವರು ಇಂದು ಮುಡಾ ಆಯುಕ್ತ ರಘುನಂದನ್ ಅವರನ್ನು ಭೇಟಿ ಮಾಡಲು ಹೋಗಿದ್ದರು. ಆದರೆ ಅವರು ಕಚೇರಿಯಲ್ಲಿ ಇರಲಿಲ್ಲ. ಆದರೂ ತಮ್ಮ ನಿವೇಶನವನ್ನು ಅಕ್ರಮವಾಗಿ ಬೇರೊಬ್ಬರಿಗೆ ಮಾರಾಟ ಮಾಡಿರುವ ಬಗ್ಗೆ ಡಾ.ನಾರಾಯಣಸ್ವಾಮಿ ಅವರು, ಜಿಲ್ಲಾಧಿಕಾರಿಗಳು ಆದ ಮುಡಾ ಅಧ್ಯಕ್ಷರು, ಮುಡಾ ಆಯುಕ್ತರು ಹಾಗೂ ಮುಡಾ ಕಾರ್ಯದರ್ಶಿ ಅವರಿಗೆ ಲಿಖಿತ ದೂರು ನೀಡಿ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಈ ಮೂಲಕ ಮುಡಾದಲ್ಲಿ ನಡೆದಿರುವ ಭ್ರಷ್ಟಾಚಾರದ ಪಟ್ಟಿಗೆ ಮತ್ತೊಂದು ಸೇರಿದೆ. ತಮ್ಮ ನಿವೇಶನವನ್ನು ಬೇರೊಬ್ಬರಿಗೆ ಅಕ್ರಮವಾಗಿ ಮರು ಮಂಜೂರು ಮಾಡಿರುವ ಮುಡಾ ಮಾಜಿ ಆಯುಕ್ತ ದಿನೇಶ್‌ಕುಮಾರ್ ಭ್ರಷ್ಟಾಚಾರದ ಸರಮಾಲೆ ಇದರೊಂದಿಗೆ ಬೆಳೆಯುತ್ತಲೇ ಇದೆ. ಈ ಮೂಲಕ ನೂರಾರು ಕೋಟಿ ಅವ್ಯವಹಾರ ನಡೆಸಿರುವ ದಿನೇಶ್‌ಕುಮಾರ್‌ಗೆ ಅಮಾನತು ಶಿಕ್ಷೆ ಮಾತ್ರ ನೀಡಲಾಗಿದೆ. ಇಷ್ಟೆಲ್ಲಾ ಹಗರಣ ನಡೆಸಿದ್ದರೂ ದಿನೇಶ್‌ಕುಮಾರ್ ಸೇಫ್ ಆಗಿದ್ದಾರೆ.

ಚೆನಾಬ್ ನದಿ ಖಾಲಿ... ಖಾಲಿ...

ಇದಕ್ಕೆ ಪಾಕಿಸ್ತಾನ ಜೊತೆಗಿನ ಸಿಂಧೂ ಜಲ ಒಪ್ಪಂದ ರದ್ದು ಕಾರಣವಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ನಿರ್ಧಾರಕ್ಕೆ ಸ್ಥಳೀಯರು ಬೆಂಬಲ ವ್ಯಕ್ತಪಡಿಸಿದ್ದಾರೆ. ಎಎನ್‌ಐ ಜೊತೆ ಮಾತನಾಡಿದ ಸ್ಥಳೀಯರೊಬ್ಬರು, ಪಾಕಿಸ್ತಾನಕ್ಕೆ ಒಂದು ಹನಿ ನೀರು ಕೂಡ ನೀಡುವುದನ್ನು ಬಯಸುವುದಿಲ್ಲ ಎಂದು ಎಚ್ಚರಿಸಿದರು.

ಮೊದಲು 25–30 ಅಡಿ ಎತ್ತರದಲ್ಲಿ ಚೆನಾಬ್ ನದಿ ಹರಿಯುತ್ತಿತ್ತು, ಆದರೆ ಈಗ ಇಲ್ಲಿ ಕೇವಲ 1.5–2 ಅಡಿ ನೀರು ಇದೆ. ಸಿಂಧೂ ಜಲ ಒಪ್ಪಂದ ಸ್ಥಗಿತಕ್ಕೆ ಪ್ರಧಾನಿ ಮೋದಿಯವರ ನಿರ್ಧಾರವೇ ಇದಕ್ಕೆ ಕಾರಣ. ಪಾಕಿಸ್ತಾನಕ್ಕೆ ಒಂದೇ ಒಂದು ಹನಿ ನೀರನ್ನೂ ನೀಡುವುದು ನಮಗೆ ಇಷ್ಟವಿಲ್ಲ. ನಾವೆಲ್ಲರೂ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ನಿಂತಿದ್ದೇವೆ ಎಂದರು. ಚೆನಾಬ್ ನದಿಯ ನೀರಿನ ಮಟ್ಟದಲ್ಲಿ ತೀವ್ರ ಬದಲಾವಣೆಯ ಬಗ್ಗೆ ಮತ್ತೊಬ್ಬ ಸ್ಥಳೀಯರು ಆಘಾತ ವ್ಯಕ್ತಪಡಿಸಿದ್ದಾರೆ. ನನ್ನ 75 ವರ್ಷಗಳ ಜೀವನದಲ್ಲಿ ಇದೇ ಮೊದಲ ಬಾರಿಗೆ ಚೆನಾಬ್‌ನಲ್ಲಿ ಇಷ್ಟು ಪ್ರಮಾಣದ ನೀರು ಕಡಿಮೆಯಾಗಿರುವುದನ್ನು ನೋಡುತ್ತಿದ್ದೇನೆ. ಈ ನಿರ್ಧಾರವನ್ನು ತೆಗೆದುಕೊಂಡ ಪ್ರಧಾನಿ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಮಚ್ಚು, ಲಾಂಗ್‌ನಿಂದ ಕೊಚ್ಚಿ ರೌಡಿಶೀಟರ್ ಭೀಕರ ಹತ್ಯೆ

ಆರೋಪಿಗಳ ಪತ್ತೆಗೆ ಎರಡು ತಂಡ

ಮೈಸೂರು,ಮೇ5(ಆರ್‌ಕೆ)–ಕಾರ್ತಿಕ್‌ನನ್ನು ಕೊಚ್ಚಿ ಕೊಲೆಗೈದು ಪರಾರಿಯಾಗಿರುವ ಹಂತಕರ ಪತ್ತೆಗೆ ಎರಡು ತಂಡ ರಚಿಸಲಾಗಿದೆ ಎಂದು ಎಸ್ಪಿ ಎನ್. ವಿಷ್ಣುವರ್ಧನ್ ತಿಳಿಸಿದ್ದಾರೆ. ಸ್ಕಾರ್ಪಿಯೋ ಮತ್ತು ಬೈಕ್‌ನಲ್ಲಿ ಬಂದು ಹತ್ಯೆಗೈದು ಹೋಗಿರುವ ದೃಶ್ಯ ಸಿಸಿ ಕ್ಯಾಮರಾಗಳಲ್ಲಿ ಸೆರೆಯಾಗಿದೆಯಾದರೂ, ಕೊಲೆಗಡುಕರ ಮುಖಚರ್ಯೆ, ವಾಹನಗಳ ನೋಂದಣಿ ಸಂಖ್ಯೆಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಆದರೂ ಲಭ್ಯವಾಗಿರುವ ಸುಳಿವಿನ ಜಾಡು ಹಿಡಿದು ಮುಂಜಾನೆಯಿಂದಲೇ ತನಿಖಾ ತಂಡದ ಅಧಿಕಾರಿಗಳು ಹಾಗೂ ಅಪರಾಧ ತನಿಖಾ ಸಿಬ್ಬಂದಿ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ ಎಂದರು.

ಕಾರ್ತಿಕ್ ಚೀರಾಡಿದ ಶಬ್ದ ಕೇಳಿ ಹೋಟೆಲ್ ಸಿಬ್ಬಂದಿ ನೋಡಿದಾಗ ಕಾರ್ತಿಕ್ ಮೃತದೇಹ ರಕ್ತದ ಮಡುವಿನಲ್ಲಿ ಬಿದ್ದಿದ್ದು ಕಂಡು ಬಂದಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವರುಣ, ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು, ಮಹಜರು ನಡೆಸಿದಾಗ ಕಾರ್ತಿಕ್ ಪ್ರೇಯಸಿ ಹೋಟೆಲ್‌ನಲ್ಲೇ ಇದ್ದುದು ತಿಳಿದುಬಂದಿದೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಜಿಲ್ಲಾ ಬೆರಳಚ್ಚು ಮುದ್ರೆ ಘಟಕ, ಶ್ವಾನದಳದ ಸಿಬ್ಬಂದಿ ಪರಿಶೀಲಿಸಿದ ಬಳಿಕ ಮೃತದೇಹವನ್ನು ಮುಂಜಾನೆ 5 ಗಂಟೆ ವೇಳೆಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿ, ಮರಣೋತ್ತರ ಪರೀಕ್ಷೆ ನಂತರ ದೇಹವನ್ನು ಕುಟುಂಬದವರಿಗೆ ಒಪ್ಪಿಸಿದರು.

ಘಟನಾ ಸ್ಥಳಕ್ಕೆ ಜಿಲ್ಲಾ ಎಸ್ಪಿ ಎನ್. ವಿಷ್ಣುವರ್ಧನ್, ಅಡಿಷನಲ್ ಎಸ್ಪಿಗಳಾದ ನಾಗೇಶ್, ಸಿ. ಮಲ್ಲಿಕ, ಡಿವೈಎಸ್ಪಿ ಕರೀಂ ರಾವತರ್, ಸರ್ಕಲ್ ಇನ್‌ಸ್ಪೆಕ್ಟರ್ ಶಿವನಂಜಶೆಟ್ಟಿ ಭೇಟಿ ನೀಡಿ ಪರಿಶೀಲಿಸಿದರು.

ಲಘು ಲಾಠಿಪ್ರಹಾರ: ಮರಣೋತ್ತರ ಪರೀಕ್ಷೆ ನಡೆಯುತ್ತಿದ್ದಾಗ ಶವಾಗಾರದ ಬಳಿ ಸಾವಿರಾರು ಮಂದಿ ಜಮಾಯಿಸಿದ್ದರಿಂದ ಗುಂಪು ನಿಯಂತ್ರಿಸಲು ಮಂಡಿ, ಲಷ್ಕರ್ ಠಾಣೆ ಪೊಲೀಸರು ಬೆಳಗ್ಗೆ 11 ಗಂಟೆ ವೇಳೆಗೆ ಲಘು ಲಾಠಿಪ್ರಹಾರ ನಡೆಸಬೇಕಾಯಿತು. ಕಾರ್ತಿಕ್ ವಿರುದ್ಧ ವರುಣ ಠಾಣೆಯಲ್ಲಿ ರೌಡಿಶೀಟರ್ ತೆರೆಯಲಾಗಿದ್ದು, ಉದಯಗಿರಿ ಠಾಣೆಯಲ್ಲೂ ಈತನ ವಿರುದ್ಧ ಹಲ್ಲೆ (ಸೆಕ್ಷನ್ 307) ಪ್ರಕರಣ ದಾಖಲಾಗಿತ್ತು. ವರುಣಾ ಠಾಣೆಯಲ್ಲಿ ದಾಖಲಾಗಿದ್ದ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಈತ ಜಾಮೀನು ಪಡೆದು ಹೊರಗೆ ಬಂದಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಳೆದ ಕೆಲ ತಿಂಗಳ ಹಿಂದೆ ಕ್ಯಾತಮಾರನಹಳ್ಳಿಯ ಕೆಲವರೊಂದಿಗೆ ಕಾರ್ತಿಕ್ ಕ್ಷುಲ್ಲಕ ಕಾರಣಕ್ಕೆ ಜಗಳವಾಡಿಕೊಂಡಿದ್ದನೆಂದೂ, ಆ ಗುಂಪು ಹಳೇ ದ್ವೇಷಕ್ಕಾಗಿ ಹೊಂಚು ಹಾಕಿ ಕಾರ್ತಿಕ್‌ನನ್ನು ಕೊಚ್ಚಿ ಕೊಲೆಗೈದಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ. ಹೋಟೆಲ್‌ನ ಸೆಕ್ಯೂರಿಟಿ ಗಾರ್ಡ್ ರಂಗಸ್ವಾಮಿ ನೀಡಿದ ದೂರಿನ ಮೇರೆಗೆ ಪ್ರವೀಣ್, ಅವಿನಾಶ್, ಆನಂದ್, ರವಿ, ಚಂದು, ವೆಂಕಟೇಶ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ವರುಣ ಪೊಲೀಸರು, ಹೋಟೆಲ್‌ನಲ್ಲಿ ಇರಿಸಿದ್ದ ಎನ್ನಲಾದ ಕಾರ್ತಿಕ್ ಗೆಳತಿಯನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

ಭಾರತ ಯುದ್ಧಕ್ಕೆ ಸನ್ನದ್ಧ

ಸಮಗ್ರ ನಾಗರಿಕ ರಕ್ಷಣಾ ಅಣಕು ಕಸರತ್ತುಗಳನ್ನು ನಡೆಸುವಂತೆ ಗೃಹ ಸಚಿವಾಲಯ ರಾಜ್ಯಗಳಿಗೆ ನಿರ್ದೇಶನ ನೀಡಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ. ಈ ಕಸರತ್ತುಗಳು ಹಲವಾರು ನಿರ್ಣಾಯಕ ಸನ್ನದ್ಧತಾ ಕ್ರಮಗಳ ಮೇಲೆ ಕೇಂದ್ರೀಕರಿಸುತ್ತವೆ. ಇವುಗಳಲ್ಲಿ ವಾಯುದಾಳಿ ಎಚ್ಚರಿಕೆ ಸೈರನ್‌ಗಳ ಕಾರ್ಯಾಚರಣೆ ಮತ್ತು ವಿದ್ಯಾರ್ಥಿಗಳು ಸೇರಿದಂತೆ ನಾಗರಿಕರಿಗೆ ಅಗತ್ಯ ನಾಗರಿಕ ರಕ್ಷಣಾ ತಂತ್ರಗಳಲ್ಲಿ ತರಬೇತಿ ಸೇರಿವೆ. ವೈಮಾನಿಕ ದಾಳಿಗಳು ಅಥವಾ ಇತರ ಪ್ರತಿಕೂಲ ಘಟನೆಗಳಂತಹ ತುರ್ತು ಸಂದರ್ಭಗಳಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದು ಹೇಗೆಂದು ಅವರನ್ನು ಸಜ್ಜುಗೊಳಿಸುವುದು ಇದರ ಗುರಿಯಾಗಿದೆ. ರಾಷ್ಟ್ರವ್ಯಾಪಿ ಕವಾಯತನ್ನು ಪರಿಣಾಮಕಾರಿಗೊಳಿಸಲು ಸ್ಥಳೀಯ ಅಧಿಕಾರಿಗಳು, ಶಿಕ್ಷಣ ಸಂಸ್ಥೆಗಳು, ನಾಗರಿಕ ರಕ್ಷಣಾ ಸಿಬ್ಬಂದಿಯಿಂದ ಸಂಘಟಿತ ಭಾಗವಹಿಸುವಿಕೆಯ ಮಹತ್ವವನ್ನು ಗೃಹ ಸಚಿವಾಲಯ ಒತ್ತಿ ಹೇಳಿದೆ. ಕೇಂದ್ರದ ಈ ಆದೇಶದ ಸಮಯವು ಬಹಳ ನಿರ್ಣಾಯಕವಾಗಿದೆ. ಕೊನೆಯ ಬಾರಿಗೆ ಇದೇ ರೀತಿಯ ರಕ್ಷಣಾ ಕವಾಯತು 1971ರಲ್ಲಿ ನಡೆದಿತ್ತು. ವರ್ಷದಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ಸಂಭವಿಸಿತ್ತು.

ಮೋದಿ ಭೇಟಿಯಾದ ರಕ್ಷಣಾ ಕಾರ್ಯದರ್ಶಿ

28 ಪ್ರವಾಸಿಗರು ಸಾವಿಗೀಡಾಗಿದ್ದು, ಈ ಘಟನೆಗೆ ಭಾರತವನ್ನು ಕೆರಳುವಂತೆ ಮಾಡಿದೆ. ಉಗ್ರರ ದಾಳಿಯನ್ನು ಗಂಭೀರವಾಗಿ ಪರಿಗಣಿಸಿರುವ ಭಾರತ ಸರ್ಕಾರ ದಾಳಿ ನಡೆದ ಮರುದಿನವೇ ಸಂಪುಟ ಸಮಿತಿ (ಸಿಸಿಎಸ್) ಸಭೆ ನಡೆಸಿತ್ತು. ಉಗ್ರರ ದಾಳಿಗೆ ಬಲವಾಗಿ ಪ್ರತಿಕ್ರಿಯಿಸಲು ತಂತ್ರ, ಗುರಿಗಳು ಮತ್ತು ಸಮಯವನ್ನು ನಿರ್ಧರಿಸಲು ಸರ್ಕಾರವು ಈ ಸಭೆ ನಡೆಸಿದ್ದು, ಸಭೆಯಲ್ಲಿ ಸಶಸ್ತ್ರ ಪಡೆಗಳಿಗೆ ಸಂಪೂರ್ಣ ಕಾರ್ಯಾಚರಣೆಯ ಪರಮಾಧಿಕಾರವನ್ನು ನೀಡಿತ್ತು. ಭಯೋತ್ಪಾದಕ ದಾಳಿಯ ರೂವಾರಿಗಳ ವಿರುದ್ಧ ಸರ್ಕಾರವು ತೆಗೆದುಕೊಳ್ಳುವ ಯಾವುದೇ ಕ್ರಮಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇವೆಂದು ವಿರೋಧ ಪಕ್ಷಗಳು ತಿಳಿಸಿದ್ದವು. ಜಮ್ಮು–ಕಾಶ್ಮೀರದಲ್ಲಿ ಚುನಾವಣೆಗಳು ಯಶಸ್ವಿಯಾಗಿ ನಡೆದ ನಂತರ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ ಕಾರ್ಯಗಳು ಉತ್ತಮವಾದ ಹಿನ್ನೆಲೆಯಲ್ಲಿ ಉಗ್ರರ ದಾಳಿ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಒಳ ಮೀಸಲಾತಿ ಘೋಷಣೆ

ಕಾಂಗ್ರೆಸ್ ನೀಡಿದ ಭರವಸೆಯಂತೆ ನಮ್ಮ ಸರ್ಕಾರ ಸಮೀಕ್ಷಾ ಕಾರ್ಯ ಕೈಗೆತ್ತಿಕೊಂಡು ಯಾವುದೇ ಲೋಪ ಬರದಂತೆ ಒಳ ಮೀಸಲಾತಿ ಕಲ್ಪಿಸಲಿದೆ. ಪರಿಶಿಷ್ಟರಲ್ಲಿ 101 ಜಾತಿಗಳ ನಿಖರ ಮಾಹಿತಿ ಕಲೆ ಹಾಕಲು ಈಗ ಸಮೀಕ್ಷೆ ನಡೆಸಲಾಗುತ್ತಿದೆ. ಅದರಲ್ಲೂ ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಜಾತಿಗಳಲ್ಲಿ ಎಡ–ಬಲ ಗೊಂದಲ ನಿವಾರಣೆ ಆಗಬೇಕಿದ್ದು, ಸಮೀಕ್ಷೆ ಇದನ್ನು ಪರಿಹರಿಸಲಿದೆ ಎಂದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅಧ್ಯಕ್ಷತೆಯಲ್ಲಿ ಏಕಸದಸ್ಯ ಆಯೋಗ ರಚನೆ ಮಾಡಿದ್ದೆವು. ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕುರಿತು ಸಮಿತಿ ವರದಿ ನೀಡಿದೆ. ಸಂವಿಧಾನದ 341ನೇ ವಿಧಿಯ ಅಡಿಯಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 101 ಜಾತಿಗಳನ್ನು ಗುರುತಿಸಲಾಗಿದೆ. ಈ ಜಾತಿಗಳ ವೈಜ್ಞಾನಿಕ ವರ್ಗೀಕರಣಕ್ಕೆ ದತ್ತಾಂಶ ಸಂಗ್ರಹಣಾ ಸಮೀಕ್ಷೆ ನಡೆಸಲು ಸಮಿತಿ ಶಿಫಾರಸ್ಸು ಮಾಡಿದೆ. 2011ರ ಜನಗಣತಿ ಆಧಾರದಲ್ಲಿ ಸದಾಶಿವ ಆಯೋಗ ಪರಿಶಿಷ್ಟ ಜಾತಿ ಸಮುದಾಯಗಳ ಜನಸಂಖ್ಯೆ ಗುರುತಿಸಿತ್ತು. ಆಗಸ್ಟ್ 2024ರಲ್ಲಿ ಸುಪ್ರೀಂಕೋರ್ಟ್ ಒಳ ಮೀಸಲಾತಿ ಪರ ನೀಡಿರುವ ಆದೇಶದಂತೆ ನಾವು ಮುಂದುವರೆದಿದ್ದೇವೆ. ಇಂದಿನಿಂದ ಮೇ 17ರವರೆಗೆ ಮನೆ ಮನೆಗೆ ತೆರಳಿ ದತ್ತಾಂಶ ಸಂಗ್ರಹಿಸುವ ಕೆಲಸ ಆಗಲಿದೆ, ಸುಮಾರು 65 ಸಾವಿರ ಶಿಕ್ಷಕರನ್ನು ನಿಯೋಜಿಸಲಾಗಿದೆ. 10–12 ಮಂದಿ ಶಿಕ್ಷಕರಿಗೆ ಒಬ್ಬ ಮೇಲ್ವಿಚಾರಕರು ಇರುತ್ತಾರೆ. ಮನೆ ಮನೆಗೆ ಭೇಟಿ ಕೊಡುವ ಜೊತೆಗೆ, ಮೊದಲ ಹಂತದಲ್ಲಿ ಮೇ 5ರಿಂದ 17 ರವರೆಗೂ, ಮೇ 19ರಿಂದ 21ರವರೆಗೆ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಸಮೀಕ್ಷೆ ನಡೆಯುತ್ತದೆ. ಯಾರಾದರೂ ಬಿಟ್ಟು ಹೋಗಿದ್ದರೆ ಶಿಬಿರಕ್ಕೆ ಬಂದು ಸೇರಿಸಬಹುದು. ಮೂರನೇ ಹಂತದಲ್ಲಿ ಮೇ 19ರಿಂದ 22 ರವರೆಗೆ ಆನ್‌ಲೈನ್ ಮೂಲಕ ಸ್ವಯಂ ಘೋಷಣೆಗೆ ಅವಕಾಶ ಕಲ್ಪಿಸಲಾಗಿದೆ. ಮೂರೂ ಹಂತಗಳಲ್ಲಿ ವೈಜ್ಞಾನಿಕವಾಗಿ ದತ್ತಾಂಶ ಸಂಗ್ರಹಿಸಲಾಗುವುದು ಎಂದರು.

ಸಾತಗಳ್ಳಿ ಬಳಿ ಕ್ರೀಡಾ ಸಂಕೀರ್ಣ

ಆ ಸ್ಥಳದಲ್ಲಿ ಕೆರೆ ಇರುವುದರಿಂದ ಪರಿಸರವಾದಿಗಳಿಂದ ಆಕ್ಷೇಪ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನ ಇಲವಾಲ ಸಮೀಪದ ಹುಯಿಲಾಳು ಗ್ರಾಮದ ಬಳಿ ನಿರ್ಮಿಸಲು ನಿರ್ಧರಿಸಲಾಗಿದ್ದು, ಇದೀಗ ಕೆರೆ ಜಾಗವನ್ನು ಸಂರಕ್ಷಣೆ ಮಾಡುವುದರೊಂದಿಗೆ ಉಳಿದ ಜಾಗದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಿಸಲು ಸಿದ್ಧತೆ ನಡೆಸಲಾಗುತ್ತಿದೆ. ಸಾತಗಳ್ಳಿ–ಹಂಚ್ಯಾ ಸರ್ವೆ ನಂ. 84, 85, 88, 104, 105, 106, 107 ಹಾಗೂ 109ರಲ್ಲಿ ಮುಡಾಗೆ ಸೇರಿದ 25.2 ಎಕರೆ ಭೂಮಿಯನ್ನು ಯುವ ಸಬಲೀಕರಣ–ಕ್ರೀಡಾ ಇಲಾಖೆಗೆ ನೀಡಲು ಮುಡಾದಲ್ಲಿ 2 ವರ್ಷದ ಹಿಂದೆಯೇ ನಿರ್ಣಯವಾಗಿದೆ. ರಿಂಗ್ ರಸ್ತೆ ಹಾಗೂ ವಿಟಿಯುಗೆ ಹೊಂದಿಕೊಂಡಂತೆ ಇರುವ ಈ ಜಾಗದಲ್ಲಿ ಕ್ರೀಡಾ ಸಂಕೀರ್ಣ ತಲೆ ಎತ್ತುವುದರಿಂದ ಕ್ರೀಡಾ ಚಟುವಟಿಕೆಗೆ ಪ್ರೋತ್ಸಾಹದೊಂದಿಗೆ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ರೂಪುಗೊಳಿಸಲು ಸಹಕಾರಿಯಾಗಲಿದೆ.

ಏನೇನು ಇರುತ್ತದೆ: ಕ್ರೀಡಾ ಸಂಕೀರ್ಣ(ಸ್ಪೋರ್ಟ್ಸ್ ಕಾಂಪ್ಲೆಕ್ಸ್)ದಲ್ಲಿ ಸೈಕ್ಲಿಂಗ್ ವೆಲೋಡ್ರಮ್, ಖೋಖೋ, ಕುಸ್ತಿ ಹಾಗೂ ವಾಲಿಬಾಲ್ ಅಕಾಡೆಮಿ ಇರುತ್ತದೆ.

ರಿಂಗ್ ರಸ್ತೆಗೆ ಹೊಂದಿಕೊಂಡಂತೆ 6–8 ಎಕರೆ ವಿಸ್ತೀರ್ಣದ ಜಾಗದಲ್ಲಿ ಸೈಕ್ಲಿಂಗ್ ವೆಲೋಡ್ರಮ್ ನಿರ್ಮಿಸಲಾಗುತ್ತದೆ. ಈ ಸೈಕ್ಲಿಂಗ್ ವೆಲೋಡ್ರಮ್‌ನಲ್ಲಿ ಸೈಕಲ್ ಟ್ರ್ಯಾಕ್, ಟ್ರಯಲ್ ಟ್ರ್ಯಾಕ್, ಸೈಕ್ಲಿಂಗ್ ಪಟುಗಳು ಡ್ರೆಸ್ ಬದಲಿಸುವ ಕೊಠಡಿ ಸೇರಿದಂತೆ ಇನ್ನಿತರ ಸೌಲಭ್ಯ ಇರುತ್ತದೆ. ವಾಲಿಬಾಲ್, ಖೋ ಖೋ ಅಕಾಡೆಮಿಯಲ್ಲಿ ಪ್ರತ್ಯೇಕ ಎರಡೆರಡು ಕ್ರೀಡಾ ಅಂಗಳ(ಕೋರ್ಟ್), ಕ್ರೀಡಾ ಅಕಾಡೆಮಿಗೆ ಸೇರುವ ಕ್ರೀಡಾಪಟುಗಳಿಗೆ ವಾಸ್ತವ್ಯ ಹೂಡಲು ಹಾಸ್ಟೆಲ್ ನಿರ್ಮಾಣ, ಜಿಮ್, ಟ್ರ್ಯಾಕ್ ಹಾಗೂ ಇನ್ನಿತರ ಸೌಲಭ್ಯ ನಿರ್ಮಿಸಲಾಗುತ್ತದೆ. ಕುಸ್ತಿ ಅಕಾಡೆಮಿಯಲ್ಲಿ ಗರಡಿ ಮನೆ ಸೇರಿದಂತೆ ಕುಸ್ತಿ ತರಬೇತಿ ನೀಡಲು ಬೇಕಾದ ವ್ಯವಸ್ಥೆ ಮಾಡಲಾಗುತ್ತದೆ.

ಹಸ್ತಾಂತರಕ್ಕೆ ಸಿದ್ಧತೆ: ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಎ.ಡಿ.ಭಾಸ್ಕರ್ ನಾಯಕ ಅವರು ಮುಡಾಗೆ ಪತ್ರ ಬರೆದು ಸೈಕ್ಲಿಂಗ್ ವೆಲೋಡ್ರಮ್ ನಿರ್ಮಾಣಕ್ಕೆ ಜಾಗ ಕೋರಿದ್ದರು. ಆದರೆ, ಮುಡಾದಿಂದ ಕ್ರೀಡಾ ಸಂಕೀರ್ಣ ನಿರ್ಮಾಣ ಮಾಡುವಂತೆ ಸಲಹೆ ವ್ಯಕ್ತವಾಗಿತ್ತು. ಅಲ್ಲದೆ, ಸಿಎಂ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಕುಸ್ತಿ, ಖೋಖೋ, ವಾಲಿಬಾಲ್ ಅಕಾಡೆಮಿ ನಿರ್ಮಾಣಕ್ಕೆ ತಲಾ 2 ಕೋಟಿ ರೂ. ಮೀಸಲಿಟ್ಟ ಹಿನ್ನೆಲೆಯಲ್ಲಿ ಒಂದೇ ಸ್ಥಳದಲ್ಲಿ ಕ್ರೀಡಾ ಸಂಕೀರ್ಣ ಸ್ಥಾಪಿಸುವ ಪ್ರಸ್ತಾಪಕ್ಕೆ ಇಂಬು ನೀಡಿದಂತಾಗಿದೆ. ಈಗಾಗಲೇ ಮುಡಾ ಸಭೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಆ ಭೂಮಿ ನೀಡಲು ನಿರ್ಧರಿಸಿರುವುದರಿಂದ ಇದೀಗ ಆ ಭೂಮಿಯ ಹಸ್ತಾಂತರ ಪ್ರಕ್ರಿಯೆ ಆರಂಭವಾಗಿದೆ. ಮುಡಾ ಅಧಿಕಾರಿಗಳು ಶೀಘ್ರದಲ್ಲಿಯೇ ಕ್ರೀಡಾ ಸಂಕೀರ್ಣ ನಿರ್ಮಿಸಲುದ್ದೇಶಿಸಿರುವ ಜಾಗದಲ್ಲಿ ಸರ್ವೆ ಕಾರ್ಯ ನಡೆಸಿ, ಎಷ್ಟು ಎಕರೆ ಭೂಮಿ ಇದೆ, ಅಲ್ಲಿ ಕೆರೆಗೆ ಸೇರಿದ ಜಾಗ ಎಷ್ಟು ಎಂದು ಪ್ರತ್ಯೇಕಿಸಿ, ಹದ್ದು ಬಸ್ತು ಮಾಡಲಾಗುತ್ತದೆ. ಬಳಿಕ ಆ ಭೂಮಿಗೆ ಬೆಲೆ ನಿಗದಿ ಮಾಡಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರ ಮಾಡುತ್ತದೆ. ಆ ನಂತರ ಮುಡಾಗೆ ಹಣ ಪಾವತಿಸಬೇಕೋ ಅಥವಾ ಯಾವುದೇ ಹಣ ನೀಡದೆ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಿಸಬೇಕೋ ಎನ್ನುವುದನ್ನು ಸರ್ಕಾರ ನಿರ್ಧರಿಸುತ್ತದೆ.

ಮೈಸೂರಲ್ಲೂ ಸಮೀಕ್ಷೆ ಆರಂಭ


ಅದನ್ನು ಆ್ಯಪ್‌ನಲ್ಲಿ ದಾಖಲಿಸುತ್ತಿದ್ದಾರೆ. ಯಾವುದೇ ಲೋಪ ಆಗದಂತೆ ಹತ್ತು ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ನಿಯೋಜಿಸಿದ್ದು, ಅವರು ಪರಿಶೀಲನೆ ನಡೆಸುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ವ್ಯವಸ್ಥಾಪಕರೂ ಆದ ಜಾತಿ ಸಮೀಕ್ಷೆ ನೋಡೆಲ್ ಅಧಿಕಾರಿ ರಂಗೇಗೌಡರು ಅಶೋಕಪುರಂ ಸೇರಿದಂತೆ ಇತರೆಡೆ ಭೇಟಿ ನೀಡಿ ಸಮೀಕ್ಷಾ ಕಾರ್ಯ ಪರಿಶೀಲಿಸಿದ್ದಾರೆ. ಇಂದಿನಿಂದ ಆರಂಭವಾಗಿರುವ ಪ.ಜಾತಿ ಸಮೀಕ್ಷಾ ಕಾರ್ಯ ಮೇ 23ರವರೆಗೆ ನಿರಂತರವಾಗಿ ನಡೆಯಲಿದೆ. ಸಮೀಕ್ಷಾದಾರರು ಮನೆಗೆ ಭೇಟಿ ನೀಡಿದಾಗ ಮನೆಯಲ್ಲಿಲ್ಲದ ಕುಟುಂಬದವರು ಮಾಹಿತಿ ನೀಡಲು ಪ್ರತಿ ಬೂತ್‌ನಲ್ಲಿ ಕೇಂದ್ರ ತೆರೆಯಲಾಗುವುದು. ಮೇ 18ರಿಂದ 21ರವರೆಗೆ ಈ ಕೇಂದ್ರ ಕಾರ್ಯನಿರ್ವಹಿಸಲಿದ್ದು, ಅಲ್ಲಿ ಪರಿಶಿಷ್ಟ ಜಾತಿಯ ಕುಟುಂಬದವರು ಸಮಗ್ರ ಮಾಹಿತಿ ನೀಡಬಹುದು.

ಒಂದು ಗ್ರಾಮದಲ್ಲೂ ಸಮಸ್ಯೆ ಆಗಬಾರದು

ಶೇ.55ರಷ್ಟು ಮಾನ್ಸೂನ್ ಪೂರ್ವ ಮಳೆಯಾಗಿದೆ. ವಾಡಿಕೆಗಿಂತ ಯಾವುದೇ ಜಿಲ್ಲೆಯಲ್ಲಿ ವಾಡಿಕೆಗಿಂತ ಕಡಿಮೆ ಮಳೆ ದಾಖಲಾಗಿಲ್ಲ. 27 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಎಲ್ಲಾ ಜಲಾಶಯಗಳಲ್ಲಿ ಶೇ.50ರಿಂದ ಶೇ.60 ರಷ್ಟು ಹೆಚ್ಚಿನ ನೀರಿನ ಸಂಗ್ರಹವಿದೆ. ಮಾನ್ಸೂನ್ ವಿಳಂಬವಾದರೆ 6319 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಬಹುದು ಎಂದು ಗುರುತಿಸಲಾಗಿದೆ. ಪ್ರಸ್ತುತ 551 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 123 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಅಗತ್ಯ ಸಂದರ್ಭದಲ್ಲಿ ನೀರು ಪಡೆಯಲು ಈಗಾಗಲೇ 3 ಸಾವಿರ ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಲಾಗಿದ್ದು, 480 ಬೋರ್‌ವೆಲ್‌ಗಳನ್ನು ಖಾಸಗಿಯವರಿಂದ ಬಾಡಿಗೆ ಪಡೆದು ನೀರು ಒದಗಿಸಲಾಗುತ್ತಿದೆ.

ಕನ್ನಡ ಕೃತಿಗಳು ವಿಶ್ವದ ಹಲವು ಭಾಷೆಗೆ ಭಾಷಾಂತರಗೊಳ್ಳಲು ಸಹಕಾರ

●ಸಿಎಂ ಸಿದ್ದರಾಮಯ್ಯ ಭರವಸೆ ●ಹಂಪನಾರ 'ಚಾರು ವಸಂತ' ಪರ್ಷಿಯನ್ ಕೃತಿ ಲೋಕಾರ್ಪಣೆ ●ನಾನು ಸಾಹಿತಿಯಲ್ಲ; ಆದರೆ ಸಾಹಿತಿಗಳ ಒಡನಾಡಿ!



ಹಂಪನಾ ಅವರ 'ಚಾರು ವಸಂತ' ದೇಸೀ ಕಾವ್ಯದ ಪರ್ಷಿಯನ್ ಭಾಷಾ ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಿದರು.

ಬೆಂಗಳೂರು, ಮೇ 5(ಕೆಎಂಶಿ)– ಕನ್ನಡದ ಮಹತ್ವದ ಕೃತಿಗಳು ಇಂಗ್ಲಿಷ್ ಸೇರಿದಂತೆ ವಿಶ್ವದ ಹಲವು ಭಾಷೆಗಳಿಗೆ ಭಾಷಾಂತರಗೊಳ್ಳಲು ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಹಂಪನಾ ಅವರ 'ಚಾರು ವಸಂತ' ದೇಸೀ ಕಾವ್ಯದ ಪರ್ಷಿಯನ್ ಭಾಷಾ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಹಂಪನಾ ಕನ್ನಡ ನೆಲದ ಶ್ರೇಷ್ಠ ಸಾಂಸ್ಕೃತಿಕ ವ್ಯಕ್ತಿತ್ವ. ಇವರ 'ಚಾರು ವಸಂತ' ವಿಶೇಷ ಕೃತಿಯಾಗಿದ್ದು, ಇದುವರೆಗೆ 16 ಭಾಷೆಗಳಿಗೆ ತರ್ಜುಮೆಯಾಗಿದೆ. 17ನೇ ಭಾಷೆಯಾಗಿ ಪರ್ಷಿಯನ್‌ಗೆ ಅನುವಾದಗೊಂಡಿರುವುದು ಕನ್ನಡದ ಹೆಮ್ಮೆ ಎಂದರು.

ವಿಶ್ವದ ಎಲ್ಲಾ ಭಾಷೆಗಳಿಗೆ ಕನ್ನಡ ಕೃತಿಗಳು ಅನುವಾದಗೊಂಡರೆ ಕನ್ನಡದ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

ಮಲ ಹೊರುವ ಅನಿಷ್ಟ ಪದ್ಧತಿ ಬಗೆಗಿನ ಕೃತಿ 'ಚಾರು ವಸಂತ'. ಜಾತಿ ವ್ಯವಸ್ಥೆ ರೂಪಿಸಿದ ಶಾಪ ಅಸ್ಪೃಶ್ಯತೆ, ಇದು ಅಳಿಯಬೇಕು. ಸಾಮಾಜಿಕ, ಆರ್ಥಿಕ ಶಕ್ತಿ ಎಲ್ಲರಿಗೂ ಸಿಕ್ಕಾಗ ಮಾತ್ರ ಚಲನೆ ಇಲ್ಲದ ಜಾತಿ ವ್ಯವಸ್ಥೆ ಅಳಿಯಲು ಸಾಧ್ಯ.

ಇದೊಂದು ಅದ್ಭುತ ಕಾವ್ಯ, ಕನ್ನಡ ಭಾಷೆ ಉಳಿವು, ಬೆಳವಣಿಗೆಗೆ ಇಂತಹ ಕೃತಿಗಳು ಹೆಚ್ಚಾಗಿ ಹೊರಬರಬೇಕು, ಚಾರು ವಸಂತ ಕಾವ್ಯ ನಾಟಕವಾಗಿಯೂ ಜನಮನ್ನಣೆ ಗಳಿಸಿದೆ ಎಂದರು.

ಹಂಪನಾ ದಂಪತಿ ನನಗೆ ಬಹಳ ವರ್ಷಗಳಿಂದ ಆತ್ಮೀಯರಾಗಿದ್ದರು, ನಾನು ಸಾಹಿತಿ ಅಲ್ಲ, ಆದರೆ, ಸಾಹಿತ್ಯ ಮತ್ತು ಸಾಹಿತಿಗಳ ಒಡನಾಟ ಇದೆ. ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷನಾದ ನಂತರ ನಾನು ಕೇಂದ್ರ ಸರ್ಕಾರಕ್ಕೆ ಬರೆಯುವ ಪತ್ರಗಳನ್ನು ಹೊರತುಪಡಿಸಿ ಬೇರೆ ಕಡೆಗಿನ ಪತ್ರ ವ್ಯವಹಾರಕ್ಕೆ ಇಂಗ್ಲಿಷ್ ಬಳಸುವುದಿಲ್ಲ. ಆದ್ದರಿಂದ ನನಗೆ ಇಂಗ್ಲಿಷ್ ಹೆಚ್ಚು ಬರದಂತಾಯಿತು ಎಂದರು.

ಡಿಸ್ನಿಲ್ಯಾಂಡ್ ಮಾದರಿ ಕೆಆರ್‌ಎಸ್ ಬೃಂದಾವನ ಉನ್ನತೀಕರಣ

●2,615.96 ಕೋಟಿ ವೆಚ್ಚದ ಯೋಜನೆಗೆ ಮೂರನೇ ಬಾರಿ ಟೆಂಡರ್ ●ಮೂರು ಹಂತಗಳಲ್ಲಿ ಕಾಮಗಾರಿ ಕೈಗೊಂಡು ನಾಲ್ಕೂವರೆ ವರ್ಷದಲ್ಲಿ ಪೂರ್ಣ ●ಆಸಕ್ತ ಕಂಪನಿ ತಜ್ಞರೊಂದಿಗೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಸರಣಿ ಸಭೆ ●ಸರ್ಕಾರದ ಅನುಮೋದನೆ ನಂತರ ಯಶಸ್ವಿ ಬಿಡ್ಡುದಾರ ಸಂಸ್ಥೆಗೆ ಕಾರ್ಯಾದೇಶ



ಉನ್ನತೀಕರಣ ಡಿಸ್ನಿಲ್ಯಾಂಡ್ ಮಾದರಿ ಯೋಜನೆಯ ಮಾಸ್ಟರ್ ಪ್ಲಾನ್



ಕೃಷ್ಣರಾಜ ಸಾಗರ ಬೃಂದಾವನ.

ಮೈಸೂರು, ಮೇ 5(ಆರ್‌ಕೆ)– ಪ್ರತಿನಿತ್ಯವೂ ಪ್ರವಾಸಿಗರಿಂದ ತುಂಬಿರುವ ವಿಶ್ವವಿಖ್ಯಾತ ಕೃಷ್ಣರಾಜಸಾಗರ (ಕೆಆರ್‌ಎಸ್)ದ ಬೃಂದಾವನವನ್ನು ಡಿಸ್ನಿಲ್ಯಾಂಡ್ ಮಾದರಿಯಲ್ಲಿ ಉನ್ನತೀಕರಿಸಲು ಕಾವೇರಿ ನೀರಾವರಿ ನಿಗಮ ನಿಯಮಿತ (ಸಿಎನ್‌ಎನ್‌ಎಲ್)ವು ಮಾಸ್ಟರ್ ಪ್ಲಾನ್ ಸಿದ್ಧಪಡಿಸಿದೆ.

ಕೆಆರ್‌ಎಸ್ ಅಣೆಕಟ್ಟೆಯ ಕೆಳಭಾಗದ 198 ಎಕರೆ ಉದ್ಯಾನವನವನ್ನು ಅತ್ಯಾಕರ್ಷಕವಾಗಿ ವಿನ್ಯಾಸಗೊಳಿಸಿ, ಡಿಸ್ನಿಲ್ಯಾಂಡ್ ಮಾದರಿ ನವ ರೂಪದಲ್ಲಿ ಅಭಿವೃದ್ಧಿಪಡಿಸಲು ನಿಗಮವು ಮುಂದಾಗಿದ್ದು, ಅದಕ್ಕಾಗಿ 2,615.96 ಕೋಟಿ ರೂ. ಯೋಜನೆ ಸಿದ್ಧಪಡಿಸಿದೆ. ಈ ಹಿಂದೆ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಬೃಂದಾವನವನ್ನು ಡಿಸ್ನಿಲ್ಯಾಂಡ್ ರೀತಿ ಅಭಿವೃದ್ಧಿಪಡಿಸಲು ಡಿಪಿಆರ್ ತಯಾರಿಸಲಾಗಿತ್ತಾದರೂ, ರೈತರು, ಪರಿಸರ ಪ್ರೇಮಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಯೋಜನೆ ವಿಳಂಬವಾಗಿತ್ತು. ಅಷ್ಟರಲ್ಲಿ ಸಮ್ಮಿಶ್ರ ಸರ್ಕಾರ ಪತನಗೊಂಡು ನಂತರ ಬಂದ ಬಿಜೆಪಿ ಸರ್ಕಾರ ಅದನ್ನು ಕಾರ್ಯಗತಗೊಳಿಸಲಿಲ್ಲ.

ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಡಿಸ್ನಿಲ್ಯಾಂಡ್ ಮಾದರಿಯಲ್ಲೇ ಬೃಂದಾವನವನ್ನು ಉನ್ನತೀಕರಣ (Upgradation of Brindavan Garden) ಹೆಸರಿನ ಯೋಜನೆ ಅನುಷ್ಠಾನಗೊಳಿಸಲು ಆಸಕ್ತಿ ತೋರಿದೆ.

ಮಾಸ್ಟರ್ ಪ್ಲಾನ್‌ನಂತೆ ಯೋಜನೆ ಅನುಷ್ಠಾನಗೊಳಿಸಲು ಕಾವೇರಿ ನೀರಾವರಿ ನಿಗಮ ನಿಯಮಿತದಿಂದ ಈ ಹಿಂದೆ ಎರಡು ಬಾರಿ ಟೆಂಡರ್ ಕರೆಯಲಾಗಿತ್ತಾದರೂ, ಯಾವುದೇ ಸಂಸ್ಥೆಗಳೂ ಆಸಕ್ತಿ ತೋರಿರಲಿಲ್ಲ. ಕೆಲ ಷರತ್ತು, ಅವಧಿ ಮಾರ್ಪಡಿಸಿ ಇದೀಗ ಮೂರನೇ ಬಾರಿ ಕರೆದಿದ್ದ ಟೆಂಡರ್‌ಗೆ ಮೇ 3ರಂದು ಕಡೇ ದಿನ ನಿಗದಿಪಡಿಸಲಾಗಿತ್ತು. ಕೆಲ ಕಂಪನಿಗಳು ಟೆಂಡರ್ ಅರ್ಜಿ ಸಲ್ಲಿಸಿವೆಯಾದರೂ, ನಿಗಮದ ನಿಯಮ ಷರತ್ತುಗಳ ಸಂಬಂಧ ಸರಣಿ ಸಭೆಗಳನ್ನು ನಡೆಸುತ್ತಿರುವುದರಿಂದ ಟೆಂಡರ್ ಸಲ್ಲಿಕೆ ದಿನಾಂಕವನ್ನು ಮತ್ತೆ ಮೇ 30ರವರೆಗೆ ವಿಸ್ತರಿಸಲಾಗಿದೆ. ಮಾಸ್ಟರ್ ಪ್ಲಾನ್‌ನಂತೆ ಅಭಿವೃದ್ಧಿಪಡಿಸಲು 3 ಹಂತಗಳಲ್ಲಿ ಕಾಮಗಾರಿ ಕೈಗೊಂಡು ನಾಲ್ಕೂವರೆ ವರ್ಷದೊಳಗೆ ಪೂರ್ಣಗೊಳಿಸಬೇಕಿದೆ. ನಂತರ ಪಿಪಿಪಿ ಮಾದರಿ 30 ವರ್ಷ ಅವಧಿಗೆ ಬೃಂದಾವನದ ನಿರ್ವಹಣೆಗೆ ಗುತ್ತಿಗೆ ನೀಡಲು ಸರ್ಕಾರ ನಿರ್ಧರಿಸಿದೆ.

ಮಾಸ್ಟರ್ ಪ್ಲಾನ್ ಪ್ರಕಾರ ಕೆಆರ್‌ಎಸ್ ಸರ್ಕಲ್, ಪ್ರವೇಶ ದ್ವಾರ, ಟೋಲ್‌ಗೇಟ್, ಹೆಲಿಪ್ಯಾಡ್, ವಾಹನ ನಿಲುಗಡೆ, ಕಾವೇರಿ ಪ್ರತಿಮೆ, ಎಂಟ್ರಿ ಪ್ಲಾಜಾ, ಗ್ರ್ಯಾಂಡ್ ಸ್ಟ್ರೀಟ್, ಫುಡ್ ಪ್ಲಾಜಾ, ದೋಣಿ ವಿಹಾರ, ಆ್ಯಂಪಿ ಥಿಯೇಟರ್, ಬಟಾನಿಕಲ್ ಗಾರ್ಡನ್, ಜಂಗಲ್ ಬೋಟ್ ರೈಡ್, ಉತ್ತರ ಉದ್ಯಾನ, ದೊಡ್ಡ ಕಮಾನು, ಮೀನಾ ಬಜಾರ್, ಲೇಸರ್ ಫೌಂಟೇನ್ ಶೋ, ಇಂಟರ್ನಲ್ ವಾಕಿಂಗ್ ಪಾತ್‌ವೇಗಳು, ದಕ್ಷಿಣ ಉದ್ಯಾನ, ವ್ಯೂ ಟವರ್, ಡಾಲ್ ಮ್ಯೂಸಿಯಂ, ಜಂಗಲ್ ಟ್ರಾಕ್, ವಾಟರ್ ಪಾರ್ಕ್, ಟೆಕ್ನೋ ಪಾರ್ಕ್, ಪೆಂಗ್ವಿನ್ ಝೂ, ಇಂಡೋರ್ ಅಮ್ಯೂಸ್‌ಮೆಂಟ್ ಪಾರ್ಕ್, ಸ್ಕೈ ಬ್ರಿಡ್ಜ್, ರಿವರ್ ವ್ಯೂ ಡೆಕ್, ವ್ಯಾಕ್ಸ್ ಮ್ಯೂಸಿಯಂ, ಐತಿಹಾಸಿಕ ಸಂಗ್ರಹಾಲಯ, ಟ್ರೀ ವಾಕ್, ಅರೋಮ ಗಾರ್ಡನ್, ಬಲೂನ್ ರೈಡ್, ವಾಟರ್ ಪ್ಲೇನ್, ಪ್ಯಾರಾಸೈಲ್ಲಿಂಗ್, ಜೈ ಹೋ ಫೌಂಟೇನ್ ನಂತಹ 40 ಬಗೆಯ ವಿಶೇಷತೆಗಳು ಪ್ರವಾಸಿಗರಿಗಾಗಿ ಬೃಂದಾವನ ಗಾರ್ಡನ್‌ನಲ್ಲಿ ಸೃಷ್ಟಿಯಾಗಲಿವೆ.

184.85 ಕೋಟಿ ರೂ. ವೆಚ್ಚದಲ್ಲಿ ಎತ್ತರದ ಬೃಹತ್ ಕಾವೇರಿ ಪ್ರತಿಮೆ, 48.16 ಕೋಟಿ ರೂ. ಅಂದಾಜು ವೆಚ್ಚದ ವಾಯುವಿಹಾರ ಮತ್ತು ಕಿರು ಜಲಪಾತ ನಿರ್ಮಿಸಲುದ್ದೇಶಿಸಲಾಗಿದ್ದು, ಒಮ್ಮೆ ಪ್ರವಾಸಿಗರು ಭೇಟಿ ನೀಡಿದರೆ, ಬೆಳಗ್ಗೆಯಿಂದ ರಾತ್ರಿವರೆಗೂ ಒಂದು ದಿನ ಪೂರ್ತಿ ಕೆಆರ್‌ಎಸ್ ಬೃಂದಾವನದಲ್ಲೇ ಕಾಲ ಕಳೆದು ರಾತ್ರಿ ಅಲ್ಲೇ ವಾಸ್ತವ್ಯ ಹೂಡುವಂತೆ ಯೋಜನೆ ರೂಪಿಸುವ ಉದ್ದೇಶವಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಇಂದು ವೃತ್ತಿ ಮಾರ್ಗದರ್ಶನ, ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ಅರಿವು

ಮೈಸೂರು, ಮೇ 5–ಮೈಸೂರು ವಿಶ್ವವಿದ್ಯಾನಿಲಯ ನೇಗಿಲಯೋಗಿ ವಿದ್ಯಾವರ್ಧಕ ಸ್ಪರ್ಧಾ ಕೇಂದ್ರದ ವತಿಯಿಂದ ಮೇ 6ರಂದು ಬೆಳಗ್ಗೆ 11.30 ಗಂಟೆಗೆ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು(ಸ್ವಾಯತ್ತ), ಜೆ.ಎಲ್.ಬಿ ರಸ್ತೆ, ಮೈಸೂರು ಇಲ್ಲಿ ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರು ನಗರದ ಸೈಬರ್ ಕ್ರೈಂನ ಸಹಾಯಕ ಪೊಲೀಸ್ ಆಯುಕ್ತ ಸ್ನೇಹರಾಜ್ ಉದ್ಘಾಟನೆ ಮಾಡಲಿದ್ದು, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಡಾ.ಚಂದ್ರಶೇಖರ್ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ (ಸ್ವಾಯತ್ತ), ಪ್ರಾಂಶುಪಾಲ ಪ್ರೊ. ಅಬ್ದುಲ್ ರಹಿಮನ್. ಎಂ, ಮೈಸೂರು ವಿಶ್ವವಿದ್ಯಾನಿಲಯದ, ನೇಗಿಲಯೋಗಿ ವಿದ್ಯಾವರ್ಧಕ ಸ್ಪರ್ಧಾಕೇಂದ್ರದ ಸಂಯೋಜಕ ಡಾ.ಎಂ.ಬಿ.ಸುರೇಶ್ ಹಾಗೂ ಗೌರವ ಸಲಹೆಗಾರ ಡಿ.ರವಿಕುಮಾರ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪರಿಷತ್ ಸದಸ್ಯರಿಗೆ ಮನವಿ



ಮೈಸೂರಿನ ಮಹಾರಾಜ ಸಂಸ್ಕೃತ ಪಾಠಶಾಲೆಯ ಅಭಿವೃದ್ಧಿ ವಿಚಾರವಾಗಿ ಕಾಲೇಜಿನ ಪ್ರಾಂಶುಪಾಲರಾದ ಸತ್ಯನಾರಾಯಣ ಮತ್ತು ಅಧ್ಯಾಪಕ ವೃಂದ, ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ ಸಂಸ್ಕೃತ ಪಾಠಶಾಲೆಯ ಕಟ್ಟಡ ದುಸ್ಥಿತಿ ಬಗ್ಗೆ ವಿವರಿಸಿ, ಅದನ್ನು ಸಂಬಂಧಪಟ್ಟ ಅಧಿಕಾರಿ ವರ್ಗದವರಿಗೆ ಮನವರಿಕೆ ಮಾಡಿಕೊಟ್ಟು ಕಾಲೇಜಿನ ಕಟ್ಟಡವನ್ನು ದುರಸ್ತಿಗೊಳಿಸಿಕೊಡುವಂತೆ ಕೋರಲಾಯಿತು. ಅಲ್ಲದೆ ಅಧ್ಯಾಪಕ ವೃಂದದ ಭತ್ಯೆ, ಕಾಲೇಜಿನ ಶ್ರೇಯೋಭಿವೃದ್ಧಿಗೆ ಸಹಕರಿಸುವಂತೆ ಕೋರಿಕೊಳ್ಳಲಾಯಿತು.

ಅನಸ್ ಅಹ್ಸಾನ್ ಕೊಲ್ಯಾಗೆ 606 ಅಂಕ



ಮೈಸೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ಸರಸ್ವತಿಪುರಂನಲ್ಲಿರುವ ರೋಟರಿ ವೆಸ್ಟ್‌ಶಾಲೆಯ ವಿದ್ಯಾರ್ಥಿ ಅನಸ್ ಅಹ್ಸಾನ್ ಕೊಲ್ಯಾ 606 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ–114, ಇಂಗ್ಲಿಷ್, ಹಿಂದಿ–99, ಗಣಿತಶಾಸ್ತ್ರ–100, ವಿಜ್ಞಾನ–99, ಸಮಾಜ ವಿಜ್ಞಾನ–100 ಅಂಕಗಳನ್ನು ಗಳಿಸಿದ್ದಾರೆ. ಈತ ಬೋಗಾದಿಯ ನಿವಾಸಿ ಕೊಲ್ಯಾ ಕನ್ಸ್ಟ್ರಕ್ಷನ್ಸ್ ಮಾಲೀಕ ಅಶ್ರಫ್ ಮೈಸೂರು ಮತ್ತು ಶೆಹನಾಜ್ ದಂಪತಿ ಪುತ್ರ.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ನೌಕರರಾದ ಆರ್.ನಾರಾಯಣಸ್ವಾಮಿ ಅವರ ಪುತ್ರಿ ಹಾಗೂ ಭಾರತೀಯ ವಿದ್ಯಾ ಭವನದ ವಿದ್ಯಾರ್ಥಿನಿ ಆರ್.ಎನ್.ತಾನ್ಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ(625/625), ಪವಿತ್ರಾಕುಮಾರಿ ಅವರ ಪುತ್ರಿ ನಿಧಿಶ್ರೀ(623/625) ತೃತೀಯ ಸ್ಥಾನ ಹಾಗೂ ಸುಕನ್ಯಾ ಅವರ ಪುತ್ರಿ ಟಿ.ಎಸ್.ಕೀರ್ತನಾ ದ್ವಿತೀಯ ಪಿಯುಸಿ **PCMB** ವಿಭಾಗದಲ್ಲಿ ಶೇ.95 ಅಂಕ ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಅವರನ್ನು ಬ್ಯಾಂಕಿನ ಆಡಳಿತ ಮಂಡಳಿಯ ಸಭೆಯಲ್ಲಿ ಸನ್ಮಾನಿಸಲಾಯಿತು. ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎಸ್‌ಬಿಎಂ ಮಂಜು, ಪಡುವಾರಹಳ್ಳಿ ಎಂ.ರಾಮಕೃಷ್ಣ, ರವಿಕುಮಾರ್ ರಾಜಕೀಯ, ಪಿ.ರಾಜೇಶ್ವರಿ, ಯೋಗಾನಂದ್, ಚಂದ್ರಶೇಖರ್, ನಿರಂಜನ್, ಪ್ರಮೀಳಾ, ಸೋಮಣ್ಣ, ಗಿರೀಶ್, ಕಾರ್ಯದರ್ಶಿ ಹರ್ಷಿತ್ ಇತರರಿದ್ದಾರೆ.

ನಾಳೆ ಮೈಸೂರಲ್ಲಿ ವೃತ್ತಿ ರಹದಾರಿ ಲೈಸೆನ್ಸ್ ನವೀಕರಣ

ಮೈಸೂರು, ಮೇ 5– ಮೈಸೂರು ಮಹಾನಗರಪಾಲಿಕೆಯು ವೃತ್ತಿ ರಹದಾರಿ ಲೈಸೆನ್ಸ್ ಪಡೆಯಲು ಹೊಸ ಸಾಫ್ಟ್‌ವೇರ್ ಅಳವಡಿಸಿದ್ದು, ಅದರಂತೆ ಲೈಸೆನ್ಸ್ ನವೀಕರಣ ಅಥವಾ ಹೊಸ ಲೈಸೆನ್ಸ್ ಪಡೆಯಲು ನಗರಪಾಲಿಕೆಯ ಆಯುಕ್ತರು, ಆರೋಗ್ಯಾಧಿಕಾರಿಗಳು ಮೇ 7 ರಂದು (ಬುಧವಾರ) ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ಸಮಯವನ್ನು ನಿಗದಿಪಡಿಸಿದ್ದಾರೆ.

ಹೋಟೆಲ್ ಮಾಲೀಕರ ಸಂಘದ ಎಲ್ಲಾ ಸದಸ್ಯರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು, ಲೈಸೆನ್ಸ್ ನವೀಕರಣಕ್ಕೆ ನಿಗದಿಪಡಿಸಿರುವ ಅಗತ್ಯ ದಾಖಲಾತಿಗಳಾದ ಗುರುತಿನ ಪುರಾವೆ ದಾಖಲಾತಿ, ಸ್ಥಳದ ಮಾಲೀಕತ್ವದ ದಾಖಲಾತಿ, ಪಾನ್ ನಂಬರ್, ಮೊಬೈಲ್ ನಂಬರ್, ಪಾಸ್‌ಪೋರ್ಟ್ ಅಳತೆಯ ಫೋಟೋ, ಇ–ಮೇಲ್ ಐಡಿ ಮತ್ತು ಈ ಹಿಂದಿನ ವರ್ಷದಲ್ಲಿ ಪಡೆಯಲಾಗಿರುವ ಉದ್ದಿಮೆ ಪರವಾನಗಿಯ ನಕಲು ಪ್ರತಿಗಳೊಂದಿಗೆ ನಮ್ಮ ಹೋಟೆಲ್ ಮಾಲೀಕರ ಸಂಘದ ಕಚೇರಿ, ಕೃಷ್ಣಮೂರ್ತಿಪುರಂ, ಮೈಸೂರು ಇಲ್ಲಿ ಹಾಜರಿದ್ದು, ಲೈಸೆನ್ಸ್ ನವೀಕರಣ ಮಾಡಿಸಿಕೊಳ್ಳುವಂತೆ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ವ್ಯಂಗ್ಯಚಿತ್ರಗಳಿಗೆ ಸಮಾಜದ ಪರವಾಗಿ ಎಚ್ಚರಿಸುವ ಗುಣವಿದೆ

● ವಿಶ್ವ ವ್ಯಂಗ್ಯಚಿತ್ರ ದಿನಾಚರಣೆ; ಕಲಾ ಪ್ರದರ್ಶನದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಅಭಿಮತ ● ಆ್ಯಂಫಿ ಮ್ಯಾನ್ ಕಾರ್ಟೂನ್ ಸೂಪರ್ ಹೀರೋ ಚಿತ್ರ ಲೋಕಾರ್ಪಣೆ

ಮೈಸೂರು, ಮೇ 5– ವ್ಯಂಗ್ಯಚಿತ್ರಗಳಿಗೆ ಸಮಾಜದ ಪರವಾಗಿ ಎಚ್ಚರಿಸುವ ಗುಣ ಇರುತ್ತದೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಬ್ಯಾಂಟರ್ ಬಾಬು ಪಬ್ಲಿಕೇಷನ್ಸ್ ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ವಿಜಯನಗರದ ಶ್ರೀ ಕಲಾನಿಕೇತನ ಕಲಾಶಾಲೆಯಲ್ಲಿ ಸೋಮವಾರ ಏರ್ಪಡಿಸಿದ್ದ ಎಂ.ವಿ.ನಾಗೇಂದ್ರ ಬಾಬು ಅವರ ವ್ಯಂಗ್ಯಚಿತ್ರ ಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಮುಖ್ಯಮಂತ್ರಿಗಳಾಗಿದ್ದ ಆರ್.ಗುಂಡೂರಾವ್, ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲ್, ಪತ್ರಿಕೆಗಳಲ್ಲಿ ವ್ಯಂಗ್ಯ ಚಿತ್ರಗಳನ್ನು ಗಮನಿಸುತ್ತಿದ್ದರು, ಎಚ್ಚೆತ್ತುಕೊಳ್ಳುತ್ತಿದ್ದರು ಎಂದರು.


ಹಿಂದೆ ರಾಜಕಾರಣಿಗಳು ಸೂಕ್ಷ್ಮ ಸಂವೇದನವುಳ್ಳವರಾಗಿ ತಮ್ಮ ಬಗ್ಗೆ ವ್ಯಂಗ್ಯಚಿತ್ರಗಳು ಪ್ರಕಟವಾದರೆ ಅವು ಸಮಾಜದ ಧ್ವನಿಯಾಗಿವೆ ಎಂದು ತಿಳಿದು ಎಚ್ಚೆತ್ತುಕೊಳ್ಳುತ್ತಿದ್ದರು. ಆದರೆ ಈಗ ವ್ಯಂಗ್ಯಚಿತ್ರ ಬರೆದರೆ ಕೇಸು ದಾಖಲಿಸುವ ಹಂತ ತಲುಪಿದ್ದೇವೆ ಎಂದು ಶ್ರೀವತ್ಸ ವಿಷಾದಿಸಿದರು.

ಮುಖ್ಯ ಅತಿಥಿಗಳಾಗಿದ್ದ ಸಮಾಜ ಸೇವಕ ಕೆ.ರಘುರಾಂ ಮಾತನಾಡಿ, ಗುಂಡೂರಾವ್ ಮುಖ್ಯಮಂತ್ರಿ ಆಗಿದ್ದಾಗ ಬೆಂಗಳೂರಿನಲ್ಲಿ ಈಜುಕೊಳವನ್ನು ಸ್ವತಃ ಹಾರಿ ಈಜುವ ಮೂಲಕ ಉದ್ಘಾಟಿಸಿದ್ದರು. ಆ ಸಂದರ್ಭದಲ್ಲಿ ನಮ್ಮೂರಿನಲ್ಲಿ ಚಿತಾಗಾರ ಉದ್ಘಾಟನೆಯಿದೆ ಬನ್ನಿ...! ಎಂಬ ಕಾರ್ಟೂನ್ ಪ್ರಕಟವಾಗಿತ್ತು. ಇದನ್ನು ಗಮನಿಸಿದಾಗ, ಅಲ್ಲಿರುವ ಗೂಢಾರ್ಥ ಗೊತ್ತಾಗುತ್ತದೆ ಎಂದರು.

ಮೈಸೂರಿನವರೇ ಆದ ಆರ್.ಕೆ. ಲಕ್ಷ್ಮಣ್ ಮುಂಬೈನಲ್ಲಿ ನೆಲೆನಿಂತು ಪ್ರಸಿದ್ಧ ವ್ಯಂಗ್ಯಚಿತ್ರಕಾರರಾಗಿ ಬೆಳೆದರು. ಆ ರೀತಿಯಲ್ಲಿ ನಾಗೇಂದ್ರ ಬಾಬು ಕೂಡ ತಮ್ಮ ಕೈಲಾದ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಯಾವುದೇ ಪತ್ರಿಕೆಗಳು, ಮ್ಯಾಗ್‌ಝೀನ್‌ಗಳು ಫೋಟೋ, ರೇಖಾಚಿತ್ರ, ವ್ಯಂಗ್ಯಚಿತ್ರಗಳಿಲ್ಲದೇ ಪ್ರಕಟವಾಗುವುದಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಭರಣಿ ಆರ್ಟ್ ಗ್ಯಾಲರಿ ಸಂಸ್ಥಾಪಕ ಎನ್.ಬಿ.ಕಾವೇರಪ್ಪ ಮಾತನಾಡಿ, ವ್ಯಂಗ್ಯಚಿತ್ರ ರಚನೆಗೆ ಸಾಕಷ್ಟು ಪರಿಶ್ರಮ, ಬುದ್ಧಿವಂತಿಕೆ ಬೇಕು. ಇವೆರಡು ಇದ್ದಲ್ಲಿ ಒಳ್ಳೆಯ ಹೆಸರು ಮಾಡಬಹುದು ಎಂದರು. ಶ್ರೀ ಕಲಾನಿಕೇತನ ಕಲಾಶಾಲೆ ಪ್ರಾಂಶುಪಾಲ ಕೆ.ಸಿ. ಮಹದೇವ ಶೆಟ್ಟಿ ಮಾತನಾಡಿದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದರು. ಬ್ಯಾಂಟರ್ ಬಾಬು ಪಬ್ಲಿಕೇಷನ್ಸ್ ಸಂಚಾಲಕ ಚಕ್ರಪಾಣಿ ವಂದಿಸಿದರು.



ಮೈಸೂರಿನ ವಿಜಯನಗರದ ಶ್ರೀ ಕಲಾನಿಕೇತನ ಕಲಾಶಾಲೆಯಲ್ಲಿ ಏರ್ಪಡಿಸಿದ್ದ ಎಂ.ವಿ.ನಾಗೇಂದ್ರಬಾಬು ಅವರ ವ್ಯಂಗ್ಯಚಿತ್ರಗಳ ಪ್ರದರ್ಶನವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿ, ವೀಕ್ಷಿಸಿದರು. ಸಮಾಜ ಸೇವಕ ಕೆ.ರಘುರಾಂ, ಕಲಾವಿದರಾದ ಎನ್.ಬಿ.ಕಾವೇರಪ್ಪ, ಕೆ.ಸಿ.ಮಹದೇವಶೆಟ್ಟಿ, ಎಂ.ಚಂದ್ರಶೇಖರ್, ಅಂಶಿ ಪ್ರಸನ್ನಕುಮಾರ್ ಇನ್ನಿತರರು ಚಿತ್ರದಲ್ಲಿದ್ದಾರೆ.

> ಮೈಸೂರಿನಲ್ಲಿ ಆರ್.ಎಸ್. ನಾಯ್ಡು ನಗರ ಎಂಬ ದೊಡ್ಡ ಬಡಾವಣೆ ಇದೆ. ಆದರೆ ಆರ್.ಎಸ್.ನಾಯ್ಡು ಪ್ರಸಿದ್ಧ ವ್ಯಂಗ್ಯಚಿತ್ರಕಾರರು ಎಂಬುದೇ ಬಹಳಷ್ಟು ಮಂದಿಗೆ ಗೊತ್ತಿಲ್ಲ. ಅವರು, ಇಂದಿರಾಗಾಂಧಿ ಕುಟುಂಬಕ್ಕೆ ಹತ್ತಿರವಾಗಿದ್ದರೂ ಅವರ ವಿರುದ್ಧವೇ ವ್ಯಂಗ್ಯಚಿತ್ರಗಳನ್ನು ಬರೆಯುತ್ತಿದ್ದರು. ಇವರ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದೇವೆ. ಸಂಪೂರ್ಣ ಮಾಹಿತಿ ದೊರೆತ ನಂತರ ವಿಚಾರ ಸಂಕಿರಣ ಮಾಡುವ ಉದ್ದೇಶವಿದೆ.
> –ಕೆ.ಸಿ.ಮಹದೇವಶೆಟ್ಟಿ, ಪ್ರಾಂಶುಪಾಲರು, ಶ್ರೀಕಲಾನಿಕೇತನ ಕಲಾಶಾಲೆ


ದೇಶ – ವಿದೇಶ

ಯುದ್ಧದ ಕಾರ್ಮೋಡ; ಪಾಕಿಸ್ತಾನದಿಂದ ಮತ್ತೊಂದು ಕ್ಷಿಪಣಿ ಪರೀಕ್ಷೆ




ಇಸ್ಲಾಮಾಬಾದ್: ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಭಾರತ ಹಾಗೂ ಪಾಕಿಸ್ತಾನ ನಡುವಿನ ಉದ್ವಿಗ್ನತೆ ಮತ್ತಷ್ಟು ಹೆಚ್ಚುತ್ತಿದ್ದು, ಪಾಕ್ ಸೇನೆ ಸೋಮವಾರ ಮತ್ತೊಂದು ಕ್ಷಿಪಣಿ ಪರೀಕ್ಷೆ ನಡೆಸಿರುವುದಾಗಿ ಹೇಳಿಕೊಂಡಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಇಂದು ಇಸ್ಲಾಮಾಬಾದ್‌ನಲ್ಲಿ ಪ್ರಧಾನಿ ಶೆಹಬಾಜ್ ಷರೀಫ್ ಅವರೊಂದಿಗೆ ಮಾತುಕತೆ ನಡೆಸಿದ್ದು, ಅವರು ಈ ವಾರದ ಕೊನೆಯಲ್ಲಿ ದೆಹಲಿಗೆ ತೆರಳುವ ಮೊದಲು ಈ ಕ್ಷಿಪಣಿ ಪರೀಕ್ಷೆ ನಡೆದಿದೆ. ಇರಾನ್ ಎರಡು ಪರಮಾಣು ಶಸ್ತ್ರಸಜ್ಜಿತ ನೆರೆಹೊರೆಯವರ ನಡುವೆ ಮಧ್ಯಸ್ಥಿಕೆ ವಹಿಸಲು ಮುಂದಾದ ನಂತರ, ಅರಘ್ಚಿ ಅವರು ಎರಡೂ ದೇಶಗಳಿಗೆ ಭೇಟಿ ನೀಡುತ್ತಿರುವ ಮೊದಲ ಹಿರಿಯ ವಿದೇಶಿ ರಾಜತಾಂತ್ರಿಕ ಆಗಿದ್ದಾರೆ. ಈ ಮಧ್ಯೆ ಪಾಕಿಸ್ತಾನ ಸೇನೆಯು ಇಂದು 120 ಕಿಲೋಮೀಟರ್(75 ಮೈಲುಗಳು) ವ್ಯಾಪ್ತಿಯ ಫತಾಹ್ ಕ್ಷಿಪಣಿಯನ್ನು ಪರೀಕ್ಷಿಸಿದೆ. ಪಾಕಿಸ್ತಾನದ ಸೇನೆಯು ಈ ಕ್ಷಿಪಣಿಯನ್ನು ಗೌಪ್ಯ ಸ್ಥಳದಿಂದ ಉಡಾಯಿಸಿದೆ.

ಶ್ರೀನಗರದಲ್ಲಿ 45 ವರ್ಷದ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ, ಕೊಲೆ




ಶ್ರೀನಗರ: ಜಮ್ಮು–ಕಾಶ್ಮೀರದ ರಾಜಧಾನಿ ಶ್ರೀನಗರದ ಹೊರವಲಯ ನಿಶಾತ್ ಪ್ರದೇಶದಲ್ಲಿ 45 ವರ್ಷದ ಅಲೆಮಾರಿ ಮಹಿಳೆ ಮೇಲೆ ನಾಲ್ವರು ಪುರುಷರು ಸಾಮೂಹಿಕ ಅತ್ಯಾಚಾರವೆಸಗಿ ಕೊಲೆ ಮಾಡಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಮಹಿಳೆ ಆಸ್ಪತ್ರೆಗೆ ದಾಖಲಾಗುತ್ತಿದ್ದಂತೆಯೇ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ. ವಾಟರ್ ವರ್ಕ್ಸ್ ರಸ್ತೆಯ ನಿಶಾತ್ ಬಳಿ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ. ಕಾನೂನಿನ ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ. ಅಪರಾಧದಲ್ಲಿ ಭಾಗಿಯಾಗಿರುವ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ವಕ್ತಾರರು ತಿಳಿಸಿದ್ದಾರೆ. ಮಹಿಳೆ ಅಲೆಮಾರಿ ಬಕರ್ವಾಲ್ ಸಮುದಾಯಕ್ಕೆ ಸೇರಿದ್ದು, ಆಕೆ ಸಮುದಾಯದ ಇತರ ಸದಸ್ಯರೊಂದಿಗೆ ವಾರದ ಹಿಂದೆ ತಮ್ಮ ಜಾನುವಾರುಗಳೊಂದಿಗೆ ರಿಯಾಸಿ ಜಿಲ್ಲೆಯಿಂದ ವಲಸೆ ಬಂದಿದ್ದರು. ನಾವು ಬೇಸಿಗೆ ಮತ್ತು ಚಳಿಗಾಲದಲ್ಲಿ ಈ ಸ್ಥಳಕ್ಕೆ ವಲಸೆ ಹೋಗಿ ನಂತರ ವಾಪಸ್ಸಾಗುತ್ತೇವೆ ಎಂದು ಅವರ ಮಗ ಹೇಳಿದರು.

ಭಯೋತ್ಪಾದನೆ ವಿರುದ್ಧ ಪ್ರಧಾನಿ ಮೋದಿಗೆ ಸಂಪೂರ್ಣ ಬೆಂಬಲ




ಮಾಸ್ಕೋ: ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಇಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರೆ ಮಾಡಿ, ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಬಲವಾಗಿ ಖಂಡಿಸಿದ್ದಾರೆ. ಪಹಲ್ಗಾಮ್ ದಾಳಿಯ ಅಪರಾಧಿಗಳು ಮತ್ತು ಅವರ ಬೆಂಬಲಿಗರನ್ನು ಶಿಕ್ಷಿಸಬೇಕು ಎಂದು ರಷ್ಯಾದ ಅಧ್ಯಕ್ಷರು ಒತ್ತಿ ಹೇಳಿದ್ದಾರೆ. ಭಾರತ–ರಷ್ಯಾ ನಡುವಿನ ವಿಶೇಷ ಕಾರ್ಯತಂತ್ರದ ಸಹಭಾಗಿತ್ವವನ್ನು ಇನ್ನಷ್ಟು ಬಲಪಡಿಸಲು ಇಬ್ಬರೂ ನಾಯಕರು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ವಿಜಯ ದಿನದ 80ನೇ ವಾರ್ಷಿಕೋತ್ಸವದ ಆಚರಣೆಯಂದು ರಷ್ಯಾ ಅಧ್ಯಕ್ಷ ಪುಟಿನ್ ಅವರಿಗೆ ಪ್ರಧಾನಿ ಶುಭಾಶಯಗಳನ್ನು ತಿಳಿಸಿದರು. ಈ ವರ್ಷದ ಕೊನೆಯಲ್ಲಿ ಭಾರತದಲ್ಲಿ ನಡೆಯಲಿರುವ ವಾರ್ಷಿಕ ಶೃಂಗಸಭೆಗೆ ಪ್ರಧಾನಿ ಮೋದಿ, ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಆಹ್ವಾನಿಸಿದರು. ಪುಟಿನ್ ಭಾರತಕ್ಕೆ ಆಗಮಿಸಲು ಒಪ್ಪಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ವಿಮಾನದಲ್ಲಿ ಗಗನಸಖಿ ಜೊತೆ ಅನುಚಿತ ವರ್ತನೆ: ಪಾನಮತ್ತ ಪ್ರಯಾಣಿಕನ ಬಂಧನ



ಮುಂಬೈ: ದೆಹಲಿಯಿಂದ ಮಹಾರಾಷ್ಟ್ರದ ಶಿರಡಿಗೆ ಬರುತ್ತಿದ್ದ ವಿಮಾನದಲ್ಲಿ ಕುಡಿದ ಮತ್ತಿನಲ್ಲಿದ್ದ ಪ್ರಯಾಣಿಕನೊಬ್ಬ ಗಗನಸಖಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಕೇಳಿ ಬಂದಿದೆ. ಇಂಡಿಗೋ ವಿಮಾನ ಶಿರಡಿ ವಿಮಾನ ನಿಲ್ದಾಣ ತಲುಪುತ್ತಿದ್ದಂತೆಯೇ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತ ಪ್ರಯಾಣಿಕ ವಿಮಾನದ ಶೌಚಾಲಯದ ಬಳಿ ಗಗನಸಖಿಯನ್ನು ಅನುಚಿತವಾಗಿ ಸ್ಪರ್ಶಿಸಿದ್ದಾನೆ. ಕೂಡಲೇ ಆಕೆ ಆರೋಪಿಯ ಅನುಚಿತ ವರ್ತನೆಯನ್ನು ಮೇಲಧಿಕಾರಿಗಳ ಗಮನಕ್ಕೆ ತಂದು ವಿಮಾನ ನಿಲ್ದಾಣದ ಪೊಲೀಸರಿಗೆ ತಿಳಿಸಿದ್ದಾರೆ. ಬಳಿಕ ಅಧಿಕಾರಿಗಳು ವಿಮಾನ ಶಿರಡಿ ವಿಮಾನ ನಿಲ್ದಾಣದಲ್ಲಿ ಇಳಿದ ನಂತರ ಭದ್ರತಾ ಸಿಬ್ಬಂದಿಗೆ ಮಾಹಿತಿ ನೀಡಿದ್ದು, ಪ್ರಯಾಣಿಕನನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿಯನ್ನು ರಹತಾ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದ್ದು, ಲೈಂಗಿಕ ದೌರ್ಜನ್ಯದ ಪ್ರಕರಣ ದಾಖಲಿಸಿಕೊಂಡಿದ್ದಾರೆ. ವೈದ್ಯಕೀಯ ಪರೀಕ್ಷೆಯಲ್ಲಿ ಮದ್ಯ ಸೇವಿಸಿರುವುದು ದೃಢಪಟ್ಟಿದೆ.

ಹೌತಿ ಉಗ್ರರಿಂದ ಇಸ್ರೇಲ್ ವಿಮಾನ ನಿಲ್ದಾಣದ ಮೇಲೆ ಕ್ಷಿಪಣಿ ದಾಳಿ



ಇಸ್ರೇಲ್: ಇಸ್ರೇಲ್‌ನ ಬೆನ್ ಗುರಿಯನ್ ವಿಮಾನ ನಿಲ್ದಾಣದ ಮೇಲೆ ಹೌತಿ ಬಂಡುಕೋರರು ಕ್ಷಿಪಣಿ ದಾಳಿ ನಡೆಸಿದ್ದಾರೆ. ಯೆಮೆನ್‌ನಿಂದ ಹಾರಿಸಲಾದ ಕ್ಷಿಪಣಿ ಬೆನ್ ಗುರಿಯನ್ ವಿಮಾನ ನಿಲ್ದಾಣದ ಮುಖ್ಯ ಟರ್ಮಿನಲ್ ಬಳಿ ಬಿದ್ದಿದ್ದು, ಈ ದಾಳಿಯಲ್ಲಿ ನಾಲ್ವರು ಗಾಯಗೊಂಡಿದ್ದಾರೆ. ಕ್ಷಿಪಣಿ ದಾಳಿಯು ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತು. ನಂತರ ಕಾರ್ಯಾಚರಣೆಗಳು ಪುನರಾರಂಭಗೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹೌತಿ ಮಿಲಿಟರಿ ವಕ್ತಾರ ಯಾಹ್ಯಾ ಸಾರಿ, ಬೆನ್ ಗುರಿಯನ್ ವಿಮಾನ ನಿಲ್ದಾಣವು ಇನ್ನು ಮುಂದೆ ವಿಮಾನ ಪ್ರಯಾಣಕ್ಕೆ ಸುರಕ್ಷಿತವಲ್ಲ ಎಂದು ಹೇಳಿದ್ದಾರೆ. ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಬಲವಾದ ಪ್ರತಿಕ್ರಿಯೆಯನ್ನು ನೀಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಈ ವೇಳೆ ನಮಗೆ ಯಾರಾದರೂ ಹೊಡೆದರೆ, ನಾವು ಅವರಿಗೆ 7 ಪಟ್ಟು ಹೆಚ್ಚು ಹೊಡೆಯುತ್ತೇವೆ ಎಂದು ಅವರು ಎಚ್ಚರಿಕೆ ನೀಡಿದರು. ಇದೇ ವೇಳೆ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಗಳಿಂದ ಇಸ್ರೇಲ್ ಅನ್ನು ಗುರಿಯಾಗಿಸಿಕೊಂಡಿರುವ ಇರಾನ್ ಬೆಂಬಲಿತ ಹೌತಿ ಬಂಡುಕೋರರು, ನಾವು ಪ್ಯಾಲೆಸ್ಟೀನಿಯನ್ನರ ಜೊತೆಗಿದ್ದೇವೆ ಎಂದು ಹೇಳಿದ್ದಾರೆ.

ವ್ಯಾನ್ ಮೇಲೆ ಕಾಡಾನೆ ದಾಳಿ: ಚಾಲಕನಿಗೆ ತೀವ್ರ ಗಾಯ



ಮಡಿಕೇರಿ: ಮದುವೆ ಸಮಾರಂಭಕ್ಕೆಂದು ಗದಗಿಗೆ ಕುಶಾಲನಗರ ಮಾರ್ಗವಾಗಿ ತೆರಳುತ್ತಿದ್ದ ವ್ಯಾನ್ ಮೇಲೆ ಕಾಡಾನೆ ದಾಳಿ ಮಾಡಿರುವ ಘಟನೆ ರಾತ್ರಿ ಮಡಿಕೇರಿ–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವ ಆನೆಕಾಡು ಬಳಿ ನಡೆದಿದೆ.

ಆನೆಕಾಡು ಹೆದ್ದಾರಿಯ ಅರಣ್ಯ ಡಿಪೋ ಸಮೀಪ ಈ ಘಟನೆ ಸಂಭವಿಸಿದ್ದು, ಕಾಡಾನೆ ದಾಳಿಯಿಂದ ಶರೀಫ್ ಎಂಬವರು ಗಾಯಗೊಂಡಿದ್ದರೆ ವ್ಯಾನ್ ನಜ್ಜುಗುಜ್ಜಾಗಿದೆ.

ಮೂಲತಃ ಗದಗ ಜಿಲ್ಲೆಯವರಾದ ಶರೀಫ್ ಮಡಿಕೇರಿಯಲ್ಲಿ ಟೈಲ್ಸ್ ಕೆಲಸ ಮಾಡಿಕೊಂಡಿದ್ದು, ಊರಿನಲ್ಲಿ ನಡೆಯಲಿದ್ದ ಸಂಬಂಧಿಕರ ಮದುವೆಯಲ್ಲಿ ಪಾಲ್ಗೊಳ್ಳಲು ರಾತ್ರಿ ಕುಟುಂಬದವರೊಂದಿಗೆ ವ್ಯಾನ್‌ನಲ್ಲಿ ಪ್ರಯಾಣಿಸುತ್ತಿದ್ದರು. ಸುಂಟಿಕೊಪ್ಪ ಮಾರ್ಗವಾಗಿ ಕುಶಾಲನಗರ ಕಡೆಗೆ ತೆರಳುತ್ತಿದ್ದ ಸಂದರ್ಭ ಆನೆಕಾಡು ಬಳಿಯ ಅರಣ್ಯ ಡಿಪೋ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅರಣ್ಯ ಪ್ರವೇಶಿಸಲು ಕಾಡಾನೆಗಳ ಹಿಂಡು ರಸ್ತೆ ದಾಟುತ್ತಿದ್ದವು. ಇದನ್ನು ಗಮನಿಸಿ ಶರೀಫ್ ಅವರು ವ್ಯಾನ್ ಅನ್ನು ನಿಲ್ಲಿಸಿದ್ದಾರೆ. ಆದರೆ ಕಾಡಾನೆಗಳ ಹಿಂಡಿನಲ್ಲಿದ್ದ ಹೆಣ್ಣಾನೆಯೊಂದು ವ್ಯಾನ್ ಮೇಲೆ ತೀವ್ರ ದಾಳಿ ಮಾಡಿದೆ. ಕಾಡಾನೆ ಕೋಪಕ್ಕೆ ವ್ಯಾನ್ ನಜ್ಜುಗುಜ್ಜಾಗಿದ್ದು, ಶರೀಫ್ ಅವರಿಗೆ ಗಂಭೀರ ಗಾಯವಾಗಿದ್ದರೆ, ಅವರ ಪತ್ನಿ, ಇಬ್ಬರು ಮಕ್ಕಳು ಹಾಗೂ ಭಾವನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಪ್ರಾಣಾ ಪಾಯದಿಂದ ಪಾರಾಗಿದ್ದಾರೆ. ಗಾಯಾಳುಗಳನ್ನು ಕುಶಾಲನಗರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಘಟನೆ ಕುರಿತು ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.



ಸ್ಥಳೀಯ ಸಂಸ್ಥೆ ಬಲವರ್ಧನೆಗೆ ಮುಂದಾಗಿ

ಅಧಿಕಾರಿಗಳ ಸಭೆಯಲ್ಲಿ ಡಾ.ಸಿ.ನಾರಾಯಣ ಸ್ವಾಮಿ ಸೂಚನೆ

ಮಡಿಕೇರಿ ಮೇ 5–ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಲಭ್ಯವಿರುವ ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಂಡು ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಬಲವರ್ಧನೆಗೆ ಮುಂದಾಗುವಂತೆ ರಾಜ್ಯ 5ನೇ ಹಣಕಾಸು ಆಯೋಗದ ಅಧ್ಯಕ್ಷ ಡಾ.ಸಿ.ನಾರಾಯಣ ಸ್ವಾಮಿ ತಿಳಿಸಿದ್ದಾರೆ.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಾಂಸ್ಥಿಕ ರಚನೆ, ಕಾರ್ಯ ಚಟುವಟಿಕೆಗಳು, ಆರ್ಥಿಕ ಸ್ಥಿತಿಗತಿ, ಮೂಲ ಸೌಕರ್ಯ ಹಾಗೂ ಸೇವೆ ಒದಗಿಸುವಲ್ಲಿ ತಾಂತ್ರಿಕ ಕೌಶಲ್ಯ ಮತ್ತಿತರ ಅಧ್ಯಯನ ಸಂಬಂಧ ನಡೆದ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಲಭ್ಯವಿರುವ ಸಂಪನ್ಮೂಲವನ್ನು ಕ್ರೋಢೀಕರಿಸಿ ಅಗತ್ಯ ಸೇವೆಗಳನ್ನು ಕಲ್ಪಿಸಬೇಕು ಎಂದು ಸಲಹೆ ಮಾಡಿದ ಅವರು, ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಅಭಿವೃದ್ಧಿಯತ್ತ ಮುನ್ನಡೆಯಬೇಕು. ಸ್ಥಳೀಯ ಸಂಸ್ಥೆಗಳ ಬಲವರ್ಧನೆ ಅತಿ ಮುಖ್ಯವಾಗಿದ್ದು, ಆ ನಿಟ್ಟಿನಲ್ಲಿ ಆದಾಯ ತೆರಿಗೆ ಸಂಗ್ರಹ ಮೂಲ ಸೌಲಭ್ಯ ಸೌಕರ್ಯಕ್ಕೆ ಒತ್ತು ನೀಡುವುದು, ಕುಡಿಯುವ ನೀರು, ವಿದ್ಯುತ್ ಪೂರೈಕೆ, ಜೊತೆಗೆ ಸ್ವ ಉದ್ಯೋಗಕ್ಕೆ ಒತ್ತು ನೀಡುವುದು, ಹಾಗೆಯೇ ಗ್ರಾಮೀಣಾಭಿವೃದ್ಧಿ ಮತ್ತು ನಗರ ಪ್ರದೇಶಗಳಲ್ಲಿ ಅಭಿವೃದ್ಧಿ ಚಟುವಟಿಕೆಗೆ ಪೂರಕವಾಗಿ ಕಾರ್ಯಕ್ರಮ ರೂಪಿಸುವಂತಾಗಬೇಕು ಎಂದರು.



5ನೇ ಹಣಕಾಸು ಆಯೋಗದ ಅಧ್ಯಕ್ಷ ಡಾ.ಸಿ.ನಾರಾಯಣ ಸ್ವಾಮಿ ಜಿ.ಪಂ. ಸಭಾಂಗಣದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದರು.

ರಾಜ್ಯ 5ನೇ ಹಣಕಾಸು ಆಯೋಗದ ಸದಸ್ಯ ಆರ್.ಎಸ್.ಪೋಂಡೆ, ಮಹಮ್ಮದ್ ಸನಾವುಲ್ಲಾ, ಕೆಂಪೇಗೌಡ, ಕೆ.ಯಾಲಕ್ಕಿಗೌಡ, ಸುಪ್ರಸನ್ನ ಅವರು ಮಾತನಾಡಿ ಸ್ಥಳೀಯ ಸಂಸ್ಥೆಗಳನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಎಲ್ಲರೂ ಮುಂದಾಗಬೇಕು. ಹಾಗಾದಾಗ ಮಾತ್ರ ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ ಆದಾಯ ತೆರಿಗೆ ಸಂಗ್ರಹ ಸೇರಿದಂತೆ ಸ್ಥಳೀಯ ಸಂಸ್ಥೆ ವ್ಯಾಪ್ತಿಗಳಲ್ಲಿ ಆದಾಯ ತೆರಿಗೆ ಸಮರ್ಪಕ ನಿರ್ವಹಣೆಗೆ ಖಾಯಂ ಸಿಬ್ಬಂದಿ ನೇಮಿಸುವಂತಾಗಬೇಕು. ಇದರಿಂದ ಜವಾಬ್ದಾರಿ ಹೆಚ್ಚಾಗಲಿದೆ ಎಂದು ಸಲಹೆ ಮಾಡಿದರೆ, ಜಿಪಂ ಸಿಇಒ ಆನಂದ್ ಪ್ರಾಶ್ ಮೀನಾ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಶೇ.50ಕ್ಕೂ ಹೆಚ್ಚು ಹುದ್ದೆಗಳು ಖಾಲಿಯಿದ್ದು, ಇವುಗಳನ್ನು ಭರ್ತಿ ಮಾಡುವಂತಾಗಬೇಕು. ಜೊತೆಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು. ಹಾಗೆಯೇ ಸ್ಥಳೀಯವಾಗಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸುವಂತಾಗಬೇಕು ಎಂದು ಹೇಳಿದರು.

ಜಿ.ಪಂ ಮುಖ್ಯ ಲೆಕ್ಕಾಧಿಕಾರಿ ಜೀವಲ್ ಕಾನ್ ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕ ಬಿ.ಬಸಪ್ಪ ಮಾತನಾಡಿ ಹೆಚ್ಚಿನ ಅನುದಾನ ಬಿಡುಗಡೆ ಮಾಡಿದಲ್ಲಿ ಗ್ರಾಪಂ ಮತ್ತು ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ನಗರಸಭೆ ಅಧ್ಯಕ್ಷೆ ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ವಿವಿಧ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು, ಪೌರಾಯುಕ್ತರು, ಪುರಸಭೆ ಮತ್ತು ಪಪಂ ಮುಖ್ಯಾಧಿಕಾರಿಗಳು, ವಿವಿಧ ಗ್ರಾಪಂ ಅಧ್ಯಕ್ಷರು ಇತರರು ಇದ್ದರು.

ವಿದ್ಯುತ್ ತಂತಿ ಸ್ಪರ್ಶಕ್ಕೆ 4 ಹಸು, ಕಾಡು ಕುರಿ ಬಲಿ



ಮಡಿಕೇರಿ: ವಿದ್ಯುತ್ ತಂತಿ ಸ್ಪರ್ಶದಿಂದ ನಾಲ್ಕು ಹಸು, ಕಾಡು ಕುರಿಯೊಂದು ಧಾರುಣವಾಗಿ ಸಾವನ್ನಪ್ಪಿದ ಘಟನೆ ವಿರಾಜಪೇಟೆ ಹೊರವಲಯದ ಬೊಳ್ಳುಮಾಡುವಿನಲ್ಲಿ ನಡೆದಿದೆ.

ಚೀಯಂಡಿರ ಕೆ.ಸುರೇಶ ಎಂಬವರಿಗೆ ಸೇರಿದ ಹಸುಗಳನ್ನು ಸಮೀಪದ ಗದ್ದೆಯಲ್ಲಿ ಮೇಯಲು ಬಿಡಲಾಗಿತ್ತು. ಈ ನಡುವೆ ಗದ್ದೆ ಮೇಲ್ಭಾಗ ಹಾದು ಹೋಗಿದ್ದ ವಿದ್ಯುತ್ ತಂತಿ ತುಂಡಾಗಿ ಬಿದ್ದಿದ್ದು, ಸ್ಥಳದಲ್ಲೇ 4 ಹಸುಗಳು ಸಾವನ್ನಪ್ಪಿವೆ. ಹಸುಗಳ ಜೊತೆಯೆ ಆಹಾರ ಅರಸುತ್ತಿದ್ದ ಕಾಡು ಕುರಿ ಕೂಡ ಮೃತಪಟ್ಟಿದೆ.

ಚೆಸ್ಕಾಂ ಮತ್ತು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಇಲಾಖೆಯ ಸಿಬ್ಬಂದಿ ಮತ್ತು ಪಶುವೈದ್ಯರು ಸ್ಥಳಕ್ಕಾಗಮಿಸಿ ನಾಲ್ಕು ಹಸು ಕಾಡು ಕುರಿ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿರುವುದನ್ನು ದೃಢಪಡಿಸಿ ಅಲ್ಲಿಯೇ ಹಸುಗಳ ಮರಣೋತ್ತರ ಪರೀಕ್ಷೆ ನಡೆಸಿದರು ಈ ಘಟನೆಯಿಂದ 1.50 ಲಕ್ಷ ರೂ.ಗಳ ನಷ್ಟವಾಗಿದೆ ಎಂದು ಚೀಯಂಡಿರ ಕೆ.ಸುರೇಶ ತಿಳಿಸಿದರು.

ಅದೇ ಸ್ಥಳದಲ್ಲಿ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟ ಕಾಡು ಕುರಿಯನ್ನು ಅರಣ್ಯ ಇಲಾಖೆ ವಶಕ್ಕೆ ಪಡೆದರು. ಬಳಿಕ ಕಾಡು ಕುರಿಯ ಮರಣೋತ್ತರ ಪರೀಕ್ಷೆ ನಡೆಸಿ, ಸ್ಥಳದಲ್ಲೇ ಅಂತ್ಯ ಸಂಸ್ಕಾರ ನಡೆಸಲಾಯಿತು.

ಹಿಂದೂಗಳ ಹತ್ಯೆ– ಆತ್ಮಹತ್ಯೆ ಖಂಡಿಸಿ

ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್ ಪ್ರತಿಭಟನೆ



ಕುಶಾಲನಗರ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಹತ್ಯೆ ಹಿಂದೂ ಕಾರ್ಯಕರ್ತ ದಿ.ವಿನಯ್ ಸೋಮಯ್ಯ ಆತ್ಮಹತ್ಯೆ, ಮಂಗಳೂರಿನ ಸುಹಾಸ್ ಶೆಟ್ಟಿ ಕಗ್ಗೊಲೆ ಖಂಡಿಸಿ ಮಿಷನ್ ಮೋದಿ ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿತು.

ಟ್ರಸ್ಟ್ ಪದಾಧಿಕಾರಿಗಳು ಹಾಗೂ ಬಿಜೆಪಿ ಹಾಗೂ ವಿವಿಧ ಹಿಂದೂಪರ ಸಂಘಟನೆಗಳ ಪದಾಧಿಕಾರಿಗಳು ಕಾರು ನಿಲ್ದಾಣದಲ್ಲಿ ಜಮಾವಣೆಗೊಂಡು ಮೃತಪಟ್ಟ ವ್ಯಕ್ತಿಗಳ ಭಾವಚಿತ್ರಗಳನ್ನು ಹಿಡಿದು ಪ್ರತಿಭಟನಾಕಾರರು ಸಾಮೂಹಿಕ ಶ್ರದ್ಧಾಂಜಲಿ ಸಲ್ಲಿಸಿದರು. ನಂತರ ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ನ್ಯಾಯಕ್ಕಾಗಿ ಸರ್ಕಾರವನ್ನು ಆಗ್ರಹಿಸಿದರು.

ಮಾಜಿ ಶಾಸಕ ಕೆ ಜಿ ಬೋಪಯ್ಯ ಮಾತನಾಡಿ, ಅಮಾಯಕ ಹಿಂದೂ ಪ್ರವಾಸಿಗರನ್ನು ಗುಂಡಿಕ್ಕಿ ಹತ್ಯೆ ಮಾಡಿದ ಉಗ್ರರ ಹೇಯಕೃತ್ಯ ಖಂಡನೀಯ. ಪ್ರಧಾನಿ ಮೋದಿ ನೇತೃತ್ವದಲ್ಲಿ ಈ ಕೃತ್ಯಕ್ಕೆ ಪ್ರತೀಕಾರ ಖಂಡಿತ ಆಗುತ್ತದೆ ಇದರ ಬಗ್ಗೆ ಚಿಂತೆ ಬೇಡ ಎಂದರು. ಪೊಲೀಸ್ ಠಾಣೆ ಎಂದರೆ ಈಗ ಕಾಂಗ್ರೆಸ್ ಕಚೇರಿಯಂತಾಗಿದೆ. ಅಪರಾಧಿಕ ಹಿನ್ನೆಲೆ ಇಲ್ಲದ ವ್ಯಕ್ತಿ ಆತ್ಮಹತ್ಯೆಗೆ ಕಾರಣರಾದವರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಇದು ಸಣ್ಣ ವಿಚಾರ ಎಂದು ನಿರ್ಲಕ್ಷಿಸಿದರೆ ಕಾಶ್ಮೀರದಲ್ಲಾದಂತೆ ಇಲ್ಲೂ ಆಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ಪೊಲೀಸರು ಕಾಂಗ್ರೆಸ್ ಪೊಲೀಸರಾಗಿದ್ದಾರೆ. ಸರ್ಕಾರದ ಪೊಲೀಸರಾಗಿ ಉಳಿದಿಲ್ಲ ಎಂದು ದೂರಿದರು. ದೇಶ ಉಳಿದರೆ ನಾವು ಉಳಿಯುತ್ತೇವೆ. ಹಾಗಾಗಿ ದೇಶ ಮೊದಲು. ಮಂಗಳೂರು ಸುಹಾಸ್ ಶೆಟ್ಟಿ ಕೊಲೆಗೆ ಪೊಲೀಸ್ ಕುಮ್ಮಕ್ಕು ಕಾರಣ. ಎಂದು ಆರೋಪಿಸಿದರು.

ಮಾಜಿ ಸೇನಾನಿ ಮೇಜರ್ ನಂದ ಮಾತನಾಡಿ, ನಮ್ಮಲ್ಲಿ ಶಿಸ್ತು ಮತ್ತು ಒಗ್ಗಟ್ಟುಬೇಕು. ದೇಶಾದ್ಯಂತ ಜಾತಿ, ಜಾತಿ ಮಧ್ಯೆ ಕಂದಕ ಸೃಷ್ಟಿಸಲಾಗುತ್ತಿದೆ. ನಾವೆಲ್ಲಾ ಒಂದು ನಾವು ಭಾರತೀಯರು ಎನ್ನುವ ಭಾವ ನಮ್ಮದಾಗಬೇಕು ಎಂದರೆ, ಜಾತಿ ವ್ಯವಸ್ಥೆ ಬಿಟ್ಟು ಹಿಂದು ಸಮಾಜ ಒಂದಾಗಬೇಕು. ಇದುವೇ ಹಿಂದು ಸಮಾಜಕ್ಕಾಗಿ ಪ್ರಾಣ ತ್ಯಾಗ ಮಾಡಿದವರಿಗೆ ನಾವು ಕೊಡುವ ಗೌರವ ಹೆಚ್ಚಾಗಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ರವಿ ಕಾಳಪ್ಪ ನುಡಿದರು. ನಂತರ ಮೆರವಣಿಗೆಯಲ್ಲಿ ತೆರಳಿ ತಹಶೀಲ್ದಾರ್ ಕಿರಣ್ ಗೌರಯ್ಯರಿಗೆ ಮನವಿ ಸಲ್ಲಿಸಿದರು.

ಮಿಷನ್ ಮೋದಿ ಡೆಮೋಕ್ರೆಸಿ ಡೆವಲಪ್ಮೆಂಟ್ ಟ್ರಸ್ಟ್ ಜಿಲ್ಲಾ ಸಂಚಾಲಕ ವಿಷ್ಣುನಾಚಪ್ಪ, ಮೈಸೂರು ಜಿಲ್ಲಾಧ್ಯಕ್ಷ ಮೈನಾ ಲೋಕೇಶ್, ಉಪಾಧ್ಯಕ್ಷ ಮೈಸೂರು ಗಿರೀಶ್, ಸಂಘಟನಾ ಕಾರ್ಯದರ್ಶಿ ರವಿಶಂಕರ್, ಮುಖಂಡರಾದ ರವಿ ಕುಶಾಲಪ್ಪ, ಬಿ.ಬಿ ಭಾರತೀಶ್, ವಿಷ್ಣು ನಾಚಪ್ಪ, ಗೌತಮ್, ಲೋಕೇಶ್, ನಾಗೇಶ್ ಕುಂದಲಪಾಡಿ, ಅಶ್ವಿ, ಜಿ.ಎಲ್ ನಾಗರಾಜ್, ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸೌಮ್ಯ, ಉಪಾಧ್ಯಕ್ಷ ಪ್ರವೀಣ್, ಕಾಂತಿ ಬೆಳೆಯಪ್ಪ, ಹೆಚ್.ಎಸ್. ಅಶೋಕ್, ಎಂ.ಎಂ.ಚರಣ್, ಎಚ್.ಎಂ. ಮಧುಸೂದನ್, ಆರ್.ಕೆ.ಚಂದ್ರು, ಗೌತಮ್, ಬಿ.ಜೈವರ್ಧನ್, ಡಿ.ಕೆ.ತಿಮ್ಮಪ್ಪ, ಅಮೃತ್ ರಾಜ್, ಕೆ.ಜಿ.ಮನು, ಕೃಷ್ಣಪ್ಪ, ಗಣಿಪ್ರಸಾದ್, ಕೆ.ವರದ, ಗಂಗಮ್ಮ, ಗೀತಾ ಧರ್ಮಪ್ಪ, ಮುಂತಾದವರು ಪಾಲ್ಗೊಂಡಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಮೇ 6ರ ಬೆಳಗ್ಗೆ 10ರಿಂದ 4 ಗಂಟೆಯವರೆಗೆ ಅವರದಾಳು, ಕಣ್ಣಾರಳ್ಳಿ, ಕೊಡ್ಲಿಪೇಟೆ, ಬ್ಯಾಡಗೊಟ್ಟ, ನೀರುಗುಂದ, ಹೆಮ್ಮನೆ, ಬೆಸ್ಸೂರು, ಕಟ್ಟೆಪುರ, ನಿಲುವಾಗಿಲು, ಕೂಡ್ಲೂರು, ದೊಡ್ಡ ಬಂಡಾರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಕನ್ನಂಡಬಾಣೆ, ಗೌಡಸಮಾಜ, ಜೂನಿಯರ್ ಕಾಲೇಜು ರಸ್ತೆ, ದಾಸವಾಳ ರಸ್ತೆ, ಗಣಪತಿ ಬೀದಿ, ಓಂಕಾರೇಶ್ವರ ದೇವಸ್ಥಾನ, ಓಂಕಾರೇಶ್ವರ ರಸ್ತೆ, ಬ್ರಾಹ್ಮಿನ್ಸ್ ಬೀದಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮುಸ್ಲಿಂ ವಿದ್ಯಾರ್ಥಿನಿಯ ಕನ್ನಡ ಅಭಿಮಾನ

ಮಡಿಕೇರಿ: ಭಾಷೆ ಮೇಲೆ ಅಭಿಮಾನವಿದ್ದರೆ ಯಾವುದೂ ಕಷ್ಟವಲ್ಲ ಎಂಬುದಕ್ಕೆ ವಿದ್ಯಾರ್ಥಿನಿ ಫಿಜಾಳ ಸಾಧನೆಯೇ ಉದಾಹರಣೆ.



ಫಿಜಾ

ಈಕೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 125ಕ್ಕೆ 123 ಅಂಕಗಳನ್ನು ಗಳಿಸುವುದರ ಮೂಲಕ ಕನ್ನಡ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾಳೆ. ಮಲಯಾಳಂ ವಿದ್ಯಾರ್ಥಿನಿಯ ಈ ಕನ್ನಡ ಅಭಿಮಾನಕ್ಕೆ ಎಲ್ಲೆಡೆಯಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಸಿದ್ದಾಪುರ ಇಕ್ರಾ ಶಿಕ್ಷಣ ಸಂಸ್ಥೆಯಲ್ಲಿ ಎರಡು ವರ್ಷಗಳ ಹಿಂದೆ 8ನೇ ತರಗತಿಗೆ ಸೇರ್ಪಡೆಗೊಂಡ ಈಕೆ ಪರೀಕ್ಷೆಯಲ್ಲಿ ಕನ್ನಡ ಸೇರಿದಂತೆ ಎಲ್ಲಾ ವಿಷಯದಲ್ಲೂ ಉತ್ತಮ ಅಂಕಗಳನ್ನು ಗಳಿಸಿ ಒಟ್ಟು 625ಕ್ಕೆ 618 ಅಂಕ ಗಳಿಸುವುದರ ಮೂಲಕ ಶಾಲೆ ಹಾಗೂ ಕ್ಲಸ್ಟರ್ ಮಟ್ಟದಲ್ಲಿ ಪ್ರಥಮ ಸ್ಥಾನ, ತಾಲೂಕಿನಲ್ಲಿ 3ನೇ ಸ್ಥಾನ, ಜಿಲ್ಲೆಗೆ 4ನೇ ಸ್ಥಾನ, ರಾಜ್ಯಕ್ಕೆ 8ನೇ ಸ್ಥಾನದಲ್ಲಿ ಗುರುತಿಸಿಕೊಂಡಿದ್ದಾಳೆ.

ವಿದ್ಯಾರ್ಥಿನಿ ಫಿಜಾ ಕಣ್ಣೂರಿನ ಕೆಎಂಜಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏಳನೇ ತರಗತಿವರೆಗೆ ಮಲಯಾಳಂನಲ್ಲಿ ಪ್ರಾಥಮಿಕ ಶಿಕ್ಷಣ ಕಲಿತು ನಂತರ ವ್ಯಾಪಾರ ಉದ್ಯೋಗ ನಿಮಿತ್ತ ತಂದೆಯೊಂದಿಗೆ ಚಟ್ಟಳ್ಳಿಗೆ ಬಂದಿದ್ದರಿಂದ ಪ್ರೌಢಶಿಕ್ಷಣಕ್ಕಾಗಿ ಸೇರಿದ ಇಕ್ರಾ ಪಬ್ಲಿಕ್ ಶಾಲೆ ಆಂಗ್ಲ ಮಾಧ್ಯಮ ಶಾಲೆಯಾದರೂ ಕನ್ನಡವು ಕಡ್ಡಾಯವಾಗಿತ್ತು. ಫಿಜಾ ಕನ್ನಡ ಕಲಿಕೆಗೆ ಆಸಕ್ತಿ ತೋರಿ ಸಹಕಾರ ನೀಡುವಂತೆ ಮನವಿ ಮಾಡಿಕೊಂಡಿದ್ದಳು. ಪ್ರಾಂಶುಪಾಲರು ತಿಂಗಳ ಕಾಲ ಸಮಯಾವಕಾಶ ನೀಡಿ ಕನ್ನಡ ಓದು ಬರಹ ಕಲಿತರೆ ದಾಖಲಾತಿ ಮಾಡಿಕೊಳ್ಳುವ ಭರವಸೆ ನೀಡಿದ್ದರು.

ಶಾಲಾ ಶಿಕ್ಷಕರ ಸಹಕಾರದೊಂದಿಗೆ ಕನ್ನಡ ಓದು ಬರಹ ಅಕ್ಷರಭ್ಯಾಸಕ್ಕೆ ಹೆಚ್ಚು ಒತ್ತು ನೀಡುವುದರೊಂದಿಗೆ ಸುಲಲಿತವಾಗಿ ಕನ್ನಡ ಕಲಿತು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ್ದಾಳೆ. ಈಕೆ ಕನ್ನಡ ಭಾಷೆಯಲ್ಲಿ ಉತ್ತಮ ನಿರೂಪಕಿಯಾಗಿಯೂ ಗುರುತಿಸಿಕೊಂಡಿದ್ದಾಳೆ.

ಶ್ರೀಬಿಳಿಗಿರಿ ರಂಗನಾಥಸ್ವಾಮಿ ಟ್ರಸ್ಟ್ ಉದ್ಘಾಟನೆ



ಚಾಮರಾಜನಗರ,ಮೇ 5– ಸನಾತನ ಪರಂಪರೆಯಲ್ಲಿ ಎಲ್ಲರೂ ಒಗ್ಗೂಡಿದರೆ ಕೆಲಸಗಳು ಯಶ್ವಸಿಯಾಗುತ್ತದೆ. ಸಮಾನ ಮನಸ್ಥಿತಿ ಇದ್ದಾಗ ಯಾವುದೇ ಸಂಘ, ಸಂಸ್ಥೆ, ಟ್ರಸ್ಟ್ ಯಶಸ್ವಿಯಾಗುತ್ತದೆ ಎಂದು ಶ್ರೀರಾಮಶೇಷ ಪಾಠಶಾಲೆಯ ಪ್ರಾಂಶುಪಾಲ ಪ್ರದೀಪ್ ಕುಮಾರ್ ದೀಕ್ಷಿತ್ ಹೇಳಿದರು.

ನಗರದ ಖಾಸಗಿ ಬಸ್ ನಿಲ್ದಾಣದ ಎಲ್‌ಐಸಿ ಕಚೇರಿ ರಸ್ತೆಯಲ್ಲಿರುವ ಮಳಿಗೆಯಲ್ಲಿ ನಡೆದ ಶೀ ಬಿಳಿಗಿರಿ ರಂಗನಾಥ ಸ್ವಾಮಿ ಟ್ರಸ್ಟ್ ಉದ್ಘಾಟನಾ ನೆರವೇರಿಸಿ ಮಾತನಾಡಿದ ಅವರು, ಭಗವಂತನ ಸೇವೆಗೆ ಒಗ್ಗೂಡಬೇಕು. ಟ್ರಸ್ಟ್ ನಿರಂತರವಾಗಿ ಸೇವಾ ಕಾರ್ಯ ಮಾಡುವಂತಾಗಿ ಮುಂದಿನ ತಲೆಮಾರಿಗೆ ಬೆಳೆದುಕೊಂಡು ಹೋಗಲಿ ಎಂದು ಆಶಿಸಿದರು.

ನಗರಸಭೆಯ ಸಮುದಾಯ ಅಧಿಕಾರಿ ವೆಂಕಟನಾಯಕ ಮಾತನಾಡಿ, ಒಳ್ಳೆಯ ರೀತಿಯಲ್ಲಿ ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ಟ್ರಸ್ಟ್ ನಡೆಸಿ ನಗರಸಭೆ ವತಿಯಿಂದ ಸಿಗುವ ಎಲ್ಲ ರೀತಿ ಸೌಕರ್ಯಗಳನ್ನು ಕೊಡಿಸಿ ಕೊಡುವುದಾಗಿ ತಿಳಿಸಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಆರ್. ಸುಂದರ್ ಮಾತನಾಡಿ, ಮೇಗಲ ನಾಯಕರ ಬೀದಿಯಲ್ಲಿ ಶ್ರೀಬಿಳಿಗಿರಿರಂಗನಾಥ ಸ್ವಾಮಿ ಒಕ್ಕಲು ಒಗ್ಗೂಡಿಸುವುದು. ಪ್ರತಿವರ್ಷವೂ ಬಿಳಿಗಿರಿರಂಗನ ಬೆಟ್ಟದಲ್ಲಿ ಬಿಳಿಗಿರಿರಂಗಸ್ವಾಮಿಗೆ ವಿಶೇಷಪೂಜೆ ಹರಿಸೇವೆ ಮಾಡವ ಜೊತೆಗೆ ನಾಯಕ ಸಮುದಾಯದ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ತರಬೇತಿ ನೀಡುವುದು. ಆರ್ಥಿಕ ಸಾಲಸೌಲಭ್ಯ ನೀಡುವ ಉದ್ದೇಶದಿಂದ ಶ್ರೀ ಬಿಳಿಗಿರಿ ರಂಗನಾಥ ಸ್ವಾಮಿ ಟ್ರಸ್ಟ್ ಸ್ಥಾಪಿಸಲಾಗಿದೆ ಎಂದರು.

ಕೆಇಬಿ ನಿವೃತ್ತ ಹಿರಿಯ ಸಹಾಯಕ ನಾರಾಯಣಸ್ವಾಮಿ, ನಗರಸಭಾ ಮಾಜಿ ಸದಸ್ಯ ರಾಜೇಶ್ ನಾಯಕ, ಟ್ರಸ್ಟ್ ನಟರಾಜು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಬಂಗಾರ ನಾಯಕ, ಲೋಕೇಶ್, ನಟರಾಜು, ಗೋವಿಂದರಾಜ, ವೆಂಕಟೇಶ್ ನಾಯಕ, ಬಿಳಿಗಿರಿ, ಜಯಕುಮಾರ್, ಸುರೇಶ್, ರಾಘು, ಶಿವರಾಮ್, ರಾಧಾ, ದೀಪ ವೆಂಕಟೇಶ್ ಹಾಗೂ ಇತರರು ಹಾಜರಿದ್ದರು.

ದುಪ್ಪಟ್ಟು ತೆರಿಗೆ; ಗುಂಡ್ಲುಪೇಟೆ ಪುರಸಭೆ ಸಿಬ್ಬಂದಿ ವಿರುದ್ಧ ನಿವಾಸಿಗಳ ಅಸಮಾಧಾನ

ಗುಂಡ್ಲುಪೇಟೆ, ಮೇ5– ಬಿ ಖಾತೆಯಲ್ಲಿ ದುಪ್ಪಟು ತೆರಿಗೆ ವಿಧಿಸುತ್ತಿರುವ ಪುರಸಭೆ ಸಿಬ್ಬಂದಿಗಳ ಗೊಂದಲಗಳ ಬಗ್ಗೆ ನಿವಾಸಿಗಳು ಮುಖ್ಯಾಧಿಕಾರಿ ಬಳಿ ಅಸಮಾಧಾನ ವ್ಯಕ್ತಪಡಿಸಿ ದೂರು ನೀಡಿದರು.



ಗುಂಡ್ಲುಪೇಟೆ ಪುರಸಭೆ ಸಭಾಂಗಣದಲ್ಲಿ ನಡೆದ ನಿವಾಸಿಗಳ ಸಭೆಯಲ್ಲಿ ಮುಖ್ಯಾಧಿಕಾರಿ ವಸಂತಕುಮಾರಿ ಮಾತನಾಡಿದರು.

ಅಕ್ರಮ ಸಕ್ರಮ ಅಡಿಯಲ್ಲಿ ಬಿ ಖಾತೆ ನೀಡಲು ಪ್ರಸಕ್ತ ಸಾಲಿನ ಕಂದಾಯವನ್ನು ದುಪ್ಪಟ್ಟು ಪಡೆದು ಬಿ ಖಾತ ಮಾಡಿಕೊಡಲು ಸರ್ಕಾರ ಆದೇಶ ನೀಡಿದೆ. ಆದರೆ ಸಿಬ್ಬಂದಿ 6 ವರ್ಷಗಳ ತೆರಿಗೆಯನ್ನು ದುಪ್ಪಟ್ಟು ನೀಡುವಂತೆ ಚಲನ್ ನೀಡುತ್ತಿದ್ದಾರೆ ಎಂದು ದ.ರಾ. ಬೇಂದ್ರೆ ನಗರದ ನಿವಾಸಿಗಳು ಮುಖ್ಯಾಧಿಕಾರಿ ಕೆ.ಪಿ. ವಸಂತ ಕುಮಾರಿ ಅವರಲ್ಲಿ ಆರೋಪಿಸಿದರು.

ಪುರಸಭಾ ಅಧ್ಯಕ್ಷ ಮಧುಸೂದನ್ ಮತ್ತು ಮುಖ್ಯಾಧಿಕಾರಿ ವಸಂತಕುಮಾರಿ ನಾಳೆ ನಡೆಯಲಿರುವ ಮಾಸಿಕ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲೆಯ ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ವರ್ಷಕ್ಕೆ ಮಾತ್ರ ದುಪ್ಪಟ್ಟು ತೆರಿಗೆಯನ್ನು ಸಂಗ್ರಹಿಸಿ ಬಿ ಖಾತೆ ಮಾಡುತ್ತಿದ್ದು ಪುರಸಭಾ ವ್ಯಾಪ್ತಿಯಲ್ಲಿ ಆರು ವರ್ಷಗಳ ತೆರಿಗೆಯನ್ನು ದುಪ್ಪಟ್ಟು ಪಾವತಿಸಬೇಕೆಂದು ಕಡ್ಡಾಯಗೊಳಿಸಿರುವುದು ಇಲ್ಲಿನ ನಿವಾಸಿಗಳಿಗೆ ನುಂಗಲಾರದ ತುತ್ತಾಗಿದೆ. ರಾಜ್ಯದಲ್ಲಿ ಒಂದು ಕಾನೂನಿದ್ದರೆ, ಇಲ್ಲಿನ ಪುರಸಭೆಗೆ ಮತ್ತೊಂದು ಕಾನೂನು ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ರಸ್ತೆ ವಿಭಜಕದ ಮಧ್ಯೆ ಅಲಂಕಾರಿಕ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ

ಚಾಮರಾಜನಗರ, ಮೇ 5– ನಗರದ ಸಂತೇಮರಹಳ್ಳಿ ವೃತ್ತದಿಂದ ರೈಲ್ವೆ ನಿಲ್ದಾಣದ ವೃತ್ತದವರೆಗೆ ರಸ್ತೆ ವಿಭಜಕದ ಮಧ್ಯದಲ್ಲಿ ಆಲಂಕಾರಿಕ ಗಿಡ ನೆಡುವ ಇನ್ನರ್‌ವೀಲ್ ಕ್ಲಬ್ ಕಾರ್ಯಕ್ರಮಕ್ಕೆ ನಗರಸಭಾ ಪೌರಾಯುಕ್ತ ಎಸ್.ವಿ.ರಾಮದಾಸ್ ಹಾಗೂ ಸಂಚಾರ ಪೊಲೀಸ್ ಠಾಣೆ ಉಪನಿರೀಕ್ಷಕ ಹನುಮಂತ ಉಪ್ಪಾರ್ ಚಾಲನೆ ನೀಡಿದರು.



ನಗರಸಭಾ ಪೌರಾಯುಕ್ತ ಎಸ್.ವಿ. ರಾಮದಾಸ್, ಸಂಚಾರ ಪೊಲೀಸ್ ಠಾಣೆ ಉಪನಿರೀಕ್ಷಕ ಹನುಮಂತ ಉಪ್ಪಾರ್ ಚಾಲನೆ ನೀಡಿದರು.

ಇನ್ನರ್ ವೀಲ್ ಕ್ಲಬ್, ರೋಟರಿ ಸಂಸ್ಥೆ, ರೋಟರಿ ಸಿಲ್ಕ್ ಸಿಟಿ, ವರ್ತಕರ ಸಂಘ ಹಾಗೂ ಇತರರ ಸಂಘ–ಸಂಸ್ಥೆಗಳು ನಗರದ ಸ್ವಚ್ಚತಾ ಅಭಿಯಾನಕ್ಕೆ ಸಹಕಾರ ನೀಡಿದ್ದು, ಇಂದು ಇನ್ನರ್ ವೀಲ್ ಕ್ಲಬ್ ವತಿಯಿಂದ ರಸ್ತೆ ವಿಭಜಕ ಮೇಲೆ ಅಲಂಕಾರಿಕ ಗಿಡಗಳನ್ನು ನೆಡುತ್ತಿರುವುದು ನಗರದ ಸೌಂದರ್ಯ ವೃದ್ಧಿಸುವ ಜೊತೆಗೆ ಉತ್ತಮ ಆಮ್ಲಜನಕವನ್ನು ನಗರದ ಜನತೆಗೆ ಕೊಡುವ ಕಾರ್ಯಕ್ರಮ ಇದಾಗಿದೆ ಎಂದು ರಾಮದಾಸ್ ಶ್ಲಾಘಿಸಿದರು.

ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ವಿ.ಪ್ರಭಾಕರ್ ಮಾತನಾಡಿ, ಜಿಲ್ಲಾಧಿಕಾರಿಗಳು ನಮ್ಮ ಮನವಿಗೆ ಓಗೊಟ್ಟು ನಗರದಲ್ಲಿ ಸ್ವಚ್ಚತ್ತಾ ಅಭಿಯಾನ ಹಮ್ಮಿಕೊಂಡು ಪ್ರತಿ ಶನಿವಾರ ಸ್ವಚ್ಛತಾ ಅಭಿಯಾನ ನಡೆಸುವ ಮೂಲಕ ನಗರದ ಸ್ವಚ್ಛತೆಗೆ ಒತ್ತು ನೀಡಿದರೆ ಇಂತಹ ಇನ್ನರ್‌ವೀಲ್ ಕ್ಲಬ್, ನಗರದ ರಸ್ತೆ ವಿಭಜಕ ಮೇಲೆ ಅಲಂಕಾರಿಕ ಗಿಡಗಳನ್ನು ನೆಟ್ಟು ಪೋಷಣೆ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಿದೆ ಇದೊಂದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ ಎಂದರು.

ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ಪೂಜಾ ಮಾತನಾಡಿ, ರಸ್ತೆ ವಿಭಜಕದ ಮಧ್ಯ ಗಿಡ ನೆಡುವುದರಿಂದ ತಂಪು ವಾತಾವರಣ ಇರುತ್ತದೆ. ನಗರದ ಸೌಂದರ್ಯ ವೃದ್ಧಿಯಾಗಿಸುವ ನಿಟ್ಟಿನಲ್ಲಿ ನಮ್ಮ ಸಂಸ್ಥೆಯು ನಗರದ ಸಂತೇಮರಹಳ್ಳಿ ವೃತದಿಂದ ರೈಲ್ವೆ ನಿಲ್ದಾಣ ವೃತ್ತದವರಗೆ ರಸ್ತೆ ವಿಭಜಕದ ಮೇಲೆ ಅಲಂಕಾರಿಕ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರು, ಮಂಡ್ಯ, ರಾಮನಗರ, ಬೆಂಗಳೂರು ಬೈಪಾಸ್ ರಸ್ತೆಗಳ ವಿಭಜಕದ ಮೇಲೆ ಉದ್ದಕ್ಕೂ ನೆಟ್ಟಿರುವ ಅಲಂಕಾರಿಕ. ಗಿಡಗಳನ್ನು ನೋಡಿ ಚಾಮರಾಜನಗರದಲ್ಲೂ ಅಂತಹ ತಂಪು ವಾತಾವರಣ ನಗರದ ಸೌಂದರ್ಯೀಕರಣಕ್ಕೆ ಮತ್ತಷ್ಟು ಮೆರಗು ನೀಡುವ ಸಲುವಾಗಿ ಅಲಂಕಾರಿಕ ಗಿಡ ನೆಡಲಾಗುತ್ತಿದೆ ಎಂದರು.

ಎಎಸ್‌ಐಗಳಾದ ವಿಶ್ವ, ಲಿಂಗರಾಜು, ನಗರಸಭೆ ಹಿರಿಯ ಆರೋಗ ನಿರೀಕ್ಷಕ ಮಂಜುನಾಥ್, ಇನ್ನರ್‌ವೀಲ್ ಕ್ಲಬ್ ಉಪಾಧ್ಯಕ್ಷೆ ನಂದಿನಿ, ಸುಮನ್. ಸದಸ್ಯರಾದ ಅಮೃತಪ್ರಭಾಕರ್, ಚಿತ್ರ ಸುರೇಶ್, ಭಾನು ಗೋವಿಂದ, ನಂದಿಸಿ ನಾಗೇಂದ್ರ, ರೋಟರಿ ಸಂಸ್ಥೆ ಅಧ್ಯಕ್ಷ ನಾಗರಾಜು, ಮುಂದಿನ ಅಧ್ಯಕ್ಷ ಕಾಗಲವಾಡಿ ಚಂದ್ರು, ಸದಸ್ಯರಾದ ಅಂಕಶೆಟ್ಟಿ, ಯೋಗರಾಜ್, ರೋಟರಿ ಸಿಲ್ಕ್ ಅಧ್ಯಕ್ಷ ಮಾಣಿಕ್ ಚಂದ್ ಸಿರವಿ, ಸದಸ್ಯರಾದ ವಿಶ್ವಾನ್, ಗಿರೀಶ್, ಅಜಯ್ ಇತರರು ಹಾಜರಿದ್ದರು.

ಕನ್ನಡ ನಾಡು, ನುಡಿಗೆ ನಾಲ್ವಡಿ ಕೊಡುಗೆ ಅಪಾರ

ಯಳಂದೂರು, ಮೇ 5–ಕನ್ನಡ ನಾಡು ನುಡಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅಪಾರ ಕಾಣಿಕೆಯನ್ನು ನೀಡಿದ್ದಾರೆ. ದೇಶದಲ್ಲೇ ಬೃಹತ್ ಸಾಹಿತ್ಯ ವೇದಿಕೆಗೆ ಮುನ್ನುಡಿ ಬರೆದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದು ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಅಮ್ಮನಪುರ ಮಹೇಶ್ ತಿಳಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಪರಿಷತ್ತಿನ ಸಂಸ್ಥಾಪಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕರ್ನಾಟಕ ಸಾಹಿತ್ಯ ಪರಿಷತ್ತನ್ನು 1915ರಲ್ಲಿ ಸ್ಥಾಪಿಸಿದ ಇವರು ನವ ಕರ್ನಾಟಕ ನಿರ್ಮಾಣದ ಶಿಲ್ಪಿಯಾಗಿದ್ದು ದೇಶದಲ್ಲಿ ಮೊದಲೆಂಬಂತೆ ನೀರಾವರಿ, ವಿದ್ಯುತ್, ಶಿಕ್ಷಣ, ರಸ್ತೆ, ಮಹಿಳಾ ಸಮಾನತೆಗೆ ನಾಂದಿ ಹಾಕಿದ ಕೀರ್ತಿ ಸಲ್ಲುತ್ತದೆ. ಇದರೊಂದಿಗೆ ಸಾಹಿತ್ಯ ಪರಿಷತ್ತಿಗೂ ಇವರು ಮೊದಲು ಅಡಿಪಾಯ ಹಾಕಿದರು. ಇದಕ್ಕೆ ಸರ್ ಎಂ. ವಿಶ್ವೇಶ್ವರಯ್ಯ, ಸರ್.ಮಿರ್ಜಾ ಇಸ್ಮಾಯಿಲ್ ನೀರೆರೆದು ಬೃಹತ್ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ಇದನ್ನು ಬೆಳೆಸಿ 1930 ರಲ್ಲಿ ಇದು ಕನ್ನಡ ಸಾಹಿತ್ಯ ಪರಿಷತ್ತಾಗಿ ಮಾರ್ಪಾಡುಗೊಂಡಿತು ಎಂದರು.

ಬಿಳಿಗಿರಿರಂಗನಬೆಟ್ಟದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್ ಮಾತನಾಡಿ, ತಾಲೂಕಿನಲ್ಲಿ ಅನೇಕ ಸಾಹಿತಿಗಳಿದ್ದಾರೆ. ಸಾಹಿತ್ಯ ಪರಿಷತ್ತಿನವರು ಇಂತಹ ಕಾರ್ಯಕ್ರಮಗಳ ಆಯೋಜನೆ ಮಾಡುವ ಮೂಲಕ ನಮಗೂ ಕೂಡ ಇವರ ಪರಿಚಯ ಮಾಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಮುಂದಿನ ದಿನಗಳಲ್ಲಿ ಇದಕ್ಕೆ ಬೇಕಿರುವ ಎಲ್ಲಾ ನೆರವು ನೀಡುವ ಭರವಸೆ ನೀಡಿದರು. ತಾಪಂ ಮಾಜಿ ಸದಸ್ಯ ವೈ.ಕೆ.ಮೋಳೆ ನಾಗರಾಜು ಮಾತನಾಡಿದರು. ಪರಿಷತ್ತಿನ ತಾಲೂಕು ಅಧ್ಯಕ್ಷ ಯರಿಯೂರು ಎನ್. ನಾಗೇಂದ್ರ ಮುಖಂಡ ಕಂದಹಳ್ಳಿ ನಂಜುಂಡಸ್ವಾಮಿ, ಲಿಂಗರಾಜಮೂರ್ತಿ, ಕಸಾಪ ಕಾರ್ಯದರ್ಶಿ ಡಿ.ಪಿ.ಮಹೇಶ್ ಕೋಶಾಧ್ಯಕ್ಷ ಫೈರೋಜ್ ಖಾನ್, ಗೋಪಾಲ್, ಮೀರೆ ಸಿದ್ದರಾಜು, ಶಿಕ್ಷಕ ಮದ್ದೂರು ನಂಜುಂಡಸ್ವಾಮಿ, ಗುಂಬಳ್ಳಿ ಮನು, ಪರಶಿವ, ಕೆ. ಶ್ರೀನಿವಾಸ್, ವೆಂಕಟೇಶ್, ಸೋಮಣ್ಣ ಹಾಜರಿದ್ದರು.



ಕಸಾಪ ಸಂಸ್ಥಾಪಕರ ದಿನಾಚರಣೆ ಹಾಗೂ ಭಗೀರಥ ಜಯಂತಿ ಕಾರ್ಯಕ್ರಮದಲ್ಲಿ ನೆರೆದಿದ್ದ ಮುಖಂಡರು ಪುಷ್ಪಾರ್ಚನೆ ನೆರವೇರಿಸಿದರು.

ಒಳ ಮೀಸಲಾತಿ ಜಾತಿಗಣತಿಗೆ ಶಾಸಕರಿಂದ ಚಾಲನೆ



ಚಾಮರಾಜನಗರ, ಮೇ 5– ರಾಜ್ಯ ಸರ್ಕಾರ ಆರಂಭಿಸಿರುವ ಒಳ ಮೀಸಲಾತಿ ಜಾತಿ ಗಣತಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಮಾದಾಪುರ ಗ್ರಾಮದಲ್ಲಿ ಜಾತಿ ಗಣತಿ ಸಮೀಕ್ಷೆಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಪರಿಶಿಷ್ಟ ಜಾತಿಗಳ ದತ್ತಾಂಶ ಸಂಗ್ರಹ ಸಮೀಕ್ಷೆ ಮೇ17ರವರೆಗೆ ಮನೆ–ಮನೆ ಭೇಟಿಗೆ ತೆರಳಲಿರುವ ಸಮೀಕ್ಷಾ ತಂಡ 19ರಿಂದ 21ರವರೆಗೆ ವಿಶೇಷ ಶಿಬಿರ ಹಮ್ಮಿಕೊಂಡು ಸಮೀಕ್ಷೆ ಅವಧಿಯಲ್ಲಿ ಬಿಟ್ಟುಹೋದ ಪರಿಶಿಷ್ಟ ಜಾತಿ ಕುಟುಂಬಗಳ ಮಾಹಿತಿ ಸಂಗ್ರಹಿಸಲಾಗುತ್ತದೆ. ಸಮೀಕ್ಷೆಗೆ ನೇಮಕ ಗೊಂಡಿರುವ ಗಣತಿದಾರರು ಸಮೀಕ್ಷೆಯನ್ನು ಸಮರ್ಪಕವಾಗಿ ಮಾಡಬೇಕು. ಸಮುದಾಯದವರು ಕಡ್ಡಾಯ ತಮ್ಮತಮ್ಮ ಜಾತಿಗಳನ್ನು ಸರಿಯಾಗಿ ಬರೆಸುವ ಮೂಲಕ ತಮಗೆ ಸಿಗುವ ಮೀಸಲಾತಿ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದರು.

ತಹಸೀಲ್ದಾರ್ ಗಿರಿಜಾ, ತಾಪಂ ಇಒ ಶ್ರೀಕಂಠರಾಜೇ ಅರಸು, ತಾಲೂಕು ಸಮಾಜ ಇಲಾಖೆ ಸಹಾಯಕ ನಿರ್ದೇಶಕ ನಂಜುಂಡೇಗೌಡ ಇತರರು ಭಾಗವಹಿಸಿದ್ದರು.

ನಿಂಗಮ್ಮ ನಿಧನ



ಚಾಮರಾಜನಗರ: ತಾಲೂಕಿನ ಯಡಿಯೂರು ಗ್ರಾಮದ ಲೇಟ್ ಶಂಕರಯ್ಯ ಅವರ ಪತ್ನಿ ನಿಂಗಮ್ಮ (73) ಭಾನುವಾರ ಮಧ್ಯಾಹ್ನ ಅನಾರೋಗ್ಯದಿಂದ ನಿಧನರಾದರು.

ಮೃತರು ಪುತ್ರಿಯರಾದ ಸುಂದರಮ್ಮ, ದೇವಾಜಮ್ಮ, ಪುತ್ರರಾದ ಚಾಮರಾಜನಗರ ಜಿಲ್ಲಾ ಪತ್ರ ಬರಹಗಾರರಾದ ಯಡಿಯೂರು ಮಹಾದೇವ್, ಶಂಕರಯ್ಯ, ನಾಗರಾಜು ಮತ್ತು ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸೋಮವಾರ ಮಧ್ಯಾಹ್ನ ಸ್ವಗ್ರಾಮ ಯಡಿಯೂರಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಸ್ ಹತ್ತುವಾಗ ವೃದ್ಧೆಯ ಸರ ಕಳವು

ನಿಲ್ದಾಣಗಳಲ್ಲಿ ನಿಲ್ಲದ ಕಳ್ಳರ ಹಾವಳಿ

ಮೈಸೂರು, ಮೇ 5(ಎಸ್‌ಬಿಡಿ)– ರಶ್ ಇದ್ದ ಬಸ್ ಹತ್ತುವಾಗ ವೃದ್ಧೆಯೊಬ್ಬರ ಚಿನ್ನದ ಸರ ಕಳವು ಮಾಡಿರುವ ಘಟನೆ ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದಲ್ಲಿ ಭಾನುವಾರ ನಡೆದಿದೆ.

ಮದ್ದೂರು ತಾಲೂಕು ಉಪ್ಪಿನಕೆರೆ ಗ್ರಾಮದ ಚಿಕ್ಕತಾಯಮ್ಮ(75) ಅವರ ಸುಮಾರು 50 ಗ್ರಾಂ ತೂಕದ 2.20 ಲಕ್ಷ ಮೌಲ್ಯದ ಚಿನ್ನದ ಸರವನ್ನು ಖದೀಮರು ಎಗರಿಸಿದ್ದಾರೆ.

ಚಿಕ್ಕತಾಯಮ್ಮ ಅವರು ಮೊಮ್ಮಗಳೊಂದಿಗೆ ಮೈಸೂರಿನ ಮೇಟಗಳ್ಳಿಯಲ್ಲಿರುವ ಸಂಬಂಧಿಕರ ಮನೆಗೆ ಬಂದಿದ್ದರು. ಕೆಲ ಗಂಟೆಗಳ ಬಳಿಕ ಊರಿಗೆ ವಾಪಸ್ಸಾಗಲೆಂದು ಮೇಟಗಳ್ಳಿಯಿಂದ ಸಿಟಿ ಬಸ್‌ನಲ್ಲಿ ಸಬರ್ಬನ್ ಬಸ್ ನಿಲ್ದಾಣ ತಲುಪಿದ್ದರು. ಮೊದಲು ಮೊಮ್ಮಗಳು ಮದ್ದೂರು ಮಾರ್ಗವಾಗಿ ಸಾಗುವ ತುಮಕೂರು ಬಸ್ ಹತ್ತಿ ಅಜ್ಜಿಗಾಗಿ ಸೀಟ್ ಹಿಡಿದುಕೊಂಡಳು. ನಂತರ ಚಿಕ್ಕತಾಯಮ್ಮ ರಶ್‌ನಲ್ಲೇ ಬಸ್ ಹತ್ತಿ, ಸೀಟ್‌ನಲ್ಲಿ ಕುಳಿತುಕೊಂಡು ಕತ್ತು ನೋಡಿಕೊಂಡಾಗ ಚಿನ್ನದ ಸರ ಇರಲಿಲ್ಲ. ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಸಬರ್ಬನ್ ಹಾಗೂ ನಗರ ಬಸ್ ನಿಲ್ದಾಣದಲ್ಲಿ ಸರಗಳ್ಳರ ಹಾವಳಿ ವ್ಯಾಪಕವಾಗಿದೆ. ರಶ್ ಇರುವ ಬಸ್‌ಗಳಲ್ಲಿ ಖದೀಮರು ಪ್ರಯಾಣಿಕರ ಸೋಗಿನಲ್ಲಿ ಮಹಿಳೆಯರ ಸರ ಎಗರಿಸುತ್ತಿದ್ದಾರೆ. ಅದರಲ್ಲೂ ವೃದ್ಧೆಯರನ್ನು ಗುರಿಯಾಗಿಸಿಕೊಂಡು ದುಷ್ಕೃತ್ಯ ಮೆರೆಯುತ್ತಿದ್ದಾರೆ. ಬಸ್ ನಿಲ್ದಾಣಗಳಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿಯನ್ನು ಮಫ್ತಿಯಲ್ಲಿ ನಿಯೋಜಿಸಿ, ಸರಗಳ್ಳತನ ತಡೆಯಬೇಕೆಂದು ಪ್ರಯಾಣಿಕರು ಆಗ್ರಹಿಸಿದ್ದಾರೆ.

ಪತ್ನಿ ಹತ್ಯೆ ಆರೋಪದಲ್ಲಿ ಜೈಲು ಸೇರಿದ್ದ ಸುರೇಶ್ ಪುತ್ರಿ ಕೀರ್ತಿಗೆ ಎಸ್‌ಎಸ್‌ಎಲ್‌ಸಿಯಲ್ಲಿ 531 ಅಂಕ!



ತಂದೆ ಸುರೇಶ್ ಅವರೊಂದಿಗೆ ಕೀರ್ತಿ

ಮೈಸೂರು, ಮೇ 5 (ಎಸ್‌ಬಿಡಿ)– ಪತ್ನಿ ಹತ್ಯೆ ಆರೋಪಿಯಾಗಿ ಎರಡು ವರ್ಷ ಜೈಲು ವಾಸ ಅನುಭವಿಸಿ ಜಾಮೀನಿನ ಮೇಲೆ ಹೊರಬಂದ ಬಳಿಕ ಸತ್ತಿದ್ದಾಳೆಂದು ಹೇಳಿದ್ದ ಪತ್ನಿ ಪ್ರತ್ಯಕ್ಷವಾಗಿದ್ದರಿಂದ ಆರೋಪ ಮುಕ್ತರಾದ ಸುರೇಶ್ ಪುತ್ರಿ ಜೆ.ಎಸ್.ಕೀರ್ತಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣಳಾಗಿದ್ದಾಳೆ.

ಕುಶಾಲನಗರ ಸಮೀಪದ ಬಸವನಹಳ್ಳಿಯ ಆದಿವಾಸಿ ಜನಾಂಗದ ಸುರೇಶ್ ಪುತ್ರಿ ಕೀರ್ತಿ, ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ. ಈಕೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ 120, ಇಂಗ್ಲಿಷ್ 90, ಹಿಂದಿ ಹಾಗೂ ಗಣಿತ 71, ವಿಜ್ಞಾನ 84 ಹಾಗೂ ಸಮಾಜ ವಿಜ್ಞಾನ 95 ಸೇರಿ ಒಟ್ಟು 531(ಶೇ.84.96) ಅಂಕ ಗಳಿಸಿ, ತೇರ್ಗಡೆಯಾಗುವ ಮೂಲಕ ಕಷ್ಟಗಳ ಸರಮಾಲೆ ನಡುವೆಯೂ ಶಿಕ್ಷಣದಲ್ಲಿ ಒಂದು ಹಂತದ ಯಶಸ್ಸು ಕಂಡಿದ್ದಾಳೆ.

ಇದ್ದಕ್ಕಿದ್ದಂತೆ ತಾಯಿ ನಾಪತ್ತೆಯಾದಳು, ಬೆಟ್ಟದಪುರದ ಶಾನುಭೋಗನಹಳ್ಳಿ ಬಳಿ ಸಿಕ್ಕ ಮಹಿಳೆ ಅಸ್ಥಿ ಪಂಜರ ಆಕೆಯದ್ದೇ ಎಂದು ಪೊಲೀಸರು ನಿರ್ಧರಿಸಿ, ತಂದೆ (ಸುರೇಶ್)ಯನ್ನೇ ಜೈಲಿಗಟ್ಟಿದರು. ಮನೆಯ ಆಧಾರಸ್ತಂಭವಾಗಿದ್ದ ತಂದೆಯೂ ಜೈಲು ಸೇರಿದಾಗ ಇಡೀ ಕುಟುಂಬವೇ ಕಂಗಾಲಾಗಿತ್ತು. ಸುರೇಶ್ ತಂದೆ–ತಾಯಿ, ಅತ್ತೆಗೆ ವಯಸ್ಸಾಗಿರುವುದರಿಂದ ದುಡಿಯಲು ಶಕ್ತಿ ಇರಲಿಲ್ಲ. ಸುರೇಶ್‌ನ ಪುತ್ರ ಆಗಿನ್ನೂ 9ನೇ ತರಗತಿ ಓದುತ್ತಿದ್ದ. ಅನಿವಾರ್ಯವಾಗಿ ಆತ ಶಾಲೆ ಬಿಟ್ಟು, ಸಹೋದರಿಯ ಓದಿಗೆ ನೆರವಾದ. ಮನೆಯಲ್ಲಿ ಎಷ್ಟೇ ಕಷ್ಟವಿದ್ದರೂ, ಜೀವನದಲ್ಲಿ ಎಂತಹ ಸಂಕಷ್ಟಗಳೇ ಎದುರಾದರೂ ಧೃತಿಗೆಡದೆ ಕೀರ್ತಿ ವಿದ್ಯಾಭ್ಯಾಸ ನಡೆಸಿ, ಉತ್ತಮ ಅಂಕಗಳೊಂದಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿದ್ದಾಳೆ.

ಉಗ್ರರ ಕೃತ್ಯಕ್ಕೆ ಖಂಡನೆ ; ಮೋಂಬತ್ತಿ ಬೆಳಗಿ ದಾಳಿಯಲ್ಲಿ ಮಡಿದವರಿಗೆ ಶ್ರದ್ಧಾಂಜಲಿ



ಮೈಸೂರಿನ ಎನ್‌ಆರ್ ಮೊಹಲ್ಲಾದ ಶನೇಶ್ವರಸ್ವಾಮಿ ಕಮಾನು ವೃತ್ತದಲ್ಲಿ ಸೋಮವಾರ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ ಬಲಿಯಾದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರು,ಮೇ 5(ಪಿಎಂ)– ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರ ಹತ್ಯಾಕಾಂಡ ನಡೆಸಿದ ಉಗ್ರರ ಕೃತ್ಯ ಖಂಡಿಸಿ ಆರ್.ಎಸ್.ನಾಯ್ಡು ನಗರದ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ವತಿಯಿಂದ ಎನ್‌ಆರ್ ಮೊಹಲ್ಲಾದ ಶನೇಶ್ವರಸ್ವಾಮಿ ಕಮಾನು ವೃತ್ತದಲ್ಲಿ ಐದಾರು ನಿಮಿಷ ಮಾನವ ಸರಪಳಿ ನಿರ್ಮಿಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಬಳಿಕ ಮೋಂಬತ್ತಿ ಬೆಳಗಿ ದಾಳಿಯಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ನಂತರ ಸದರಿ ವೃತ್ತದಿಂದ ಆರ್.ಎಸ್. ನಾಯ್ಡುನಗರದ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದವರೆಗೆ 'ಶ್ರದ್ಧಾಂಜಲಿ ಯಾತ್ರೆ' ಶೀರ್ಷಿಕೆಯಡಿ ಮೆರವಣಿಗೆ ನಡೆಸಲಾಯಿತು. ಇದೇ ವೇಳೆ ಮಾತನಾಡಿದ ದೇವಸ್ಥಾನದ ಕಾರ್ಯದರ್ಶಿ ಎಸ್.ಎನ್. ಆನಂದ್, ತಮ್ಮ ಯಾವುದೇ ತಪ್ಪಿಲ್ಲದೆ ಉಗ್ರರ ಕೃತ್ಯಕ್ಕೆ ಅಮಾಯಕರು ಪ್ರಾಣ ಕಳೆದುಕೊಳ್ಳಬೇಕಾಯಿತು. ಕರ್ನಾಟಕದ ಮೂವರು ಸಹ ಭಯೋತ್ಪಾದಕರ ಗುಂಡಿಗೆ ಬಲಿಯಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಭಯೋತ್ಪಾದನೆ ನಿರ್ಮೂಲನೆಗೆ ಮೊಟ್ಟ ಮೊದಲ ಆದ್ಯತೆ ನೀಡಬೇಕಿದ್ದು, ಭಯೋತ್ಪಾದನಾ ಕೃತ್ಯಗಳು ಇನ್ನು ಮುಂದೆ ಯಾವುದೇ ಕಾರಣಕ್ಕೂ ಮರುಕಳಿಸದಂತೆ ಕಠಿಣ ಕ್ರಮ ಜರುಗಿಸಬೇಕಿದೆ ಎಂದರು. ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಸದಸ್ಯರಾದ ಕೃಷ್ಣಮೂರ್ತಿ, ಉಮಾಶಂಕರ್, ರಾಮಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ವಕ್ಫ್ ತಿದ್ದುಪಡಿ ಕಾಯ್ದೆ ಕೈಬಿಡಲು ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ಮನವಿ



ವಕ್ಫ್ ತಿದ್ದುಪಡಿ ಕಾಯ್ದೆ ಕೈಬಿಡುವಂತೆ ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಮೈಸೂರು, ಮೇ 5(ಎಂಕೆ)– ಕೇಂದ್ರ ಸರ್ಕಾರ ಅಂಗೀಕರಿಸಿರುವ ವಕ್ಫ್ ತಿದ್ದುಪಡಿ ಕಾಯ್ದೆ–2025 ಹಿಂಪಡೆಯುವಂತೆ ಒತ್ತಾಯಿಸಿ ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಮುಸ್ಲಿಂ ಧರ್ಮಗುರು ಮೌಲಾನಾ ಮುಫ್ತಿ ತಾಜುದ್ದೀನ್ ಅವರ ನೇತೃತ್ವದಲ್ಲಿ ಸೋಮವಾರ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಅವರನ್ನು ಭೇಟಿ ಮಾಡಿದ ಮುಸ್ಲಿಂ ಧರ್ಮಗುರುಗಳು, ಮುಖಂಡರು, ಸಂವಿಧಾನ ಹಾಗೂ ದೇಶದ ಏಕತೆಯ ವಿರುದ್ಧವಾಗಿರುವ ವಕ್ಫ್ ತಿದ್ದಪಡಿ ಕಾಯ್ದೆಯನ್ನು ಕೂಡಲೇ ಹಿಂಪಡೆಯುವಂತೆ ಮನವಿ ಸಲ್ಲಿಸಿದರು.

ಮುಸ್ಲಿಂ ಧರ್ಮಗುರುಗಳಾದ ಮೌಲಾನಾ ಝುಖಾವುಲ್ಲಾ ಹಜರತ್, ಮೌಲಾನಾ ಫಯಾಜ್, ಶಾಸಕ ತನ್ವೀರ್ ಸೇಠ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ನಗರ ಪಾಲಿಕೆ ಮಾಜಿ ಸದಸ್ಯ ಶೌಕತ್‌ಪಾಷ, ಸವೂದ್, ಮಾಜಿ ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಶಬ್ಬೀರ್ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ ಶ್ರೀ ಭಂಡಾರಕೇರಿ ಮಠದಿಂದ ಕೊಡಮಾಡುವ ಪ್ರತಿಷ್ಠಿತ

'ವೇದಪೀಠ' ಪ್ರಶಸ್ತಿಗೆ ಮೈಸೂರು ವಿವಿ ಓಆರ್‌ಐ ಆಯ್ಕೆ

ಮೇ 9ರಂದು ಬೆಳಗಾವಿಯಲ್ಲಿ ಪ್ರಶಸ್ತಿ ಪ್ರದಾನ



ಮೈಸೂರು ವಿವಿಯ ಓಆರ್‌ಐ ಸಂಸ್ಥೆ.

ಮೈಸೂರು,ಮೇ 5(ಪಿಎಂ)– ಉಡುಪಿ ಶ್ರೀ ಭಂಡಾರಕೇರಿ ಮಠದಿಂದ ಕೊಡಮಾಡುವ ಪ್ರತಿಷ್ಠಿತ 'ವೇದಪೀಠ' ವಾರ್ಷಿಕ ಪ್ರಶಸ್ತಿಗೆ ಈ ಬಾರಿ ಮೈಸೂರು ವಿವಿಯ ಪ್ರಾಚ್ಯವಿದ್ಯಾ ಸಂಶೋಧನಾಲಯ (ಓಆರ್‌ಐ) ಆಯ್ಕೆಯಾಗಿದೆ.

ಭಾರತೀಯ ವಿದ್ಯೆ, ವೇದಶಾಸ್ತ್ರ ಸಂಸ್ಕೃತಿ ಮತ್ತು ಪರಂಪರೆಗಳನ್ನು ಸಂರಕ್ಷಿಸಿ, ಪೋಷಿಸಿ ಅಭಿವೃದ್ಧಿಪಡಿಸಲು ಗಣನೀಯವಾಗಿ ಶ್ರಮಿಸುತ್ತಿರುವ ಸಂಸ್ಥೆಯೊಂದಕ್ಕೆ ಶ್ರೀ ಮಠವು ಪ್ರತಿವರ್ಷವೂ (ರಾಷ್ಟ್ರ ಮಟ್ಟದಲ್ಲಿ) 'ವೇದಪೀಠ' ಪ್ರಶಸ್ತಿ, ಪುರಸ್ಕಾರ ನೀಡಿ ಗೌರವಿಸುತ್ತಾ ಬಂದಿದೆ. ಈ ಬಾರಿ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಉನ್ನತ ಮಟ್ಟದ ತಜ್ಞರ ಸಮಿತಿಯು ಪ್ರಶಸ್ತಿ ಘೋಷಿಸಿದೆ. ವೇದಪೀಠ ಪ್ರಶಸ್ತಿಯು 1 ಲಕ್ಷ ರೂ. ನಗದು, ಸನ್ಮಾನ ಪತ್ರ, ಸ್ಮರಣಿಕೆಗಳನ್ನು ಒಳಗೊಂಡಿದೆ ಎಂದು ಉಡುಪಿ ಶ್ರೀ ಭಂಡಾರಕೇರಿ ಮಠದ ಪೀಠಾಧಿಪತಿಗಳಾದ ಶ್ರೀ ವಿದ್ಯೇಶತೀರ್ಥ ಸ್ವಾಮೀಜಿ ತಿಳಿಸಿರುವುದಾಗಿ ಓಆರ್‌ಐ ನಿರ್ದೇಶಕ ಡಾ.ಡಿ.ಪಿ. ಮಧುಸೂದನಾಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳಗಾವಿಯ ಕೆ.ಕೆ.ವೇಣುಗೋಪಾಲ ಸಭಾಂಗಣದಲ್ಲಿ ಮೇ 9ರಂದು ಶ್ರೀ ಮಠ, ಶ್ರೀ ಮಾಧ್ವ ರಾದ್ಧಾಂತ ಸಂವರ್ಧಕ ಸಭಾ, ಶ್ರೀ ಭಾಗವತಾಶ್ರಮ ಪ್ರತಿಷ್ಠಾನ ಮತ್ತು ಲೋಕಸಂಸ್ಕೃತಿ ಕಲಾವಿದ್ಯಾ ವಿಕಾಸ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ರಾಷ್ಟ್ರಗುರು ಶ್ರೀ ವೇದವ್ಯಾಸ ಜಯಂತಿ, ಮಾಧ್ವ ರಾದ್ಧಾಂತ ಸಂವರ್ಧಕ ಸಭಾದ 82ನೇ ಅಧಿವೇಶನ ಮತ್ತು ಶ್ರೀ ವಿದ್ಯಾಮಾನ್ಯ ತೀರ್ಥರ 25ನೇ ಆರಾಧನೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದಾಗಿ ಸ್ವಾಮೀಜಿ ತಿಳಿಸಿರುವುದಾಗಿ ಓಆರ್‌ಐ ನಿರ್ದೇಶಕರು ತಿಳಿಸಿದ್ದಾರೆ.

1891ರಲ್ಲಿ ಮೈಸೂರು ಸಂಸ್ಥಾನದ ಮಹಾರಾಜರಾದ 10ನೇ ಚಾಮರಾಜೇಂದ್ರ ಒಡೆಯರ್ ಅವರು ಸ್ಥಾಪಿಸಿದ ಪ್ರಾಚ್ಯವಿದ್ಯಾ ಸಂಶೋಧನಾಲಯವು ಪ್ರಾಚೀನ ತಾಳೆಗರಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಶೋಧನೆ, ಸಂಪಾದನೆ ಮತ್ತು ಅವುಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸಲು ಶ್ರಮಿಸುತ್ತಿದೆ. 1891ರಿಂದ ಈವರೆಗೆ 240ಕ್ಕೂ ಹೆಚ್ಚು ಕೃತಿಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸಿದ ಕೀರ್ತಿಗೆ ಸಂಸ್ಥೆ ಭಾಜನವಾಗಿದೆ. 70 ಸಾವಿರಕ್ಕೂ ಹೆಚ್ಚು ತಾಳೆಗರಿ ಮತ್ತು ಕಾಗದದ ಹಸ್ತಪ್ರತಿ ಗ್ರಂಥಗಳ ಸಂಗ್ರಹವಿರುವ ದೇಶದ ಮಹೋನ್ನತ ಸಂಸ್ಥೆಯಾದ ಓಆರ್‌ಐಗೆ ಪ್ರಶಸ್ತಿ ಅರಸಿ ಬಂದಿರುವುದು ಹೆಮ್ಮೆಯಾಗಿದೆ ಎಂದು ಡಾ.ಡಿ.ಪಿ.ಮಧುಸೂದನಾಚಾರ್ಯ ಹರ್ಷ ವ್ಯಕ್ತಪಡಿಸಿದ್ದಾರೆ.

ಕ್ರಿ.ಪೂ 4ನೇ ಶತಮಾನದ ಕೌಟಿಲ್ಯನ ಅರ್ಥಶಾಸ್ತ್ರವನ್ನು ವಿಶ್ವದಲ್ಲೇ ಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಿದ ಹೆಮ್ಮೆ ಓಆರ್‌ಐಗೆ ಇದೆ. ಇದರೊಂದಿಗೆ ನವರತ್ನಮಣಿ–ಮಹಾತ್ಮ್ಯಂ (ರತ್ನಶಾಸ್ತ್ರದ ಕೃತಿ), ತಂತ್ರಸಾರ–ಸಂಗ್ರಹ (ಶಿಲ್ಪ ಮತ್ತು ವಾಸ್ತುಶಿಲ್ಪದ ಕೃತಿ), ವೈದ್ಯಶಾಸ್ತ್ರ–ದೀಪಿಕಾ (ಆಯುರ್ವೇದ ಪಥ್ಯ), ರಸ–ಕೌಮುದಿ, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಶ್ರೀ ತತ್ತ್ವನಿಧಿ, ಸ್ತೋತ್ರ ಗ್ರಂಥವೆನಿಸಿದ ಸೌಂದರ್ಯ ಲಹರಿ ಸೇರಿದಂತೆ ಮೊದಲಾದ ಪ್ರತಿಷ್ಠಿತ ಕೃತಿಗಳು ಈಗಾಗಲೇ ಮುದ್ರಣಗೊಂಡಿವೆ.

ದೇಶದ ಅನೇಕ ಊರು, ಮಠಮಾನ್ಯಗಳಿಂದ ಹಸ್ತಪ್ರತಿಗಳನ್ನು ಖುದ್ದಾಗಿ ತಾವೇ ಹೋಗಿ ಸಂಗ್ರಹಿಸಿ ತಂದು ಸಂಶೋಧಿಸಿ ಸಂಪಾದಿಸಿ ಪುಸ್ತಕ ರೂಪದಲ್ಲಿ ಹೊರತರುವಲ್ಲಿ ಶ್ರಮ ವಹಿಸಿದ ಓಆರ್‌ಐನ ಡಾ.ಆರ್.ಶ್ಯಾಮ ಶಾಸ್ತ್ರಿ ಅವರಿಂದ ಆರಂಭಿಸಿ ಈವರೆಗೂ ಕೊಡುಗೆ ನೀಡಿದ ಎಲ್ಲಾ ವಿದ್ವಾಂಸರ ಪರಿಶ್ರಮವನ್ನು ತುಂಬು ಹೃದಯದಿಂದ ಸ್ಮರಿಸಲಾಗುವುದು ಎಂದು ಓಆರ್‌ಐ ನಿರ್ದೇಶಕರು ತಿಳಿಸಿದ್ದಾರೆ.

ಹಸ್ತಪ್ರತಿಗಳ ಡಿಜಿಟಲೀಕರಣ ಪ್ರಕ್ರಿಯೆ ಭರದಿಂದ ಸಾಗಿದೆ...

ವಿವಿಧ ಯೋಜನೆ ಮತ್ತು ದತ್ತಿಗಳಿಂದ ಓಆರ್‌ಐ, ಈಗಾಗಲೇ ಮೂಲ ತಾಳೆಗರಿ ಹಸ್ತಪ್ರತಿಗಳ ಮುದ್ರಿತ ಪುಸ್ತಕಗಳ ಸಂರಕ್ಷಣೆ ಮಾಡಿದೆ. ಇವುಗಳ ಡಿಜಿಟಲೀಕರಣ ಭರದಿಂದ ಸಾಗಿದ್ದು, ವಿಶ್ವದ ಜ್ಞಾನಾಸಕ್ತರಿಗೆ ಶೀಘ್ರದಲ್ಲೇ ಇದನ್ನು ದೊರಕಿಸಿಕೊಡುವ ಪ್ರಯತ್ನದಲ್ಲಿದ್ದೇವೆ. ಸದರಿ ಪ್ರಶಸ್ತಿಯ 1 ಲಕ್ಷ ರೂ. ಮೊತ್ತವನ್ನು ಪ್ರಾಚೀನ ಗ್ರಂಥ ಪ್ರಕಟಣೆ ಮತ್ತು ಸಂಸ್ಥೆಯ ಅಭಿವೃದ್ಧಿಗಾಗಿ ಸದ್ವಿನಿಯೋಗಿಸಲಾಗುವುದು.
-ಡಾ.ಡಿ.ಪಿ.ಮಧುಸೂದನಾಚಾರ್ಯ, ನಿರ್ದೇಶಕರು, ಓಆರ್‌ಐ

ನಾಳೆಯಿಂದ ಮೂರು ದಿನ 'ಕಾರಾಗೃಹ ವಾಸಿಗಳಿಗೆ ಸಾಹಿತ್ಯ ಕಮ್ಮಟ'

ಮೈಸೂರು ಕೇಂದ್ರ ಕಾರಾಗೃಹದಲ್ಲಿ ವಿನೂತನ ಕಾರ್ಯಕ್ರಮ



ಮೈಸೂರು, ಮೇ 5(ಎಸ್‌ಬಿಡಿ)– ಕಾರಾಗೃಹ ವಾಸಿಗಳಿಗೆ ಓದು ಮತ್ತು ಬರವಣಿಗೆ ಅಭಿರುಚಿ ಬೆಳೆಸುವ ನಿಟ್ಟಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕಾರಾಗೃಹ ಇಲಾಖೆ ಸಹಯೋಗದಲ್ಲಿ ಕಾರ್ಯಕ್ರಮ ರೂಪಿಸಲಾಗಿದೆ.

ಮೊದಲ ಹಂತದಲ್ಲಿ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಮೇ 7ರಿಂದ 9ರವರೆಗೆ 'ಕಾರಾಗೃಹ ವಾಸಿಗಳಿಗೆ ಸಾಹಿತ್ಯ ಕಮ್ಮಟ' ವಿಶೇಷ ಕಾರ್ಯಕ್ರಮ ನಡೆಸಲಾಗುತ್ತಿದೆ. ಕನ್ನಡ ಸಾಹಿತ್ಯದ ಕಂಪು ಪಸರಿಸುವುದರ ಜೊತೆಗೆ ಓದು ಹಾಗೂ ಬರವಣಿಗೆ ಹವ್ಯಾಸ ಬೆಳೆಸುವ ಮೂಲಕ ಕಾರಾಗೃಹ ವಾಸಿಗಳ ಮನಃ ಪರಿವರ್ತನೆ ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.

ಮುಂದಿನ ದಿನಗಳಲ್ಲಿ ಬೆಂಗಳೂರಿನ ಪರಪ್ಪನ ಅಗ್ರಹಾರ, ಬೆಳಗಾವಿಯ ಹಿಂಡಲಗಾ, ಬಳ್ಳಾರಿ ಸೇರಿದಂತೆ ಎಲ್ಲಾ ಕಾರಾಗೃಹಗಳಲ್ಲೂ ಅವಕಾಶಕ್ಕನುಗುಣವಾಗಿ ಸಾಹಿತ್ಯ ಕಮ್ಮಟ ನಡೆಸಲು ಯೋಜನೆ ರೂಪಿಸಲಾಗುತ್ತಿದೆ. ಕಾರಾಗೃಹ ವಾಸಿಗಳಿಗೆ ಸಾಹಿತ್ಯ ಅಕಾಡೆಮಿ ಜೊತೆಗೆ ಪ್ರಕಾಶಕರು ಹಾಗೂ ಲೇಖಕರ ಸಹಕಾರದಿಂದ ಪುಸ್ತಕಗಳನ್ನು ಒದಗಿಸಲು ಚಿಂತನೆ ನಡೆಸಲಾಗಿದೆ.

ಉಪನ್ಯಾಸ ಮಾಲಿಕೆ: ಮೈಸೂರು ಕೇಂದ್ರ ಕಾರಾಗೃಹದಲ್ಲಿ ಆಯೋಜಿಸಿರುವ ಮೂರು ದಿನಗಳ 'ಕಾರಾಗೃಹ ವಾಸಿಗಳಿಗೆ ಸಾಹಿತ್ಯ ಕಮ್ಮಟ' ಕಾರ್ಯಕ್ರಮವನ್ನು ಮೇ 7ರಂದು ಬೆಳಗ್ಗೆ 10.30ಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಉದ್ಘಾಟಿಸಲಿದ್ದಾರೆ. ಅಕಾಡೆಮಿ ಸದಸ್ಯ ಸಂಚಾಲಕ ಡಾ.ಚಂದ್ರಕಿರಣ್ ಕುಳವಾಡಿ, ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್. ರಮೇಶ್ ಮಾತನಾಡಲಿದ್ದಾರೆ. ಪತ್ರಕರ್ತ, ಲೇಖಕ ಗಣೇಶ ಅಮೀನಗಡ 'ರಂಗ ಚಿಕಿತ್ಸೆ' ಕುರಿತು ಉಪನ್ಯಾಸ ನೀಡಲಿದ್ದಾರೆ. ಬಳಿಕ ಕಾರಾಗೃಹ ವಾಸಿಗಳಾದ ಆರ್. ರಾಮು ಹಾಗೂ ಟಿ.ಎಂ.ವೆಂಕಟೇಶ್ ಕವನಗಳನ್ನು ವಾಚಿಸಲಿದ್ದಾರೆ.

ಮೇ 8ರಂದು ಬೆಳಗ್ಗೆ 10.30 ಗಂಟೆಗೆ ಹಿರಿಯ ಸಾಹಿತಿ ಪ್ರೊ.ಮಲ್ಲಿಕಾರ್ಜುನ ಮೊರಬದ 'ಕಾವ್ಯ ಜಗತ್ತು', ಕಥೆಗಾರ್ತಿ ದೀಪ್ತಿ ಭದ್ರಾವತಿ 'ಕಥಾ ಜಗತ್ತು' ಹಾಗೂ ಮಂಡ್ಯದ ಸರ್. ಎಂ.ವಿ.ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಎಚ್.ಟಿ. ವೆಂಕಟೇಶಮೂರ್ತಿ 'ಕಾದಂಬರಿ ಜಗತ್ತು' ಕುರಿತು ಉಪನ್ಯಾಸ ನೀಡಲಿದ್ದು, ಮೇ 9ರಂದು ಬೆಳಗ್ಗೆ 10.30ಕ್ಕೆ ಸಮಾರೋಪ ಸಮಾರಂಭದಲ್ಲಿ ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ ಹಾಗೂ ಕವಯಿತ್ರಿ ಡಾ.ಜಾಹಿದಾ ಭಾಗವಹಿಸಿ, ಕನ್ನಡ ಸಾಹಿತ್ಯದ ಮಹತ್ವ ಸಾರಲಿದ್ದಾರೆ.

ಎಲ್ಲೆಡೆಗೆ ಸಾಹಿತ್ಯ: ಎಲ್ಲೆಡೆ ಕನ್ನಡ ಸಾಹಿತ್ಯದ ಪ್ರಚಾರ ಆಗಬೇಕೆಂಬ ಧ್ಯೇಯದೊಂದಿಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. 'ಕಾರಾಗೃಹ ವಾಸಿಗಳಿಗೆ ಸಾಹಿತ್ಯ ಕಮ್ಮಟ'ದೊಂದಿಗೆ 'ಸಂತೆಯಲ್ಲಿ ಪಂಪ' ಕಾರ್ಯಕ್ರಮದ ಮೂಲಕ ಸಂತೆಗಳಲ್ಲಿ ನೆರೆಯುವ ವಿಭಿನ್ನ ನೆಲೆಗಟ್ಟಿನ ಜನರಿಗೆ ಆದಿಕವಿ ಪಂಪನನ್ನು ಪರಿಚಯಿಸಲಾಗುವುದು. ರೈತರು, ಪತ್ರಕರ್ತರು, ಕಾರ್ಮಿಕರಿಗೂ ಕನ್ನಡ ಸಾಹಿತ್ಯ ಸಂಬಂಧಿತ ಚುಟುವಟಿಕೆಗಳನ್ನು ನಡೆಸುವ ಯೋಜನೆ ಇದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ತಿಳಿಸಿದ್ದಾರೆ.

ಪಹಲ್ಗಾಮ್ ರಕ್ಕಸರಿಗೆ ಊಟ-ಆಶ್ರಯದ ನೆರವು

ಸೇನಾಪಡೆಗಳಿಂದ ತಪ್ಪಿಸಿಕೊಳ್ಳಲು ಹೋಗಿ ನದಿಗೆ ಜಿಗಿದು ಸತ್ತ ಆರೋಪಿ

ನವದೆಹಲಿ: ಪಹಲ್ಗಾಮ್ ರಕ್ಕಸರಿಗೆ ಊಟ–ಆಶ್ರಯ ನೀಡಿ ನೆರವು ನೀಡಿದ್ದ ವ್ಯಕ್ತಿಯೊಬ್ಬ ಭದ್ರತಾ ಪಡೆಗಳಿಂದ ತಪ್ಪಿಸಿಕೊಳ್ಳಲು ಹೋಗಿ, ನದಿಗೆ ಹಾರಿ ಮುಳುಗಿ ಸಾವನ್ನಪ್ಪಿದ್ದಾನೆಂದು ತಿಳಿದುಬಂದಿದೆ.

ಇಮ್ತಿಯಾಜ್ ಅಹ್ಮದ್ ಮಾಗ್ರೆ ಎಂಬ 23 ವರ್ಷದ ವ್ಯಕ್ತಿ, ಪಹಲ್ಗಾಮ್ ದಾಳಿಕೋರರಿಗೆ ನೆರವು ನೀಡುತ್ತಿದ್ದ ಎಂದು ಮೂಲಗಳು ಖಚಿತಪಡಿಸಿವೆ.

ಕೆಲ ದಿನಗಳ ಹಿಂದೆ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಇಮ್ತಿಯಾಜ್ ಅಹ್ಮದ್ ಮಾಗ್ರೆನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ವಿಚಾರಣೆ ವೇಳೆ ಇಮ್ತಿಯಾಜ್ ತಾನು ಕಾಡಿನಲ್ಲಿ ಅಡಗಿದ್ದ ಭಯೋತ್ಪಾದಕರಿಗೆ ಆಹಾರ ಮತ್ತು ಅಗತ್ಯ ವಸ್ತುಗಳನ್ನು ನೀಡುತ್ತಿರುವುದಾಗಿ ಒಪ್ಪಿಕೊಂಡಿದ್ದ.

ಇದರಂತೆ ಪೊಲೀಸರು ಇಮ್ತಿಯಾಜ್‌ನನ್ನು ಭಯೋತ್ಪಾದಕರು ಅಡಗಿದ್ದ ಸ್ಥಳಕ್ಕೆ ಕೊಂಡೊಯ್ಯುತ್ತಿದ್ದಾಗ, ಆತ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ಈ ವೇಳೆ ನದಿಗೆ ಹಾರಿದ್ದು, ತುಂಬ ದೂರ ಈಜಲಾಗದೇ, ಮುಳುಗಿ ಮೃತಪಟ್ಟಿದ್ದಾನೆಂದು ಭದ್ರತಾ ಪಡೆಗಳು ತಿಳಿಸಿವೆ. ಈ ಕುರಿತ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಎತ್ತರದ ಪ್ರದೇಶದಿಂದ ಸೆರೆಹಿಡಿಯಲಾದ ವೀಡಿಯೊದಲ್ಲಿ, ಆರೋಪಿ ನದಿಗೆ ಹಾರುವ ಮೊದಲು ಅರಣ್ಯ ಪ್ರದೇಶವನ್ನು ಗಮನಿಸುತ್ತಿರುವುದು, ನದಿಗೆ ಹಾರಿದ ತಕ್ಷಣ, ಪ್ರವಾಹದ ರಭಸಕ್ಕೆ ಕೊಚ್ಚಿ ಹೋಗಿರುವುದು ಕಂಡು ಬಂದಿದೆ. ಈ ಘಟನೆ ಇದೀಗ ರಾಜಕೀಯ ಸ್ವರೂಪ ಪಡೆದುಕೊಂಡಿದ್ದು, ತನಿಖೆಗೆ ಒತ್ತಾಯಗಳೂ ಕೇಳಿ ಬರುತ್ತಿವೆ.

ಆದರೆ, ತಪ್ಪು ಮಾಹಿತಿ ಹರಡುತ್ತಿರುವವರನ್ನು ಭದ್ರತಾ ಪಡೆಗಳು ಖಂಡಿಸಿವೆ. ಭದ್ರತಾ ಪಡೆಗಳನ್ನು ಮಾಗ್ರೆಯ ದುರದೃಷ್ಟಕರ ಸಾವಿಗೆ ತಪ್ಪಾಗಿ ದೂಷಿಸಬಾರದು ಎಂದು ತಿಳಿಸಿದೆ.

ಘಟನೆಗೆ ಸಂಬಂಧಿಸಿದಂತೆ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ ನಾಯಕಿ ಮತ್ತು ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಈ ಸಾವಿನಲ್ಲಿ ಸಂಚು ಅಡಗಿದೆ ಎಂದು ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಕುಲ್ಗಾಮ್‌ನಲ್ಲಿ ಮತ್ತೊಂದು ಶವವು ನದಿಯಲ್ಲಿ ಪತ್ತೆಯಾಗಿದೆ. ಇದು ಗಂಭೀರ ಅನುಮಾನಗಳಿಗೆ ಕಾರಣವಾಗಿದೆ. ಇಮ್ತಿಯಾಜ್ ಮಾಗ್ರೆನನ್ನು ಎರಡು ದಿನಗಳ ಹಿಂದೆ ಸೈನ್ಯವು ವಿಚಾರಣೆಗೆ ಕರೆದೊಯ್ದಿತ್ತು. ಈಗ ಆತನ ಶವವು ನದಿಯಲ್ಲಿ ನಿಗೂಢವಾಗಿ ಪತ್ತೆಯಾಗಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಮೈಸೂರು, ಸುತ್ತಮುತ್ತಲಿನ ಮರಗಳ ಸಂರಕ್ಷಣೆಗೆ ವಿಚಾರ ವಿನಿಮಯ

ಮೇ 11ರ ಮೈಗ್ರಾಪ ಸಭೆಯಲ್ಲಿ ಸಸ್ಯಶಾಸ್ತ್ರಜ್ಞ ಎಸ್.ನಟೇಶ್ ಭಾಗಿ

ಮೈಸೂರು,ಮೇ 5(ಪಿಎಂ)– ನಗರದ ಹೈದರ್‌ಅಲಿ ರಸ್ತೆಯಲ್ಲಿ ಇತ್ತೀಚೆಗೆ ಸುಮಾರು 40 ಮರಗಳ ಹನನ ನಡೆಸಿದ ಕರಾಳ ಘಟನೆ ಹಿನ್ನೆಲೆಯಲ್ಲಿ ಮೈಸೂರು ಮತ್ತು ಸುತ್ತಮುತ್ತಲಿನ ಮರಗಳ ಸಂರಕ್ಷಣೆಯ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲು ಮೈಸೂರು ಗ್ರಾಹಕರ ಪರಿಷತ್ (ಮೈಗ್ರಾಪ) ವತಿಯಿಂದ ಮೇ 11ರಂದು ಸಂಜೆ 4ಕ್ಕೆ ಆಯೋಜಿಸಿರುವ ಸಭೆಗೆ ಹೆಸರಾಂತ ಸಸ್ಯಶಾಸ್ತ್ರಜ್ಞ ಎಸ್.ನಟೇಶ್ ಅವರನ್ನು ಆಹ್ವಾನಿಸಲಾಗಿದೆ.

2024ರಲ್ಲಿ ಬಿಡುಗಡೆಯಾದ 'ಐಕಾನಿಕ್ ಟ್ರೀಸ್ ಆಫ್ ಇಂಡಿಯಾ' ಪುಸ್ತಕದ ಲೇಖಕರಾದ ಡಾ.ನಟೇಶ್ ಅವರು ಕೇಂದ್ರ ಸರ್ಕಾರದ ಬಯೋಟೆಕ್ನಾಲಜಿ ಇಲಾಖೆಯಲ್ಲಿ (ಡಿಬಿಟಿ) ಹಿರಿಯ ಸಲಹೆಗಾರರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರು 9 ವರ್ಷಗಳ ಕಾಲ ಡಿಬಿಟಿಯ ಅಂತಾರಾಷ್ಟ್ರೀಯ ಸಹಯೋಗ ವಿಭಾಗದ ಮುಖ್ಯಸ್ಥರೂ ಆಗಿದ್ದರು. 'ಬಯೋ ಸ್ಪೆಕ್ಟ್ರಮ್ ಲೈಫ್ ಟೈಮ್ ಅಚೀವ್‌ಮೆಂಟ್' ಪ್ರಶಸ್ತಿಯೂ ಇವರಿಗೆ ಸಂದಿದೆ. ಇವರ ಮಹತ್ತರ ಸೇವೆಯ ಗೌರವಾರ್ಥವಾಗಿ ಒಂದು ಹೊಸ ತಳಿಯ ಸಸ್ಯಕ್ಕೆ ಇವರ ಹೆಸರು ಸಹ ನಾಮಕರಣಗೊಂಡಿದೆ. ಮೈಸೂರಿನ ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಮೈಗ್ರಾಪ ಕಚೇರಿಯಲ್ಲಿ ಮೇ 11ರಂದು ನಡೆಯುವ ಸಭೆಯಲ್ಲಿ ಇವರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಏಪ್ರಿಲ್ 13ರ ಭಾನುವಾರರಂದು ನಗರದಲ್ಲಿ 40 ಪಾರಂಪರಿಕ ಹೆಮ್ಮರಗಳ ಮಾರಣ ಹೋಮ ನಡೆಸಲಾಯಿತು. ಈ ದುರ್ಘಟನೆಯಿಂದಾಗಿ ಪರಿಸರ ಪ್ರೇಮಿಗಳೆಲ್ಲರೂ ಸಹಸ್ರಾರು ಸಂಖ್ಯೆಯಲ್ಲಿ ಏಪ್ರಿಲ್ 18ರ ಸಂಜೆ ಹೈದರ್‌ಅಲಿ ರಸ್ತೆಯಲ್ಲಿ ಸೇರಿ ತಮ್ಮ ತೀವ್ರ ಶೋಕ, ಕಳವಳಗಳನ್ನು ಮೋಂಬತ್ತಿ ದೀಪದ ಪ್ರದರ್ಶನದೊಂದಿಗೆ ವ್ಯಕ್ತಪಡಿಸಿ ಪ್ರತಿಭಟನೆ ದಾಖಲಿಸಿದರು. ಎಲ್ಲಾ ರೀತಿಯ ಅರ್ಜಿ, ದೂರು, ವಿನುತಿ ಗಳನ್ನೂ ಮುಖ್ಯಮಂತ್ರಿ, ಲೋಕಾಯುಕ್ತ, ಎನ್‌ಜಿಟಿ ಅಧ್ಯಕ್ಷರು ಮತ್ತು ಜಿಲ್ಲಾಧಿಕಾರಿಗಳಿಗೆ ಸಂಘ–ಸಂಸ್ಥೆಗಳಿಂದ ಸಲ್ಲಿಸಲಾಯಿತು. ಏ.19ರಂದು ಅರಣ್ಯ ಸಚಿವ ಈಶ್ವರ ಖಂಡ್ರೆಯವರು ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿಯವರಿಗೆ ತನಿಖಾ ವರದಿಯನ್ನು ಏಳು ದಿನಗಳ ಅವಧಿಯೊಳಗೆ ಸಲ್ಲಿಸಲು ಆದೇಶ ಹೊರಡಿಸಿದರು.

ಏ.21ರಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ಮುಡಾ ಅಧಿಕಾರಿಯವರ ನೇತೃತ್ವದಲ್ಲಿ ಮೂರು ಸದಸ್ಯರ ಸಮಿತಿಯೊಂದನ್ನು ರಚಿಸಿ ಏಳು ದಿನಗಳೊಳಗೆ ಇನ್ನೊಂದು ತನಿಖಾ ವರದಿಯನ್ನು ಒಪ್ಪಿಸಲು ಆದೇಶಿಸಿದರು. ಈ ಅವಧಿಗಳು ಕಳೆದು ವಾರದ ಮೇಲಾದರೂ ಯಾವುದೇ ವರದಿಯ ಪ್ರಗತಿಯ ಚಿಹ್ನೆಗಳೂ ಕಂಡುಬಂದಿಲ್ಲ ಎಂದು ಮೈಗ್ರಾಪ ಆರೋಪಿಸಿದೆ.

ಇದರ ನಡುವೆ ನಗರದಲ್ಲಿ ವಿವಿಧೆಡೆ ಇನ್ನಷ್ಟು ಮರಗಳ ಹನನಕ್ಕೆ ಗುರುತು ಮಾಡಿಕೊಳ್ಳಲಾಗಿದೆ. ಯಾವುದೇ ಪ್ರಗತಿ, ಸುಧಾರಣೆಗಳಿಗೆ ಪರ್ಯಾಯ ಉಪಾಯಗಳ ಅಧ್ಯಯನದ ಮೊರೆ ಹೋಗುವ ಬದಲು ಮರಗಳ ಬುಡಕ್ಕೆ ಕೊಡಲಿ ಬೀಳುತ್ತಿವೆ. ದಟ್ಟಗಳ್ಳಿಯಲ್ಲಿ ಹೈ ವೋಲ್ಟೇಜ್ ವಿದ್ಯುಚ್ಛಕ್ತಿ ಸಾಲಿಗಾಗಿ 175 ಮರಗಳು, ಮಾನಂದವಾಡಿ ರಸ್ತೆಯ ಅಗಲೀಕರಣಕ್ಕೆ 125 ಮರ ಗಳನ್ನು ಕಡಿಯಲು ಗುರುತಿಸಲಾಗಿದೆ. ಸೇಂಟ್ ಫಿಲೋಮಿನಾ ಕಾಲೇಜು ಆವರಣದಲ್ಲಿ ಹತ್ತು ಮರಗಳನ್ನು ಯಾವುದೇ ಅನುಮತಿ ಪಡೆಯದೇ ಉರುಳಿಸಲಾಗಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಮೇ 11ರ ಸಭೆಯಲ್ಲಿ ಮಹತ್ವದ ಚರ್ಚೆ ನಡೆಯಲಿದೆ. ಆಸಕ್ತರು ದೂ.ಸಂ. 0821–2515150 ಸಂಪರ್ಕಿಸಬಹುದು ಎಂದು ಮೈಗ್ರಾಪ ಪ್ರಕಟಣೆ ತಿಳಿಸಿದೆ.

ವಕ್ಫ್ ಕಾಯ್ದೆ ವಿರುದ್ಧ ಅರ್ಜಿಗಳ ವಿಚಾರಣೆ ಮೇ 15ಕ್ಕೆ ಮುಂದೂಡಿಕೆ

ಕೇಂದ್ರದ ಸ್ಪಷ್ಟೀಕರಣ ಅಗತ್ಯ ಎಂದ ಸಿಜೆಐ

ನವದೆಹಲಿ: ವಿವಾದಾತ್ಮಕ ವಕ್ಫ್ (ತಿದ್ದುಪಡಿ) ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ಬ್ಯಾಚ್ ಅನ್ನು ಮೇ 15 ರಂದು ಭಾರತದ ನಿಯೋಜಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ವಿಚಾರಣೆ ನಡೆಸಲಿದ್ದಾರೆ ಎಂದು ಸುಪ್ರೀಂಕೋರ್ಟ್ ಸೋಮವಾರ ಹೇಳಿದೆ.

ಮೇ 13 ರಂದು ನಿವೃತ್ತರಾಗಲಿರುವ ಹಾಲಿ ಸಿಜೆಐ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು, ಕಾನೂನಿನ ಕೆಲವು ಅಂಶಗಳಿಗೆ ಸ್ಪಷ್ಟೀಕರಣದ ಅಗತ್ಯವಿರುವುದರಿಂದ ಈ ವಿಷಯದ ಕುರಿತು ತೀರ್ಪು ಅಥವಾ ಮಧ್ಯಂತರ ಆದೇಶವನ್ನು ಕಾಯ್ದಿರಿಸಲು ಬಯಸುವುದಿಲ್ಲ ಎಂದು ತಿಳಿಸಿದರು.

'ನೀವು (ಕೇಂದ್ರ) ವ್ಯವಹರಿಸಿದ ಕೆಲವು ಅಂಶಗಳಿವೆ. ಆದರೆ ಅವುಗಳಿಗೆ ಸ್ಪಷ್ಟೀಕರಣದ ಅಗತ್ಯವಿದೆ. ಈ ಮಧ್ಯಂತರ ಹಂತದಲ್ಲಿ ನಾನು ಯಾವುದೇ ತೀರ್ಪು ಅಥವಾ ಆದೇಶವನ್ನು ಕಾಯ್ದಿರಿಸಲು ಬಯಸುವುದಿಲ್ಲ. ಈ ವಿಷಯವನ್ನು ಸಮಂಜಸವಾಗಿ ಆರಂಭಿಕ ದಿನಾಂಕದಂದು ವಿಚಾರಣೆ ಮಾಡಬೇಕಾಗುತ್ತದೆ ಎಂದು ಸಿಜೆಐ ಖನ್ನಾ ಹೇಳಿದರು.

ಸಿಜೆಐ ಹೊರತುಪಡಿಸಿ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ ವಿ ವಿಶ್ವನಾಥನ್ ಅವರನ್ನು ಒಳಗೊಂಡ ಪೀಠವು ಅರ್ಜಿಗಳನ್ನು ಆಲಿಸಿತು.

ವಿಚಾರಣೆಯ ಸಮಯದಲ್ಲಿ, ವಕ್ಫ್ ಆಸ್ತಿಗಳ ನೋಂದಣಿಗೆ ಸಂಬಂಧಿಸಿದಂತೆ ಕೇಂದ್ರವು ಕೆಲವು ಅಂಶಗಳನ್ನು ಎತ್ತಿದೆ. ಇವುಗಳ ಬಗ್ಗೆ ನ್ಯಾಯಾಲಯವು ವಿವರವಾದ ವಿಚಾರಣೆ ನಡೆಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೇಂದ್ರದ ಪ್ರತಿ–ಅಫಿಡವಿಟ್ ಅನ್ನು ನಾವು ಆಳವಾಗಿ ಪರಿಶೀಲಿಸಿಲ್ಲ. ಹೌದು, ನೀವು (ವಕ್ಫ್ ಆಸ್ತಿಗಳ) ನೋಂದಣಿಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಎತ್ತಿದ್ದೀರಿ ಮತ್ತು ಕೆಲವು ವಿವಾದಿತ ಅಂಕಿಅಂಶಗಳನ್ನು ನೀಡಿದ್ದೀರಿ, ಅದಕ್ಕೆ ಸ್ವಲ್ಪ ಪರಿಗಣನೆಯ ಅಗತ್ಯವಿರುತ್ತದೆ ಎಂದು ಸಿಜೆಐ ಹೇಳಿದರು.

ಈ ವೇಳೆ ಬಳಕೆದಾರರಿಂದ ವಕ್ಫ್ ಸೇರಿದಂತೆ ವಕ್ಫ್ ಆಸ್ತಿಗಳನ್ನು ಡಿನೋಟಿಫೈ ಮಾಡುವುದಿಲ್ಲ ಅಥವಾ ಮೇ 15 ರಂದು ಮುಂದಿನ ವಿಚಾರಣೆಯವರೆಗೆ ಕೇಂದ್ರ ವಕ್ಫ್ ಕೌನ್ಸಿಲ್ ಮತ್ತು ಮಂಡಳಿಗಳಿಗೆ ಯಾವುದೇ ನೇಮಕಾತಿಗಳನ್ನು ಮಾಡುವುದಿಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಸುಪ್ರೀಂ ಕೋರ್ಟ್‌ಗೆ ಭರವಸೆ ನೀಡಿದರು.

ಸಾಧಕರಿಗೆ ನಿವೇಶನ ನೀಡಲು ಸತಾಯಿಸುತ್ತಿರುವ ಮುಡಾ...



ಮೈಸೂರು, ಮೇ 5(ಎಂಕೆ)– ಸಾಧಕರಿಗೆ ಆಸರೆ ನೀಡುವ ಉದ್ದೇಶದಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಘೋಷಿಸಿದ್ದ ಸಾಧಕರಿಗೆ ನಿವೇಶನ ನೀಡುವ ಯೋಜನೆ ಎರಡು ವರ್ಷದಿಂದ ನೆನಗುದಿಗೆ ಬಿದ್ದಿದ್ದು, ನಿವೇಶನಕ್ಕಾಗಿ ಲಕ್ಷ ಲಕ್ಷ ಹಣ ಕಟ್ಟಿ ಎದುರು ನೋಡುತ್ತಿರುವ 488 ಮಂದಿ ಸಾಧಕರು, ಬೇಸತ್ತು ನ್ಯಾಯಾಲಯದ ಮೊರೆ ಹೋಗಲು ನಿರ್ಧರಿಸಿದ್ದಾರೆ.

ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡಾ ಸಾಧಕರು, ಮಾಜಿ ಸೈನಿಕರು, ಕರ್ತವ್ಯದಲ್ಲಿದ್ದಾಗ ನಿಧನ ಹೊಂದಿದ ರಾಜ್ಯ ಸರಕಾರಿ ನೌಕರರಿಗೆ ದೇವನೂರು 3ನೇ ಹಂತದ ಬಡಾವಣೆಯೊಂದರಲ್ಲೇ ಹೆಚ್.ಕೆಟಗರಿಯಲ್ಲಿ 188 ನಿವೇಶನ ಹಂಚಿಕೆ ಮಾಡಲು ಮುಡಾ ನಿರ್ಧರಿಸಲಾಗಿತ್ತು. ಇದಕ್ಕಾಗಿ ರಾಜ್ಯಾದ್ಯಂತ 488 ಮಂದಿ ಸಾಧಕರು ಅರ್ಜಿ ಸಲ್ಲಿಸಿದ್ದು, ಮುಂಗಡವಾಗಿ ಒಟ್ಟು 9.60 ಕೋಟಿ ರೂ. ಕಟ್ಟಿ ನಿವೇಶನಕ್ಕಾಗಿ ಕಾಯುತ್ತಿದ್ದಾರೆ. ಆದರೆ, ಈ ಪ್ರಕ್ರಿಯೆ ನಡೆದು 2.2 ವರ್ಷಗಳಾದರೂ ಫಲಾನುಭವಿಗಳನ್ನು ಗುರುತಿಸಿ ನಿವೇಶನ ಹಂಚಿಕೆ ಮಾಡಲು ಸಾಧ್ಯವಾಗಿಲ್ಲ.

ನಮ್ಮ ಸಾಧನೆಯನ್ನು ಪರಿಗಣಿಸಿ ಸರಕಾರ ನಿವೇಶನ ನೀಡುತ್ತಿದ್ದು, ನಮಗೂ ಒಂದು ನಿವೇಶನ ಸಿಕ್ಕರೆ ಅದರಲ್ಲಿ ಮನೆ ಕಟ್ಟಿ ಕೊಳ್ಳಬೇಕೆಂದು ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್, ಹಿರಿಯ ನಟ ಸುಂದರ್ ರಾಜ್ ಸೇರಿದಂತೆ ರಾಜ್ಯದ ನಾನಾ ಸಾಧಕರು ಅರ್ಜಿ ಸಲ್ಲಿಸಿದ್ದು ನಿವೇಶನ ಹಂಚಿಕೆ ಮಾಡುವಂತೆ ಕಳೆದ ಎರಡು ವರ್ಷಗಳಿಂದ ಮುಡಾ ಆಯುಕ್ತರು, ಜಿಲ್ಲಾಧಿಕಾರಿ, ಜನಪ್ರತಿನಿಧಿಗಳು, ಮುಡಾ ಅಧ್ಯಕ್ಷರು ಸೇರಿದಂತೆ ಎಲ್ಲರಿಗೂ ಮನವಿ ಸಲ್ಲಿಸುತ್ತಾ ಬಂದರೂ ಯಾವುದೇ ಪ್ರಯೋಜನವಾಗಿಲ್ಲ. ಹಾಗಾಗಿ ಕೂಡಲೇ ಮುಡಾ ಸೂಕ್ತ ನಿರ್ಧಾರ ಕೈಗೊಳ್ಳ ದಿದ್ದರೆ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅರ್ಜಿದಾರರು ನಿರ್ಧರಿಸಿದ್ದಾರೆ.

20x30 ಅಳತೆಯ ನಿವೇಶನಕ್ಕೆ 5.20 ಲಕ್ಷ ರೂ., 30x40 ಅಳತೆಯ ನಿವೇಶನಕ್ಕೆ 10.46 ಲಕ್ಷ ರೂ., 40x60 ಅಳತೆಯ ನಿವೇಶನಕ್ಕೆ 20.92 ಲಕ್ಷ ರೂ. ಹಾಗೂ 50x80 ಅಳತೆಯ ನಿವೇಶನಕ್ಕೆ ಬೆಲೆ 34.86 ಲಕ್ಷ ರೂ. ನಿಗದಿಪಡಿಸಲಾಗಿದ್ದು, ಅರ್ಜಿದಾರರು ಮುಂಗಡ ಹಣವನ್ನು ಕಟ್ಟಿ ಸಾಲಕ್ಕೆ ಸಿಲುಕಿರುವುದಲ್ಲದೆ ಅತ್ತ ದುಡ್ಡು ಇಲ್ಲ, ಇತ್ತ ಸೈಟು ಇಲ್ಲ ಎನ್ನುವಂತೆ ಪೇಚಾಟಕ್ಕೆ ಸಿಲುಕಿದ್ದಾರೆ.

ಕ್ರೀಡಾ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಆಧಾರದ ಮೇಲೆ ನಾನು 40x60 ಅಳತೆಯ ಅರ್ಜಿ ಸಲ್ಲಿಸಿದ್ದು, ಈಗಾಗಲೇ ಶೇ.10 ರಷ್ಟು ಮುಂಗಡ ಹಣವನ್ನು ಪಾವತಿ ಮಾಡಿದ್ದೇನೆ. ನಿವೇಶನ ಹಂಚಿಕೆ ಬಗ್ಗೆ ಕೇಳಿದರೆ ಮುಂದಿನ ಸಭೆಯಲ್ಲಿಟ್ಟು ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸುತ್ತಾರೆ. ಆದರೆ, ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಂತರ ರಾಷ್ಟ್ರೀಯ ಚೆಸ್ ಆಟಗಾರ ಎಂ.ಪಿ.ಅಜಿತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪರಿಶೀಲಿಸಿ ಮಾಹಿತಿ ನೀಡಲಾಗುವುದು...

ಸಾಧಕರಿಗೆ ನಿವೇಶನ ನೀಡುವ ಯೋಜನೆ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಕೂಡಲೇ ಈ ಬಗ್ಗೆ ಪರಿಶೀಲಿಸಿ ಮಾಹಿತಿ ನೀಡಲಾಗುವುದು. ಅಲ್ಲದೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
- ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ.

ಮೇ 15ಕ್ಕೆ ಸಭೆ...!

ಸಾಧಕರಿಗೆ ನಿವೇಶನ ನೀಡುವ ಯೋಜನೆ ಸಂಬಂಧ ಮೇ 15 ರಂದು ಸಭೆ ಕರೆಯಲಾಗಿದೆ ಎಂಬ ಮಾಹಿತಿ ಇದೆ. ಆದರೆ, ಈ ಯೋಜನೆ ಬಿಜೆಪಿ ಸರ್ಕಾರದ ಅವಧಿಯಲ್ಲಾಗಿದ್ದು. ಈಗಿರುವ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯತೆ ವಹಿಸುತ್ತಿರುವುದರಿಂದ ಈ ಯೋಜನೆಯನ್ನೇ ರದ್ದು ಮಾಡುವ ಮಾತುಗಳು ಕೇಳಿ ಬರುತ್ತಿವೆ. ಆಕಸ್ಮಾತ್ ಈ ಯೋಜನೆ ಕೈ ಬೀಡಲು ಮುಡಾ ಮುಂದಾದರೆ ನ್ಯಾಯಾಲಯದಲ್ಲಿ ದಾವೆ ಹೂಡಲಾಗುವುದು.
- ಎಂ.ಪಿ.ಅಜಿತ್, ಅಂತಾರಾಷ್ಟ್ರೀಯ ಚೆಸ್ ಪಟು, ಮೈಸೂರು.

ಮೈಸೂರು ಮಿತ್ರ

ವಿವಿಧ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ನಂಜನಗೂಡು, ಮೇ 5– ನಂಜನಗೂಡು ನಗರ ವ್ಯಾಪ್ತಿಯ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ 4.83 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ಸೋಮವಾರ ನಗರದ ಅಶೋಕಪುರಂ ಬಡಾವಣೆ, ಸರಸ್ವತಿ ಕಾಲೋನಿ, ಚಾಮಲಾಪುರದ ಬೀದಿ, ನೀಲಕಂಠ ನಗರ, ರಾಜಾಜಿ ಕಾಲೋನಿ, ಹೌಸಿಂಗ್ ಬೋರ್ಡ್ ಬಡಾವಣೆಗಳಲ್ಲಿ ರಸ್ತೆ, ಚರಂಡಿ, ಸಮುದಾಯ ಭವನ, ಸ್ಮಶಾನ ಹಾಗೂ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಗರದ ಫುಡ್‌ಕೋರ್ಟ್ ರಸ್ತೆ ಬದಿ ಇಂಟರ್‌ಲಾಕ್ ಅಳವಡಿಕೆ, ಆನಂದಪುರ ಬಡಾವಣೆ ರಸ್ತೆ ಡಾಂಬರೀಕರಣ, ಸರಸ್ವತಿ ಕಾಲೋನಿ ರಾಮಮಂದಿರದ ಅರಳೀ ಮರಕ್ಕೆ ಕಟ್ಟೆ, ಸಿ.ಸಿ.ರಸ್ತೆ, ಉರ್ದು ಶಾಲೆ ಕಾಂಪೌಂಡ್ ನಿರ್ಮಾಣ, ಜಮೀಯಾ ಮಸೀದಿ ಹಾಗೂ ಗರಡಿ ಮನೆಗಳ ಮುಂದುವರೆದ ಕಾಮಗಾರಿ, ಬಸವೇಶ್ವರ ಉದ್ಯಾನ ಸೇರಿದಂತೆ 4.83 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ 8 ಸಾವಿರ ಕೋಟಿ ಅನುದಾನ ಮೀಸಲಿಟ್ಟಿದ್ದು, ಆ ಅನುದಾನದಲ್ಲಿ ಹೆಚ್ಚಿನ ಅನುದಾನವನ್ನು ಕ್ಷೇತ್ರಕ್ಕೆ ಮಂಜೂರು ಮಾಡಿಸಿ ಮುಂದಿನ ದಿನಗಳಲ್ಲಿ ನಗರವನ್ನು ಒಂದು ಮಾದರಿ ಪ್ರವಾಸಿ ತಾಣವನ್ನಾಗಿ ರೂಪಿಸುವ ಸಲುವಾಗಿ ಶೇ.50ರಷ್ಟು ಅನುದಾನವನ್ನು ನಗರದ ಅಭಿವೃದ್ಧಿ ಕಾಮಗಾರಿ ಗಳಿಗಾಗಿ ಬಳಸಲಾಗುವುದು ಎಂದರು.

> "ಅಶೋಕಪುರಂ ಬಡಾವಣೆ ನಿವಾಸಿಗಳ ಬಹು ದಿನದ ಬೇಡಿಕೆಯನ್ನು ಶಾಸಕರು ಈಡೇರಿಸಿದ್ದಾರೆ. ಆದಿಶಕ್ತಿ ಅಮ್ಮನವರ ದೇವಾಲಯ ಜೀರ್ಣೋದ್ಧಾರ, ಸಮುದಾಯ ಭವನ ಕಾಮ ಗಾರಿಗಾಗಿ ನನ್ನ ಕ್ಷೇತ್ರಾಭಿವೃದ್ಧಿ ಅನುದಾನ ಹಾಗೂ ಸಂಸದ ಸುನೀಲ್ ಬೋಸ್ ಅವರಿಂದ ಹೆಚ್ಚಿನ ಅನುದಾನ ಪಡೆದು ಉತ್ತಮ ಸಮುದಾಯ ಭವನ ನಿರ್ಮಿಸಲಾಗುವುದು.
> – ಡಾ.ತಿಮ್ಮಯ್ಯ, ಎಂಎಲ್‌ಸಿ.

ವಕೀಲ ಅರುಣ್ ಕುಮಾರ್ ಮಾತನಾಡಿ, ಅಶೋಕಪುರಂ ಬಡಾವಣೆಯಲ್ಲಿ ಈ ಹಿಂದೆ ಉದ್ಯಾನ ಅಭಿವೃದ್ಧಿ ಕಾಮಗಾರಿ ಪಡೆದಿದ್ದ ಗುತ್ತಿಗೆದಾರರು ಕಳಪೆ ಕಾಮಗಾರಿ ನಡೆಸಿದ್ದಾರೆ. ಮತ್ತೆ ಆದಿಶಕ್ತಿ ಅಮ್ಮನವರ ದೇವಾಲಯ ಜೀರ್ಣೋದ್ಧಾರ, ಸಮುದಾಯ ಭವನ ನಿರ್ಮಾಣ ಕಾಮಗಾರಿಯನ್ನು ಅದೇ ಗುತ್ತಿಗೆದಾರ ಪಡೆದುಕೊಂಡಿದ್ದಾರೆ. ನಿವಾಸಿಗಳು ಕಳಪೆ ಕಾಮಗಾರಿ ನಡೆಯುವ ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಶಾಸಕರು ನಿರ್ಮಾಣ ಕಾಮಗಾರಿ ನಡೆಯುವ ವೇಳೆ ಪರಿಶೀಲನೆ ನಡೆಸಿ, ಗುಣಮಟ್ಟದ ಕಾಮಗಾರಿ ನಡೆಯುವಂತೆ ಗಮನಹರಿಸಬೇಕು ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರಿಯಾನಬಾನು, ಸದಸ್ಯರಾದ ಸಿದ್ದಿಕ್ ಅಹಮದ್, ಗಾಯತ್ರಿ, ವಿಜಯಲಕ್ಷ್ಮಿ, ಮೀನಾಕ್ಷಿ, ಗಾಯತ್ರಿ, ಗಂಗಾಧರ, ಎಸ್.ಪಿ.ಮಹೇಶ್, ಯೋಗೀಶ್, ಸಿದ್ದಿಕ್, ಎನ್.ಎಸ್.ಯೋಗೀಶ್, ಪ್ರದೀಪ್, ನಗರಸಭಾ ಆಯುಕ್ತ ವಿಜಯ್, ಮುಖಂಡರಾದ ಅಬ್ದುಲ್ ಖಾದರ್, ಶ್ರೀಧರ್, ರಾಜೇಶ್, ಪುಟ್ಟಸ್ವಾಮಿ, ದೇವರಾಜು, ಸ್ವಾಮಿ, ಸೇರಿದಂತೆ ಇತರರಿದ್ದರು.

ಒಕ್ಕಲಿಗರ ಸಮುದಾಯ ಭವನಕ್ಕೆ ಭೂಮಿ ಪೂಜೆ



ಸಮುದಾಯ ಭವನಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ ಭೂಮಿ ಪೂಜೆ ನೆರವೇರಿಸಿದರು.

ಹುಣಸೂರು, ಮೇ 5– ನಗರದ ನರಸಿಂಹಸ್ವಾಮಿ ತಿಟ್ಟಿನ ಬಳಿ ಒಕ್ಕಲಿಗರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು ಇಲ್ಲಿನ ಒಕ್ಕಲಿಗ ಸಮುದಾಯ ಭವನ ಅಥವಾ ಶೈಕ್ಷಣಿಕ ಕಟ್ಟಡ ನಿರ್ಮಾಣಕ್ಕೆ ನನ್ನ ಸಹಕಾರವಿದೆ. ನಗರದ ನರಸಿಂಹಸ್ವಾಮಿ ತಿಟ್ಟಿನ 2 ಎಕರೆ ಖಾಲಿ ಜಾಗದಲ್ಲಿ ಶಾಲಾ, ಕಾಲೇಜು ನಿರ್ಮಿಸಿದರೆ ಒಂದಷ್ಟು ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ ವಾಗಲಿದೆ. ಸಮಿತಿಯವರು ಕುಳಿತು ಯೋಚನೆ ಮಾಡಿ ಮುಂದುವರೆಯಿರಿ ಎಂದರು.

ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಮಾಜಿ ಶಾಸಕ ಕರಿಯಪ್ಪಗೌಡರ ಪರಿಶ್ರಮದಿಂದ 1.5 ಎಕರೆ ಭೂಮಿಯನ್ನು ಸರ್ಕಾರದಿಂದ ಕೊಡಿಸಲಾಗಿತ್ತು. ಅದು ಸೂಕ್ತವಲ್ಲವೆಂದು ಬಿಜೆಪಿ ಸರ್ಕಾರದ ಅವಧಿಯಲ್ಲಿ 2 ಎಕರೆ ಭೂಮಿ ಜೊತೆಗೆ 55 ಲಕ್ಷ ರೂ.ಗಳನ್ನು ಸಮುದಾಯ ಭವನ ನಿರ್ಮಾಣಕ್ಕೆ ಬಿಡುಗಡೆ ಮಾಡಲಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಜಿ.ಡಿ.ಹರೀಶ್‌ಗೌಡರೊಂದಿಗೆ ಒಕ್ಕಲಿಗ ಸಮುದಾಯದ ಏಳಿಗೆಗೆ ಶ್ರಮಿಸಲಾಗುವುದು. ಮುಂದೆ ನಡೆಯುವ ಜಾತಿಗಣತಿಯಲ್ಲಿ ಸಮುದಾಯ ಜಾಗೃತಿಯಿಂದ ಹೆಜ್ಜೆ ಇಡಬೇಕಿದೆ. ಸಮುದಾಯದ ಸ್ವಾಮೀಜಿಗಳ ನೇತೃತ್ವದಲ್ಲಿ ಸಭೆ ಕರೆದು ಅರಿವು ಮೂಡಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಶ್ರೀಸೋಮನಾಥ ಸ್ವಾಮೀಜಿ, ತಾಲೂಕು ಅಧ್ಯಕ್ಷ ಗಣೇಶ್ ಗೌಡ, ನಿರ್ದೇಶಕರಾದ, ಗೋವಿಂದೇಗೌಡ, ಬಾಲಚಂದ್ರಣ್ಣ, ಜಯರಾಮ್, ವಕೀಲ ಯೋಗಾನಂದ್ ಕುಮಾರ್, ರಾಮಕೃಷ್ಣೇಗೌಡ, ಬಸವರಾಜು, ನಂಜಪ್ಪ, ಹೆಚ್.ಎನ್. ರವಿಕುಮಾರ್, ಸೋಮಶೇಖರ್, ಚಂದ್ರೇಗೌಡ, ರಾಮಚಂದ್ರ ಇನ್ನಿತರರಿದ್ದರು.

ಲಯನ್ಸ್ ಅಕಾಡೆಮಿ ಶಾಲೆಗೆ ಶೇ.88.23ರಷ್ಟು ಫಲಿತಾಂಶ



ಅರ್ಪಿತ

ಸರಗೂರು, ಮೇ 5– ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.88.23ರಷ್ಟು ಫಲಿತಾಂಶ ಪಡೆದಿದೆ.

ಶಾಲೆಯ ವಿದ್ಯಾರ್ಥಿನಿ ಅರ್ಪಿತ 625ಕ್ಕೆ 603 ಅಂಕಗಳನ್ನು ಪಡೆದು ಸರಗೂರು ತಾಲೂಕಿಗೆ ಪ್ರಥಮ, ಪವನ್ ಕುಮಾರ್ 596, ಕಲಾಶ್ರೀ ಹಾಗೂ ಶ್ರೇಯ 587 ಅಂಕಗಳನ್ನು ಪಡೆದು ದ್ವಿತೀಯ ಹಾಗೂ ತೃತಿಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದೆ.

ಜಾತಿ ಜನಗಣತಿ ಸಮೀಕ್ಷೆಗೆ

ನಾಗಮೋಹನ್ ದಾಸ್ ಆಯೋಗದ ಅವಶ್ಯವಿರಲಿಲ್ಲ



ಸಿ.ರಮೇಶ್

ತಿ.ನರಸೀಪುರ, ಮೇ 5– ರಾಜ್ಯ ಸರ್ಕಾರಕ್ಕೆ ಒಳ ಮೀಸಲಾತಿ ಜಾರಿಗೊಳಿಸಲು ಪರಿಶಿಷ್ಟರ ಮೀಸಲಾತಿ ವರ್ಗೀಕರಿಸಿದ್ದ ಸದಾಶಿವ ಆಯೋಗದ ವರದಿಯೇ ಸಾಕಾಗಿತ್ತು. ದತ್ತಾಂಶ ಸಂಗ್ರಹಕ್ಕೆ ಜಾತಿ ಜನಗಣತಿ ಸಮೀಕ್ಷೆ ನಡೆಸಲು ನಿಯೋಜಿಸಿರುವ ನಾಗಮೋಹನ್ ದಾಸ್ ಆಯೋಗದ ಅವಶ್ಯವಿರಲಿಲ್ಲ. ವಿಪಕ್ಷ ನಾಯಕರು ಮತ್ತು ಮುಖಂಡರನ್ನು ದೂರವಿಟ್ಟು ಜಾತಿ ಜನಗಣತಿ ನಡೆಸುತ್ತಿರುವುದು ಪ.ಜಾತಿ ಮಾದಿಗ ಸಮುದಾಯಕ್ಕೆ ಟೋಪಿ ಹಾಕುವ ಕೆಲಸ ಎಂದು ಬಾಬು ಜಗಜೀವನರಾಂ ಸಮತಾ ಆಂದೋಲನ ರಾಜ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಸಿ. ರಮೇಶ್ ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ಗೋಪಾಲಪುರ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದಾ ಶಿವ ಆಯೋಗದ ವರದಿಯನ್ನೇ ನೋಡದ ಸರ್ಕಾರ ಮೇ 5 ರಿಂದ 17ವರೆಗೆ ಪ.ಜಾತಿ ಜನಸಂಖ್ಯೆ ಸಮೀಕ್ಷೆ ಕೈಗೊಂಡಿದೆ. ಒಳ ಮೀಸಲಾತಿಗಾಗಿ ಹೋರಾಡಿದ ವಿಪಕ್ಷಗಳ ಮುಖಂಡರನ್ನು ಸೌಜನ್ಯಕ್ಕೂ ಮಾತನಾಡಿಸಿಲ್ಲ. ಕಾಂಗ್ರೆಸ್ ಪ್ರೇರಿತ ಕೆಲವು ಸಂಘ–ಸಂಸ್ಥೆಗಳು ಹಾಗೂ ಪುಡಾರಿಗಳು ಜಾಗೃತಿ ಸಭೆಗಳನ್ನು ನಡೆಸುತ್ತಿರುವುದರಿಂದ ಸಮೀಕ್ಷೆ ಸಮರ್ಪಕವಾಗಿ ನಡೆಯಲ್ಲ ಎಂದು ಆರೋಪಿಸಿದರು.

ಪ.ಜಾತಿಯಲ್ಲಿ ಕಡಿಮೆ ಸಂಖ್ಯೆಯಲ್ಲಿರುವ ಸಮುದಾಯಗಳ ರಾಜಕಾರಣಿಗಳು ಇಲ್ಲಿಯವರೆಗೂ ಅಧಿಕಾರ ಅನುಭವಿಸುತ್ತಿದ್ದಾರೆ. ಒಳ ಮೀಸಲಾತಿ ಜಾರಿಯಾದರೆ ಅಧಿಕಾರ ಕಳೆದುಕೊಳ್ಳುವ ಭಯವಿರುವುದರಿಂದ ಮೀಸಲಾತಿ ವರ್ಗೀಕರಣಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗಲೇ ಸದಾಶಿವ ಆಯೋಗ ರಚನೆಗೆ ಹೋರಾಟ ಮಾಡಿದ್ದೆ. ಒಳ ಮೀಸಲು ಜಾರಿ ಸಂಬಂಧ ಸುದೀರ್ಘ ವರದಿಯನ್ನು ಆಯೋಗ ನೀಡಿದ್ದರೂ ರಾಜ್ಯ ಸರ್ಕಾರ ಮತ್ತೊಂದು ಆಯೋಗವನ್ನು ರಚಿಸಿ, ಸಚಿವ ಸಂಪುಟ ಸ್ಥಾನಮಾನ ನೀಡಿ, ಮತ್ತೆ ಜಾತಿ ಜನಗಣತಿ ಸಮೀಕ್ಷೆ ನಡೆಸುವ ಅಗತ್ಯವಿರಲಿಲ್ಲ ಎಂದರು.

ಸಿಎಂ ಸಿದ್ದರಾಮಯ್ಯ ಅವರಿಗೆ ಸಮುದಾಯದ ಬಗ್ಗೆ ಅತೀವ ಕಾಳಜಿ ಇದ್ದರೂ ಸಚಿವ ಸಂಪುಟದಲ್ಲಿರುವ ಎಐಸಿಸಿ ಅಧ್ಯಕ್ಷರ ಪುತ್ರ ಪ್ರಿಯಾಂಕ್ ಖರ್ಗೆ ಸೇರಿದಂತೆ ಜಿ.ಪರಮೇಶ್ವರ್ ಹಾಗೂ ಡಾ.ಹೆಚ್.ಸಿ. ಮಹದೇವಪ್ಪ ಅವರ ಪ್ರಭಾವ ಮತ್ತು ಒತ್ತಡಕ್ಕೆ ಮಣಿಯುವ ಸಾಧ್ಯತೆ ಇದೆ. ಸಮಾಜ ಕಲ್ಯಾಣ ಇಲಾಖೆ ಸಚಿವರಂತೂ ನಾಟಕ ಮಾಡುತ್ತಿದ್ದಾರೆ. ಕ್ಷೇತ್ರದ ಶಾಸಕರಾಗಿರುವ ಮಹದೇವಪ್ಪ ಗೋಪಾಲಪುರ ನಿವಾಸಿಗಳ ನಿವೇಶನ ಬೇಡಿಕೆ ಬಗ್ಗೆ ಪರಿಶೀಲಿಸುವ ಕನಿಷ್ಠ ಸೌಜನ್ಯವೂ ಇಲ್ಲ. ಇನ್ನು ಒಳ ಮೀಸಲಾತಿ ಜಾರಿ ಮಾಡುತ್ತಾರೆ ಎಂಬುದನ್ನು ನಂಬಲು ಸಾಧ್ಯವಿಲ್ಲ. ಮುಖ್ಯಮಂತ್ರಿಗಳ ಜೊತೆಗಿದ್ದುಕೊಂಡು ವರ್ಗಾವಣೆಯಿಂದ ಹಣ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪ ಮಾಡಿದರು.

ಸಿದ್ದಾಪುರದಲ್ಲಿ ಬಸವೇಶ್ವರ ದೇವಾಲಯ ಲೋಕಾರ್ಪಣೆ

ದೇವಾಲಯಗಳು ಭಾರತೀಯ ಸಂಸ್ಕೃತಿಯ ಪ್ರತೀಕ: ಶಾಸಕ ಡಿ.ರವಿಶಂಕರ್



ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್ ಅವರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಮೇ 5– ದೇವಾಲಯಗಳ ನಿರ್ಮಾಣದಿಂದ ಗ್ರಾಮಗಳಲ್ಲಿ ಸಹಬಾಳ್ವೆ ಮತ್ತು ಸಹೋದರತ್ವ ಗಟ್ಟಿಗೊಳ್ಳಲಿದೆ. ಆದ್ದರಿಂದ ಪ್ರತಿ ಗ್ರಾಮಗಳಲ್ಲಿ ದೇವಾಲಯಗಳ ನಿರ್ಮಾಣ ಮತ್ತು ಪುನಶ್ಚೇತನವಾಗಬೇಕು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಸಿದ್ದಾಪುರದಲ್ಲಿ ನೂತನವಾಗಿ ನಿರ್ಮಿಸಿರುವ ಬಸವೇಶ್ವರ ದೇವಾಲಯ ಉದ್ಘಾಟಿಸಿ ಮಾತನಾಡಿದ ಅವರು, ದೇವಾಲಯಗಳು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದ್ದು, ಅವುಗಳು ದೇಶದ ಸಂಸ್ಕೃತಿ ಮತ್ತು ಪರಂಪರೆಯನ್ನು ಎತ್ತಿ ಹಿಡಿಯುತ್ತವೆ ಎಂದರು.

ಮನುಷ್ಯನ ಒತ್ತಡದ ದಿನಗಳಲ್ಲಿ ನೆಮ್ಮದಿ ಅವಶ್ಯಕತೆ ಇದ್ದು, ಇಂತಹ ಧಾರ್ಮಿಕ ಕಾರ್ಯಗಳಿಂದ ಗ್ರಾಮಗಳಲ್ಲಿ ಶಾಂತಿ ಮತ್ತು ನೆಮ್ಮದಿ ಕಾಣಬಹುದು. ಆ ನಿಟ್ಟಿನಲ್ಲಿ ಸಿದ್ದಾಪುರ ಗ್ರಾಮದ ಯುವಕರು ಸ್ವಯಂ ಪ್ರೇರಿತವಾಗಿ ಮತ್ತು ಜವಾಬ್ದಾರಿಯಿಂದ ದೇವಾಲಯ ನಿರ್ಮಿಸಿದ್ದಾರೆ ಎಂದರು.

ಚುನಾವಣಾ ಪೂರ್ವ ನೀಡಿದ ಬರವಸೆಯಂತೆ ದೇವಾಲಯ ನಿರ್ಮಾಣ ಮಾಡಲಾಗಿದ್ದು, ಗ್ರಾಮದ ಎಲ್ಲಾ ಮುಖಂಡರು ಮತ್ತು ಯುವಕರು ಸಹಕಾರ ನೀಡಿರುವುದರಿಂದ ಕೇವಲ 6 ತಿಂಗಳಲ್ಲಿ ದೇವಾಲಯ ನಿರ್ಮಿಸಲು ಸಾಧ್ಯವಾಗಿದೆ. ಆದ್ದರಿಂದ ಗ್ರಾಮದ ಜನತೆಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಸಿದ್ದಾಪುರ– ಹೊಸಕೊಪ್ಪಲು ಗೇಟ್ ಸಂಪರ್ಕ ರಸ್ತೆ ಅಭಿವೃದ್ಧಿಗೆ ಈಗಾಗಲೇ ಕ್ರಮ ಕೈಗೊಂಡಿದ್ದು, ಶೀಘ್ರ ಗುದ್ದಲಿ ಪೂಜೆ ನೆರವೇರಿಸಲಾಗುವುದು. ಗ್ರಾಮ ಪರಿಮಿತಿಯ ಎಲ್ಲಾ ರಸ್ತೆಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿ ಪಡಿಸಿ ನಿಮ್ಮ ಋಣ ತೀರಿಸಲಾಗುತ್ತದೆ ಎಂದರು.

ಕೆ.ಆರ್.ನಗರದ ಪುರಸಭೆ ವೃತ್ತದಿಂದ ಮಾವತ್ತೂರು ಗ್ರಾಮದವರೆಗೆ ಮುಖ್ಯರಸ್ತೆ ಅಭಿವೃದ್ಧಿ ಪಡಿಸಲು 30 ಕೋಟಿ ಅನುದಾನ ನೀಡುವಂತೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಮನವಿ ಸಲ್ಲಿಸಲಾಗಿದ್ದು, ಅವರು ಮುಂದಿನ ಜೂನ್ ತಿಂಗಳೊಳಗೆ ಅನುದಾನ ಮಂಜೂರು ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಸಿದ್ದಾಪುರ, ಬ್ಯಾಡರಹಳ್ಳಿ, ಮಾವತ್ತೂರು ಗ್ರಾಪಂ ವ್ಯಾಪ್ತಿಯಲ್ಲಿ ಪಶು ಆಸ್ಪತ್ರೆ ನಿರ್ಮಾಣ ಮಾಡಿ ಈ ಭಾಗದ ರೈತರಿಗೆ ಅನುಕೂಲ ಕಲ್ಪಿಸಲಾಗುತ್ತದೆ. ಸಿದ್ದಾಪುರ ಗ್ರಾಮದ ಗ್ರಾಮಸ್ಥರ ಬೇಡಿಕೆಯಂತೆ ಕುರ್ಚ್ ನಿರ್ಮಾಣ ಮಾಡಲಾಗುತ್ತದೆ ಎಂದರು.

ಈ ವೇಳೆ ಗ್ರಾಮಸ್ಥರು ಶಾಸಕ ಡಿ.ರವಿಶಂಕರ್ ದಂಪತಿಯನ್ನು ಬೆಳ್ಳಿ ಕಿರೀಟ ತೊಡಿಸಿ ಸನ್ಮಾನಿಸಲಾಯಿತು. ಶಾಸಕರ ಪತ್ನಿ ಸುನೀತಾ, ಮುಖಂಡರಾದ ಎಸ್.ಪಿ. ತ್ಯಾಗರಾಜು, ಜಯಪ್ರಕಾಶ್, ಎಸ್.ಪಿ. ವೆಂಕಟೇಶ್, ಎಸ್.ಎಂ.ಪ್ರಸನ್ನ, ನಾಗರಾಜು, ಶಿವಣ್ಣಾಚಾರ್, ನಟರಾಜು, ಲಕ್ಷ್ಮೀನಾರಾಯಣ, ದೊಡ್ಡೇಗೌಡ, ಸುಬ್ರಹ್ಮಣ್ಯ, ಕಲಾವತಿ, ಸುರೇಶ್, ಅಭಿ, ದೊರೆಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ಮಹಾಬೋಧಿ ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘಕ್ಕೆ

13 ನಿರ್ದೇಶಕರು ಅವಿರೋಧ ಆಯ್ಕೆ

ಹುಣಸೂರು, ಮೇ 5– ನಗರದ ಮಹಾಬೋಧಿ ಡಾ.ಬಿ.ಆರ್.ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ ಇಬ್ಬರು ಮಹಿಳೆಯರು ಸೇರಿದಂತೆ 13 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರ ಆಯ್ಕೆಗಾಗಿ 30 ಸದಸ್ಯರು ನಾಮಪತ್ರ ಸಲ್ಲಿಸಿದ್ದರು. ನಾಮಪತ್ರ ವಾಪಸ್ ಪಡೆಯಲು ನಿಗದಿಯಾಗಿದ್ದ ಕೊನೆ ದಿನ 17 ಮಂದಿ ನಾಮಪತ್ರ ವಾಪಸ್ ಪಡೆದಿದ್ದರಿಂದ ಕಣದಲ್ಲಿದ್ದ 13 ಸದಸ್ಯರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರಾಜಣ್ಣ ಘೋಷಣೆ ಮಾಡಿದರು.

ಮಹಿಳಾ ಮೀಸಲು ಸ್ಥಾನದಿಂದ ರಾಧ, ಹೇಮಾವತಿ.ಹೆಚ್.ಎಸ್, ಸಾಮಾನ್ಯ ಕ್ಷೇತ್ರದಿಂದ ಕುಮಾರ್.ಹೆಚ್.ಎಸ್, ಕೃಷ್ಣ.ಎನ್, ದಯಾನಂದ ಸಿ.ಕೆ, ದೇವರಾಜು.ಯು.ಡಿ, ನಾಗರಾಜು, ನಾಗರಾಜು.ಹೆಚ್.ಬಿ, ಪುಟ್ಟಮಾದಯ್ಯ, ಪುಟ್ಟರಾಜು, ಬಸವರಾಜು, ಮಹದೇವಸ್ವಾಮಿ ಸಿ, ಶಿವಯ್ಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಅನ್ನಸಂತರ್ಪಣೆಗೆ ಚಾಲನೆ



ಹುಣಸೂರು ತಾಲೂಕಿನ ಹೊಸರಾಮನಹಳ್ಳಿಯಲ್ಲಿ ಸೋಮೇಶ್ವರ ದೇವಸ್ಥಾನದ ಹಬ್ಬ ಮತ್ತು ಅನ್ನಸಂತರ್ಪಣಾ ಕಾರ್ಯಕ್ರಮ ಲಕ್ಷ್ಮಣ ತೀರ್ಥ ನದಿ ದಂಡೆಯ ಶ್ರೀವೀರಾಂಜನೇಯಸ್ವಾಮಿ ಸನ್ನಿಧಿ ಆವರಣದಲ್ಲಿ ನಡೆಯಿತು. ದಾಸೋಹಕ್ಕೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಚಾಲನೆ ನೀಡಿದರು. ಈ ವೇಳೆ ಗ್ರಾಮಸ್ಥರು, ಸುತ್ತಮುತ್ತಲ ಗ್ರಾಮಸ್ಥರು ಇದ್ದರು.

ಶ್ರದ್ಧಾಭಕ್ತಿಯ ಶ್ರೀಮಂಟೇಸ್ವಾಮಿ ಕಂಡಾಯ ಮೆರವಣಿಗೆ



ಶ್ರೀಮಂಟೇಸ್ವಾಮಿ ಕಂಡಾಯ ಉತ್ಸವ ನಡೆಯಿತು.

ತಿ.ನರಸೀಪುರ, ಮೇ 5– ಪುರಸಭಾ ವ್ಯಾಪ್ತಿಯ ತಿರುಮಕೂಡಲಿನಲ್ಲಿ ಶ್ರೀಮಂಟೇಸ್ವಾಮಿಯವರ ಕಂಡಾಯ ಮೆರವಣಿಗೆ ಶ್ರದ್ಧಾ ಭಕ್ತಿಯೊಂದಿಗೆ ವಿಜೃಂಭಣೆಯಿಂದ ನಡೆಯಿತು.

ಸಿದ್ದರ ಸೇವೆ ಹಿನ್ನೆಲೆಯಲ್ಲಿ ತ್ರಿವೇಣಿ ಸಂಗಮದ ತಟದಲ್ಲಿ ಮಂಟೇಸ್ವಾಮಿ ಕಂಡಾಯಕ್ಕೆ ಭಕ್ತಿ ಪೂರ್ವಕವಾಗಿ ಪೂಜೆ ಸಲ್ಲಿಸಲಾಯಿತು. ವಿವಿಧ ಬಗೆಯ ಹೂವುಗಳಿಂದ ಅಲಂಕೃತವಾಗಿದ್ದ ಮಂಟೇ ಸ್ವಾಮಿ ಕಂಡಾಯಕ್ಕೆ ತಿರುಮಕೂಡಲಿನ ಯಜಮಾನರು ಮೊದಲಿಗೆ ಪೂಜೆ ಸಲ್ಲಿಸಿ ನಂತರ ಮೆರವಣಿಗೆಗೆ ಚಾಲನೆ ನೀಡಿದರು.

ಕೊರಳಿಗೆ ಕೇಸರಿ ಬಣ್ಣದ ಶಾಲು ಹಾಕಿಕೊಂಡಿದ್ದ ಒಕ್ಕಲಿಗರ ಮಂಟೇಸ್ವಾಮಿ ಟ್ರಸ್ಟ್ ಸದಸ್ಯರು ಹಣೆಗೆ ವಿಭೂತಿ ಹಚ್ಚಿ ಕೊಂಡು ಭಕ್ತಿ ಭಾವ ಮೆರೆದರು. ನಂತರ ಮಂಟೇಸ್ವಾಮಿ ಕಂಡಾಯದ ಮೆರವಣಿಗೆ ಗ್ರಾಮದ ವಿವಿಧ ಬೀದಿಗಳಲ್ಲಿ ಸಂಚರಿಸಿತು. ಕಂಡಾಯ ಮೆರವಣಿಗೆ ಹಿನ್ನೆಲೆಯಲ್ಲಿ ಗ್ರಾಮದ ಮಹಿಳೆಯರು ಮನೆ ಮುಂದೆ ಬಣ್ಣ ಬಣ್ಣದ ರಂಗೋಲಿ ಹಾಕಿ ಕಂಡಾಯವನ್ನು ಬರಮಾಡಿಕೊಂಡರು. ಪ್ರತಿ ಮನೆಯಲ್ಲೂ ಕಂಡಾಯಕ್ಕೆ ಪೂಜೆ ಸಲ್ಲಿಸಲಾಯಿತು.

ಪ್ರತಿ 3 ವರ್ಷಕ್ಕೊಮ್ಮೆ ಸಿದ್ದರ ಸೇವೆ ಹಿನ್ನೆಲೆಯಲ್ಲಿ ಕಂಡಾಯ ನಡೆಸಿಕೊಂಡು ಬರಲಾಗುತ್ತಿದ್ದು, ಕಂಡಾಯ ಮೆರವಣಿಗೆ ನಂತರ ರಾತ್ರಿ ದೇವರಿಗೆ ಪ್ರಸಾದ ನೈವೇದ್ಯ ನಂತರ ದೇವರ ಗುಡ್ಡಪ್ಪರಿಗೆ ಕಜ್ಜಾಯ ತುಪ್ಪ ಊಣ ಬಡಿಸಲಿದ್ದು, ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಸುಮಾರು 5 ಸಾವಿರ ಮಂದಿಗೆ ಹೊಸ ತಿರುಮಕೂಡಲಿನಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ಟ್ರಸ್ಟ್ ಮುಖ್ಯಸ್ಥ ಶ್ರೀನಿವಾಸ್ ತಿಳಿಸಿದರು.

ಕಂಡಾಯ ಮೆರವಣಿಗೆಯಲ್ಲಿ ಯಜಮಾನ ಚಂದ್ರೇಗೌಡ, ಚಿಕ್ಕ ಯಜಮಾನ ಮಹದೇವಸ್ವಾಮಿ, ಪಿ.ಸ್ವಾಮಿನಾಥಗೌಡ, ಪಿಎಸ್‌ಸಿಎಸ್ ಮಾಜಿ ಉಪಾಧ್ಯಕ್ಷ ವೆಂಕಟೇಶ್, ಮಹದೇವಣ್ಣ, ಖಾಸಗಿ ಬಸ್ ಏಜೆಂಟ್ ಸಂಘದ ಅಧ್ಯಕ್ಷ ಶ್ರೀನಿವಾಸ್, ಬಸ್ ಮಾಲೀಕರಾದ ನಾಗರಾಜು, ರಮೇಶ್, ವಿನ್ ಟೈಲರ್ ಸೋಮಣ್ಣ, ಟಿ.ಸಿ.ಮಹದೇವಣ್ಣ, ಸ್ಟಾರ್ ಕಿಟ್ಟಣ್ಣ, ನೀಲ ಕಂಠೇಗೌಡ, ಗ್ರಾಪಂ ಮಾಜಿ ಸದಸ್ಯ ಕುಮಾರ್, ಆನಂದ್, ನಾಗರಾಜು, ಸಂದೇಶ್, ಟಿ.ಎಂ. ನಾಗಣ್ಣ, ಬಾಬು, ಫಣೀಶ್ ಕುಮಾರ್, ಮಂಜುನಾಥ್, ಜಯರಾಂ, ಕೆಇಬಿ ಕಿಟ್ಟಣ್ಣ, ನಂಜುಂಡ, ಮಣಿಕಂಠರಾಜ್ ಗೌಡ, ಮಣಿ ಮಾಲ್ಸ್, ಏಜೆಂಟ್ ಮಂಜು, ಜಯರಾಮು, ರಾಜೇಶ, ಕುಮಾರ, ಪಾರುಪತ್ತೇದಾರ್ ಚೇತನ್, ಅಂಬರೀಶ್, ಬುಂಡೆ ನಾಗೇಶ್, ಸುನೀಲ್, ತಿರುಮಕೂಡಲು ಲಕ್ಷ್ಮಣ ಸೇರಿದಂತೆ ಇತರರಿದ್ದರು.

ಆರೋಹಣ ಸೆಂಟ್ರಲ್ ಸ್ಕೂಲ್‌ಗೆ ಶೇ.90 ಫಲಿತಾಂಶ









ಬನ್ನೂರು, ಮೇ 5– ಇಲ್ಲಿಗೆ ಸಮೀಪದ ಸೋಮನಾಥಪುರದ ಕುಳ್ಳನ ಕೊಪ್ಪಲು ಗ್ರಾಮದಲ್ಲಿರುವ ಆರೋಹಣ ಸೆಂಟ್ರಲ್ ಸ್ಕೂಲ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.90ರಷ್ಟು ಫಲಿತಾಂಶ ಬಂದಿದೆ ಎಂದು ಕಾರ್ಯದರ್ಶಿ ಎನ್.ಎಂ.ರಾಮಚಂದ್ರ ತಿಳಿಸಿದರು.


ಪರೀಕ್ಷೆಯಲ್ಲಿ ಎಂ.ಎಸ್.ಚೈತನ್ಯ (599) 96%, ಪಿ.ಗಗನ (597) 96%, ಎಸ್.ರೋಹಿಣಿ (597) 96%, ಎಸ್. ಹಂಸವಾಣಿ (586) 93%, ವೈ.ಎನ್. ನಮ್ರತಾ (584) 92%, ಎಂ.ಬೃಂದಾ (567) 91%, ಜೆ.ಧನಿ (563) 90% ಅಂಕ ಪಡೆದು ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದು, 10 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ದ್ದಾರೆ. ಉತ್ತಮ ಅಂಕ ಪಡೆದ ಎಲ್ಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಅಭಿನಂದನೆ



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಚಾಣಕ್ಯ ವಿದ್ಯಾಸಂಸ್ಥೆಯಲ್ಲಿ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಈ ವೇಳೆ ಸಂಸ್ಥೆ ಅಧ್ಯಕ್ಷ ಯದುರಾಜ್, ಉಪಾಧ್ಯಕ್ಷ ಜಯಣ್ಣ, ಕಾರ್ಯದರ್ಶಿ ಮಹೇಶ್, ಖಜಾಂಚಿ ಅನಿಲ್, ನಿರ್ದೇಶಕರಾದ ಹರೀಶ್, ಧನಂಜಯ್, ಮುಖ್ಯ ಶಿಕ್ಷಕ ತಿಮ್ಮಯ್ಯ, ಶಿಕ್ಷಕರಾದ ಕುಮಾರಿ, ಶಿಲ್ಪ, ಅಶ್ವಿನಿ, ರಂಜಿತಾ, ತೇಜಸ್ವಿನಿ ವಿದ್ಯಾರ್ಥಿಗಳಿದ್ದರು.

ಲಾಟರಿ ಮೂಲಕ ಗ್ರಾಪಂ ಉಪಾಧ್ಯಕ್ಷರ ಆಯ್ಕೆ



ಚಕ್ಕೋಡಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ನಿಜಗುಣನಾಯಕ್ ಆಯ್ಕೆಯಾದರು.

ಹೆಚ್.ಡಿ.ಕೋಟೆ, ಮೇ 5– ತಾಲೂಕಿನ ಚಕ್ಕೋಡಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ನಿಜಗುಣನಾಯಕ್ ಲಾಟರಿ ಮೂಲಕ ಆಯ್ಕೆಯಾಗಿದ್ದಾರೆ.

ಒಟ್ಟು 20 ಸದಸ್ಯ ಬಲದ ಗ್ರಾಪಂ ಆವರಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ನಿಜಗುಣನಾಯಕ್ ಹಾಗೂ ವಾಸಂತಿ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಇಬ್ಬರೂ ತಲಾ 10 ಮತಗಳನ್ನು ಪಡೆದಿದ್ದರಿಂದ ಚುನಾವಣಾಧಿಕಾರಿ ಕೃಷ್ಣಯ್ಯ ಅವರು ಇಬ್ಬರ ಹೆಸರನ್ನು ಬರೆದು ಲಾಟರಿ ಎತ್ತಿದಾಗ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ನಿಜಗುಣನಾಯಕ್ ಜಯಗಳಿಸಿದರು.

ನೂತನ ಉಪಾಧ್ಯಕ್ಷ ನಿಜಗುಣ ನಾಯಕ್ ಮಾತನಾಡಿ, ಗ್ರಾಪಂನ ಎಲ್ಲಾ ಸದಸ್ಯರ ವಿಶ್ವಾಸ ಪಡೆದು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಶಾಸಕ ಅನಿಲ್ ಅವರ ಸಹಕಾರದೊಂದಿಗೆ ಸರ್ಕಾರದ ವಿಶೇಷ ಯೋಜನೆಗಳನ್ನು ತರುವ ಮೂಲಕ ಗ್ರಾಮಗಳಿಗೆ ಮೂಲಸೌಕರ್ಯ ಒದಗಿಸುವ ಭರವಸೆ ನೀಡಿದರು.

ನೂತನ ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ನೆರೆದಿದ್ದ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಈ ವೇಳೆ ಗ್ರಾಪಂ ಸದಸ್ಯರಾದ ಕಾಳಿಂಗೇಗೌಡ, ಪ್ರೇಮ, ಮೀನಾಕ್ಷಿ, ಪಾರ್ವತಿ, ಚಿಕ್ಕದಾಸು, ಕೆಂಚ, ಲಕ್ಷ್ಮಣನಾಯಕ, ಮುಖಂಡರಾದ ಫಯಾಜ್ ಪಾಷ, ಸಿ.ಕೆ.ರವಿಕುಮಾರ್, ರಾಜು, ನಾಗೇಶ್, ಯೋಗೇಶ, ರಾಜಣ್ಣ, ಕೃಷ್ಣ, ಚಿನ್ನಪ್ಪ, ಜಯರಾಮ, ಎಲ್ಲಪ್ಪ, ಅರುಣ್, ಸಿದ್ದರಾಜು, ಶಿವರಾಜು, ಶಿವಣ್ಣನಾಯಕ ಸೇರಿದಂತೆ ಇದ್ದರು.

ಜಾತಿಗಣತಿ ವೇಳೆ ಮಾದಿಗ ಎಂದೇ ಬರೆಸಿ

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮನವಿ



ಭೈರಾಪುರದಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಜಾಗೃತಿ ಮೂಡಿಸಿದರು.

ತಿ.ನರಸೀಪುರ, ಮೇ 5– ಸರ್ಕಾರದಿಂದ ಒಳ ಮೀಸಲಾತಿ ಜಾರಿಗಾಗಿ 3 ಹಂತಗಳಲ್ಲಿ ನಡೆಸುತ್ತಿರುವ ಪ.ಜಾತಿಗಳ 101 ಉಪ ಜಾತಿಗಳ ಸಮಗ್ರ ಸಮೀಕ್ಷೆ ವೇಳೆ ತಾಲೂಕಿನ ಸಮಸ್ತ ಮಾದಿಗ ಸಮಾಜದವರು ಪ.ಜಾತಿ ಪಟ್ಟಿಯಲ್ಲಿನ ಕ್ರಮ ಸಂಖ್ಯೆ 61ರಲ್ಲಿ "ಮಾದಿಗ" ಎಂದೇ ಕಡ್ಡಾಯವಾಗಿ ಬರೆಸಬೇಕೆಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮನವಿ ಮಾಡಿದರು.

ಪ.ಜಾತಿಗಳ ಜಾತಿಗಣತಿ ಹಿನ್ನೆಲೆಯಲ್ಲಿ ಪುರಸಭೆ ವ್ಯಾಪ್ತಿಯ ಭೈರಾಪುರದಲ್ಲಿ ಮಾದಿಗ ಸಮುದಾಯದವರಿಗೆ ಮಾದಿಗ ಜಾತಿ ಎಂದು ಬರೆಸುವಂತೆ ಜಾಗೃತಿ ಮೂಡಿಸುವ ಸಲುವಾಗಿ ಹಮ್ಮಿಕೊಂಡಿದ್ದ ಪ್ರಚಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ಕಳೆದ 35 ವರ್ಷಗಳ ಒಳ ಮೀಸಲಾತಿ ಹೋರಾಟವು ಈಗ ತಾರ್ಕಿಕ ಅಂತ್ಯಕ್ಕೆ ಬಂದಿದ್ದು, ಸರ್ಕಾರ ನಡೆಸುತ್ತಿರುವ ಜಾತಿ ಸಮೀಕ್ಷೆ ವೇಳೆ ಸಮುದಾಯದ ಬಂಧುಗಳು ತುಂಬಾ ಜಾಗೃತಿಯಿಂದ ಮಾಹಿತಿ ದಾಖಲಿಸಬೇಕಿದೆ. ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಿಂದ ನಮಗೆಲ್ಲ ಜೀವ ಬಂದಂತಾಗಿದೆ. ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿ ಮಾಡಲು ಬದ್ಧವಾಗಿದ್ದು, ನಿಖರ ಅಂಕಿ ಅಂಶಗಳಿಗಾಗಿ ದತ್ತಾಂಶ ಸಂಗ್ರಹಿಸಲು ಜಾತಿ ಸಮೀಕ್ಷೆ ನಡೆಸುತ್ತಿದೆ. ನಮ್ಮ ಮನೆಗಳಿಗೆ ಜಾತಿ ಸಮೀಕ್ಷೆ ಮಾಡಲು ಅಧಿಕಾರಿಗಳು ಬಂದಾಗ ನಾವು ಯಾವುದೇ ಅಂಜಿಕೆ ಇಲ್ಲದೆ ಮಾದಿಗ ಎಂದು ಬರೆಸಬೇಕಿದೆ. ಅಧಿಕಾರಿಗಳು ಮಾದಿಗ ಎಂದು ಬರೆಯುವವರೆಗೂ ಸ್ಥಳದಲ್ಲೇ ಹಾಜರಿರಬೇಕು. ಇಲ್ಲದಿದ್ದಲ್ಲಿ ವ್ಯತ್ಯಾಸಗಳಾಗಿ ಮಾದಿಗ ಜನಸಂಖ್ಯೆ ಇಳಿಮುಖವಾಗುವ ಸಾಧ್ಯತೆ ಇದೆ ಎಂದರು.

ರಾಜ್ಯದಲ್ಲಿ 30 ವರ್ಷಗಳಿಂದ ಸುದೀರ್ಘ ಹೋರಾಟ ನಡೆದಿದೆ. ಮೀಸಲಾತಿ ಜಾರಿಯಾಗಬೇಕೆಂಬ ಉದ್ದೇಶ ಹಾಗೂ ಕನಸು ಹೊಂದಲಾಗಿತ್ತು. ಸೌಲಭ್ಯ ವಂಚಿತವಾದ ಮಾದಿಗ ಸಮಾಜದಿಂದ ಒಳಮೀಸಲಾತಿ ಜಾರಿಗೆ ಹೋರಾಟ ನಡೆಯಿತು. ಆಂಧ್ರ, ತೆಲಂಗಾಣ ರಾಜ್ಯಗಳಲ್ಲಿಯೂ ಹೋರಾಟ ನಡೆದಿದ್ದು, ಹೋರಾಟಕ್ಕೆ ಹೆಚ್ಚು ಶಕ್ತಿ ಬಂದಿದೆ. ಜಿಲ್ಲೆ, ತಾಲೂಕು ಹೋರಾಟಗಾರರು, ಸಮಾಜದ ಮುಖಂಡರು, ನಿರಂತರವಾಗಿ ನಡೆಸಿದ್ದರಿಂದ ಸರ್ಕಾರ ಒಳ ಮೀಸಲಾತಿ ಜಾರಿಗೆ ಮುಂದಾಗಿದೆ ಎಂದರು.

ನಮ್ಮ ಸಮದಾಯ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಸರಿಯಾದ ಪ್ರಾಮುಖ್ಯತೆ ದೊರೆತಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ರಾಜಕೀಯ, ಸಾಮಾಜಿಕವಾಗಿ ಸಮುದಾಯ ಶಕ್ತರಾಗಲು ಈ ಸಮೀಕ್ಷೆ ಅತೀ ಮುಖ್ಯ, ಎಲ್ಲರೂ ಇದರಲ್ಲಿ ಪಾಲ್ಗೊಂಡು ಮಾದಿಗ ಎಂದು ಬರೆಸಿ ಎಂದರು.

ಎಲೆಕ್ಟ್ರಿಕಲ್ ಚಿಕ್ಕಲಿಂಗಯ್ಯ, ಬಸವರಾಜು, ಚಿಕ್ಕನಂಜಯ್ಯ, ಮುಖಂಡರಾದ ರಾಜೇಶ್, ಪ್ರಸನ್ನ, ತಬಲ ರಾಜು, ಮಲ್ಲೇಶ್, ಸಿದ್ದು, ತರು, ಶಂಕ್ರ, ಬಸವರಾಜು, ಶೋಭರಾಜ್, ಎಸ್.ಮಾದಯ್ಯ, ಮೂರ್ತಿ, ಟಿ. ಲಿಂಗಣ್ಣ, ಮಜಾಕ್ ರಾಜು, ಮಹದೇವ್, ಶ್ರೀನಿ ವಾಸ, ರಂಗಸ್ವಾಮಿ, ದಾಸಪ್ಪ, ನಾಗಮ್ಮ, ಪುಟ್ಟಮ್ಮ, ರಾಧಾ, ಭಾಗ್ಯ, ಪೂರ್ಣಿಮಾ, ಮರಮ್ಮ ಇತರರಿದ್ದರು.



ಹೈದರಾಬಾದ್‌ನಲ್ಲಿ ಮಳೆಯದ್ದೇ ಆಟ: ಪಂದ್ಯ ರದ್ದು

● ಉಭಯ ತಂಡಗಳಿಗೂ ಒಂದೊಂದು ಅಂಕ ● ಎಸ್‌ಆರ್‌ಹೆಚ್ ಟೂರ್ನಿಯಿಂದ ಹೊರಕ್ಕೆ, ಡೆಲ್ಲಿ ಪ್ಲೇ ಆಫ್ ಕನಸು ಜೀವಂತ

ಹೈದರಾಬಾದ್, ಮೇ 5 (ಸಂತೋಷ್)– ಇಲ್ಲಿನ ರಾಜೀವ್ ಗಾಂಧಿ ಅಂತರ ರಾಷ್ಟ್ರೀಯ ಮೈದಾನದಲ್ಲಿ ಸೋಮವಾರ ರಾತ್ರಿ ನಡೆದ ಸನ್‌ರೈಸರ್ ಹೈದರಾಬಾದ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ನಡುವಿನ ಪಂದ್ಯ ಯಾವುದೇ ಫಲಿತಾಂಶವಿಲ್ಲದೇ ಮಳೆಯಿಂದಾಗಿ ರದ್ದುಗೊಂಡಿತು.

ಕಪ್ ಗೆಲ್ಲುವ ಗುರಿಯೊಂದಿಗೆ ಪ್ರಸಕ್ತ ಸಾಲಿನ ಐಪಿಎಲ್ ಟೂರ್ನಿ ಆರಂಭಿಸಿದ್ದ ಸನ್‌ರೈಸರ್ ಹೈದರಾಬಾದ್ ಆಡಿರುವ 11 ಪಂದ್ಯಗಳಲ್ಲಿ 3 ಜಯ, 7 ಸೋಲು, 1 ಡ್ರಾ ದೊಂದಿಗೆ 7 ಅಂಕಗಳಿಸಿ ಟೂರ್ನಿಗೆ ವಿದಾಯ ಹೇಳಿತು. ಮತ್ತೊಂದೆಡೆ ಆಡಿರುವ 11 ಪಂದ್ಯಗಳ ಪೈಕಿ 6 ಜಯ, 4 ಸೋಲು, 1 ಡ್ರಾದೊಂದಿಗೆ 13 ಅಂಕ ಗಳಿಸಿರುವ ಡೆಲ್ಲಿ ಕ್ಯಾಪಿಟಲ್ಸ್ ಅಂಕ ಪಟ್ಟಿಯಲ್ಲಿ 5ನೇ ಸ್ಥಾನ ಅಲಂಕರಿಸಿದ್ದು, ಪ್ಲೇ ಆಫ್ ಆಸೆ ಜೀವಂತವಾಗಿರಿಸಿಕೊಂಡಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 133 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು.



ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕನ್ನಡಿಗ ಕರುಣ್ ನಾಯರ್ ಮೊದಲ ಎಸೆತದಲ್ಲೇ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ಫಾಫ್ ಡುಪ್ಲೆಸಿಸ್ 3, ಅಭಿಷೇಕ್ ಪೊರೆಲ್ ಒಂದು ಬೌಂಡರಿ ಒಳಗೊಂಡ 8 ರನ್ ಗಳಿಸಿ ಬಹುಬೇಗ ನಿರ್ಗಮಿಸಿ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು. ಬಳಿಕ ಬಂದ ಕೆ.ಎಲ್.ರಾಹುಲ್ 10, ನಾಯಕ ಅಕ್ಷರ್ ಪಟೇಲ್ 6 ರನ್ ಗಳಿಸಿ ಔಟಾದರು. ಆಗ ತಂಡದ ಮೊತ್ತ 29 ರನ್‌ಗೆ 5 ವಿಕೆಟ್ ಆಗಿತ್ತು. ಈ ವೇಳೆ ಜೊತೆಯಾದ ಟ್ರಿಸ್ಟನ್ ಸ್ಟಬ್ಸ್ ಹಾಗೂ ವಿಪ್ರಾಜ್ ನಿಗಮ್ 6ನೇ ವಿಕೆಟ್‌ಗೆ 33 ರನ್ ಜೊತೆಯಾಟ ವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ತಲಾ 1 ಸಿಕ್ಸರ್, ಬೌಂಡರಿ ಒಳಗೊಂಡ 18 ರನ್ ಗಳಿಸಿದ್ದ ವಿಪ್ರಾಜ್ ನಿಗಮ್ ವಿಕೆಟ್ ಒಪ್ಪಿಸಿ ಹೊರ ನಡೆದರು. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ಟ್ರಿಸ್ಟನ್ ಸ್ಟಬ್ಸ್ 36 ಎಸೆತಗಳಲ್ಲಿ 4 ಬೌಂಡರಿ ಒಳಗೊಂಡ 41 ರನ್ ಗಳಿಸಿ ಔಟಾದರು. ನಂತರ ಬಂದ ಅಶುತೋಶ್ ಶರ್ಮಾ 26 ಎಸೆತಗಳಲ್ಲಿ 3 ಸಿಕ್ಸರ್, 2 ಬೌಂಡರಿ ಒಳಗೊಂಡ 41 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಹೈದರಾಬಾದ್ ಪರ ಪ್ಯಾಟ್ ಕಮ್ಮಿನ್ಸ್ 3, ಜಯದೇವ್ ಉನಾದ್ಕಟ್, ಹರ್ಷಲ್ ಪಟೇಲ್ ಹಾಗೂ ಈಶನ್ ಮಲಿಂಗಾ ತಲಾ ಒಂದೊಂದು ವಿಕೆಟ್ ಪಡೆದರು.

ಮೊದಲ ಇನ್ನಿಂಗ್ಸ್ ಮುಗಿದ ತಕ್ಷಣ, ಹೈದರಾಬಾದ್‌ನಲ್ಲಿ ಮಳೆ ಸುರಿಯಲು ಪ್ರಾರಂಭಿಸಿತು. ಅಂತಿಮವಾಗಿ ಅಂಪೈರ್‌ಗಳು ಪಂದ್ಯವನ್ನು ರದ್ದುಗೊಳಿಸಲು ನಿರ್ಧರಿಸಿದರು. ಇದರೊಂದಿಗೆ ಉಭಯ ತಂಡಗಳು ಒಂದೊಂದು ಅಂಕವನ್ನು ಹಂಚಿಕೊಂಡವು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಬೆಂಗಳೂರು	11	8	3	0	16
ಪಂಜಾಬ್	11	7	3	1	15
ಮುಂಬೈ	11	7	4	0	14
ಗುಜರಾತ್	10	7	3	0	14
ಡೆಲ್ಲಿ	11	6	4	1	13
ಕೋಲ್ಕತ್ತಾ	11	5	5	1	11
ಲಕ್ನೋ	11	5	6	0	10
ಹೈದರಾಬಾದ್	11	3	7	1	7
ರಾಜಸ್ಥಾನ್	12	3	9	0	6
ಚೆನ್ನೈ	11	2	9	0	4

ಇಂದಿನ ಪಂದ್ಯ

ಮುಂಬೈ ಇಂಡಿಯನ್ಸ್
V/S
ಗುಜರಾತ್ ಟೈಟಾನ್

ಸಮಯ: ಸಂಜೆ 7.30

ಸ್ಥಳ : ವಾಂಖೆಡೆ ಕ್ರೀಡಾಂಗಣ, ಮುಂಬೈ

ಸಿಎಂ ಸಚಿವಾಲಯದಲ್ಲಿನ 16 ಸಿಬ್ಬಂದಿಗೆ ಗೇಟ್‌ಪಾಸ್

ಬೆಂಗಳೂರು, ಮೇ 5– ಮುಖ್ಯಮಂತ್ರಿಗಳ ಸಚಿವಾಲಯದ ಸಿಬ್ಬಂದಿ ವಿರುದ್ಧ ಅನೇಕ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಮೇಜರ್ ಸರ್ಜರಿ ಮಾಡಲಾಗಿದ್ದು, 16 ಸಿಬ್ಬಂದಿಗೆ ಮೂಲ ಇಲಾಖೆಗೆ ತೆರಳುವಂತೆ ಸೂಚನೆ ನೀಡಲಾಗಿದೆ.

ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಅನ್ಯ ಸೇವೆಯ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಮಧು ಎನ್, ನಯನ ಕುಮಾರಿ ಬಿ.ಎಲ್, ನವೀನ್ ಕುಮಾರ್, ಬಿ.ಎನ್, ಗೀತಾ ಎನ್, ಸವಿತಾ ಟಿ.ಡಿ, ಪರಮೇಶ್.ಹೆಚ್ ಮತ್ತು ಗಂಗಾಧರ ಎನ್.ಆರ್ ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಿದ್ದಾರೆ.

ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಶೈಲಜಾ ಟಿ.ಎಸ್, ಶ್ರೀಶೈಲ ಸಿ. ಲಟ್ಟಿ ರಾಮಯ್ಯ ಎನ್, ನವೀನ್‌ಕುಮಾರ್ ಎಂ.ಆರ್, ಅನ್ನಪೂರ್ಣ ಎಂಡಿ, ರಮ್ಯ ಜಿ, ಉಷಾ ಜಿ.ಆರ್, ಕುಮಾರಿ ಖುರ್ಷಿದ್ ಮತ್ತು ರಿಂಸಾಜ್.ಎಸ್ ಅವರ ಗುತ್ತಿಗೆ ಆದೇಶವನ್ನು ರದ್ದುಗೊಳಿಸಲಾಗಿದೆ.

ಬೆಂಗಳೂರಲ್ಲಿ ಮಧುಮೇಹ ನಿಯಂತ್ರಣ ಕುರಿತು ಸಮಾವೇಶ
ಸಕ್ಕರೆ ಕಾಯಿಲೆ ಹತೋಟಿಗೆ ಅಗತ್ಯ ವೈದ್ಯಕೀಯ ಕ್ರಮಗಳ ಬಗ್ಗೆ ಚರ್ಚೆ

ಮೈಸೂರು, ಮೇ 5(ಪಿಎಂ)– ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಆಲ್ ಅಬೌಟ್ ಡಯಾಬಿಟಿಸ್ ಕೇರ್ (ಎಡಿಸಿ, ಮಧುಮೇಹ ನಿಯಂತ್ರಣ) ಕುರಿತ ಎರಡು ದಿನಗಳ ಸಮಾವೇಶದಲ್ಲಿ ಮಧುಮೇಹ ನಿಯಂತ್ರಣ ಸಂಬಂಧದ ಪ್ರವೃತ್ತಿ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಬೆಳವಣಿಗೆಗಳ ಕುರಿತಂತೆ ಬೆಳಕು ಚೆಲ್ಲಲಾಯಿತು.

ಬೆಂಗಳೂರಿನ ಬಸವೇಶ್ವರನಗರದ ಡಾ.ಅರವಿಂದ್ ಡಯಾಬಿಟಿಸ್ ಸೆಂಟರ್ ವತಿಯಿಂದ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ (ಮೇ 3, 4) 650ಕ್ಕೂ ಹೆಚ್ಚು ವೈದ್ಯರು ಪಾಲ್ಗೊಂಡಿದ್ದರು. ಅಲ್ಲದೆ, ರಾಷ್ಟ್ರದ ಮಟ್ಟದ 75 ತಜ್ಞರು ಮಧುಮೇಹ ನಿಯಂತ್ರಣ ಕುರಿತು ವಿಷಯಗಳನ್ನು ಮಂಡಿಸಿದರು.

ಮಧುಮೇಹ ನಿಯಂತ್ರಣದಲ್ಲಿನ ಇತ್ತೀಚಿನ ಪ್ರವೃತ್ತಿಗಳು ಮತ್ತು ಉತ್ತಮ ಅಭ್ಯಾಸಗಳ ಬಗ್ಗೆ ಸಮಗ್ರ ಚರ್ಚಿಸಲು ಸಮಾವೇಶ ವೇದಿಕೆ ಕಲ್ಪಿಸುವಲ್ಲಿ ಯಶಸ್ವಿಯಾಯಿತು. ಈ ವ್ಯಾಧಿ ನಿಯಂತ್ರಣ ಸಂಬಂಧ ವೈದ್ಯಕೀಯ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸುವ ತಂತ್ರಗಳ ಕುರಿತು ಗೋಷ್ಠಿಗಳು ನಡೆದವು.



ಬೆಂಗಳೂರಿನಲ್ಲಿ ನಡೆದ ಎಡಿಸಿ ಸಮಾವೇಶದಲ್ಲಿ ಚೆನ್ನೈನ ಡಾ.ಎ.ರಾಮಚಂದ್ರನ್ ಡಯಾಬಿಟಿಸ್ ಹಾಸ್ಪಿಟಲ್‌ನ ಅಧ್ಯಕ್ಷ ಪ್ರೊ.(ಡಾ) ಎ.ರಾಮಚಂದ್ರನ್ ಅವರನ್ನು ಡಾ.ಅರವಿಂದ ಜಗದೀಶ ಸನ್ಮಾನಿಸಿದರು. ಆರ್‌ಎಸ್‌ಎಸ್‌ಡಿಐ ಮಾಜಿ ಅಧ್ಯಕ್ಷ ಡಾ.ಸಿ.ಹೆಚ್.ವಸಂತಕುಮಾರ್, ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಎ.ಶೇಖರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸಮಾವೇಶ ಆಯೋಜಿಸಿ ಮಧುಮೇಹ ನಿಯಂತ್ರಣ ಕುರಿತು ಚರ್ಚಿಸಲು ಉತ್ತಮ ವೇದಿಕೆ ಕಲ್ಪಿಸಿದ್ದಕ್ಕಾಗಿ ಖ್ಯಾತ ಮಧುಮೇಹ ತಜ್ಞರೂ ಆದ ಡಾ.ಅರವಿಂದ್ ಡಯಾಬಿಟಿಸ್ ಸೆಂಟರ್ ಸಂಸ್ಥಾಪಕ ಡಾ.ಅರವಿಂದ್ ಜಗದೀಶ ಅವರ ಕುರಿತು ಸಮಾವೇಶದಲ್ಲಿ ಪಾಲ್ಗೊಂಡಿದ್ದವರು ಶ್ಲಾಘನೆ ವ್ಯಕ್ತಪಡಿಸಿದರು. ಮಧುಮೇಹ ಹತೋಟಿ ಸಂಬಂಧ ವೈದ್ಯಕೀಯ ಶಿಕ್ಷಣದ ಪ್ರಗತಿಗೆ ಈ ಸಮಾವೇಶ ಮಹತ್ವದ ಕೊಡುಗೆಯಾಗಿದೆ ಎಂದು ಅಭಿಪ್ರಾಯಗಳು ವ್ಯಕ್ತವಾದವು.

ಸಮಾವೇಶದಲ್ಲಿ ಚೆನ್ನೈನ ಡಾ.ಎ.ರಾಮಚಂದ್ರನ್ ಡಯಾಬಿಟಿಸ್ ಹಾಸ್ಪಿಟಲ್‌ನ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಪ್ರೊ.(ಡಾ) ಎ.ರಾಮಚಂದ್ರನ್ ಅವರನ್ನು ಡಾ.ಅರವಿಂದ ಜಗದೀಶ ಸನ್ಮಾನಿಸಿದರು. ರಿಸರ್ಚ್ ಸೊಸೈಟಿ ಫಾರ್ ಸ್ಟಡಿ ಆಫ್ ಡಯಾಬಿಟಿಸ್ ಇನ್ ಇಂಡಿಯಾ (ಆರ್‌ಎಸ್‌ಎಸ್‌ಡಿಐ) ಮಾಜಿ ಅಧ್ಯಕ್ಷ ಡಾ.ಸಿ.ಹೆಚ್.ವಸಂತಕುಮಾರ್, ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಎ.ಶೇಖರ್ ಸೇರಿದಂತೆ ತಜ್ಞವೈದ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಪೂಂಚ್‌ನಲ್ಲಿ ಉಗ್ರರ ಅಡಗುತಾಣಗಳಲ್ಲಿ ಐಇಡಿ, ವೈರ್‌ಲೆಸ್ ರೇಡಿಯೋ ಸೆಟ್‌ಗಳು ವಶಕ್ಕೆ

ಮೆಂಧರ್/ಜಮ್ಮು: ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಭಾರತೀಯ ಸೇನಾ ಪಡೆಗಳು ಭಯೋತ್ಪಾದಕರ ಅಡಗುತಾಣಗಳನ್ನು ಪತ್ತೆಹಚ್ಚಿದ್ದು, 5 ಸುಧಾರಿತ ಸ್ಫೋಟಕ ಸಾಧನಗಳು (ಐಇಡಿಗಳು) ಮತ್ತು ಎರಡು ವೈರ್‌ಲೆಸ್ ರೇಡಿಯೋ ಸೆಟ್‌ಗಳನ್ನು ವಶಪಡಿಸಿಕೊಂಡಿವೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಅರ್ಧ ಕೆಜಿಯಿಂದ ಐದು ಕೆಜಿ ತೂಕದ ಬಳಸಲು ಸಿದ್ಧವಾಗಿದ್ದ ಐಇಡಿಗಳನ್ನು ಸ್ಥಳದಲ್ಲೇ ನಾಶಪಡಿಸಲಾಗಿದೆ. ಭಾನುವಾರ ಸಂಜೆ ಸುರಂಕೋಟ್‌ನ ಮಹೋರ್ಟೆ ಪ್ರದೇಶದ ಸುರಂತಲ್‌ನಲ್ಲಿ ಸೇನೆ ಮತ್ತು ಜಮ್ಮು–ಕಾಶ್ಮೀರ ಪೊಲೀಸರು ನಡೆಸಿದ ವಿಶೇಷ ಜಂಟಿ ಕಾರ್ಯಾಚರಣೆಯಲ್ಲಿ ಉಗ್ರರ ಅಡಗು ತಾಣಗಳನ್ನು ಪತ್ತೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಸ್ಟೀಲ್ ಬಕೆಟ್‌ನಲ್ಲಿ 2 ಹಾಗೂ ಟಿಫಿನ್ ಬಾಕ್ಸ್‌ಗಳಲ್ಲಿ ಮೂರು ಐಡಿಗಳನ್ನು ಇರಿಸಿರುವುದು ಕಂಡು ಬಂದಿದೆ. ಇದಲ್ಲದೆ, ಎರಡು ವೈರ್‌ಲೆಸ್ ಸೆಟ್‌ಗಳು, ಯೂರಿಯಾ ಹೊಂದಿರುವ ಐದು ಪ್ಯಾಕೆಟ್‌ಗಳು, ಐದು ಲೀಟರ್ ಗ್ಯಾಸ್ ಸಿಲಿಂಡರ್ 1, ಒಂದು ಬೈನಾಕ್ಯುಲರ್, ಮೂರು ಕ್ಯಾಪ್‌ಗಳು, ಮೂರು ಕಂಬಳಿಗಳು, ಪ್ಯಾಂಟ್ ಮತ್ತು ಪಾತ್ರೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಉಚಿತ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ

ಮೈಸೂರು, ಮೇ 5– ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರ ಸಿಪೆಟ್ ಸಂಸ್ಥೆಯು ಭಾರತ ಸರ್ಕಾರದ ರಸಾಯನ ಪೆಟ್ರೋರಸಾಯನ ಮತ್ತು ರಸಗೊಬ್ಬರ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾಗಿದ್ದು, ಈ ಸಂಸ್ಥೆಯು ದೇಶದ ಪಾಲಿಮರ್, ಪೆಟ್ರೋಕೆಮಿಕಲ್ಸ್, ಪ್ಲಾಸ್ಟಿಕ್ಸ್ ಕೈಗಾರಿಕೆಗಳ ಕೌಶಲ್ಯ ಬೇಡಿಕೆಗೆ ಅನುಗುಣವಾಗಿ ಮಾನವ ಸಂಪನ್ಮೂಲಕ್ಕೆ ಶೈಕ್ಷಣಿಕ ತರಬೇತಿ ನೀಡಲಾಗುತ್ತಿದೆ ಮತ್ತು CIPET ಕರ್ನಾಟಕದ ವಿದ್ಯಾರ್ಥಿಗಳು ಪಾಲಿಮರ್ ಕೈಗಾರಿಕಾ ವಲಯದಲ್ಲಿ ಜಾಗತಿಕವಾಗಿ ಗುರುತಿಸಲ್ಪಟ್ಟಿದ್ದಾರೆ.

ಏಪ್ರಿಲ್ 26ರಿಂದ ಸಿಪೆಟ್ ಮೈಸೂರು ಕಾಲೇಜ್‌ನಲ್ಲಿ ಪಿಯುಸಿಯಲ್ಲಿ ಉತ್ತೀರ್ಣರಾದವರಿಗೂ ಹಾಗೂ ಅನುತ್ತೀರ್ಣರಾದವರಿಗೂ ಉಚಿತ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಕರ್ನಾಟಕದ ವಿದ್ಯಾರ್ಥಿಗಳು ಈ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದ ಪ್ರಯೋಜನ ಪಡೆದು ತಮ್ಮ ವೃತ್ತಿ ಜೀವನವನ್ನು ರೂಪಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ 0821–2510618/9480253024/9791431827 ನ್ನು ಸಂಪರ್ಕಿಸಬಹುದು ಎಂದು ಸಿಪೆಟ್ ಸಂಸ್ಥೆಯ ಪ್ರಿನ್ಸಿಪಾಲ್ ನಿರ್ದೇಶಕರು ಮತ್ತು ಮುಖ್ಯಸ್ಥ ಶ್ರೀಕಾಂತ್ ಶಿರಾಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿರುವ ಪಾಕ್, ಬಾಂಗ್ಲಾದೇಶಿಯರ ಗಡಿಪಾರಿಗೆ ಬಿಜೆಪಿ ಆಗ್ರಹ

● ಬಿಜೆಪಿ ನಿಯೋಗದಿಂದ ಇಂದು ಜಿಲ್ಲಾಧಿಕಾರಿಗೆ ಮನವಿ ● ಪಾಕ್, ಬಾಂಗ್ಲಾ ಪ್ರಜೆಗಳಿದ್ದರೆ ಸಾರ್ವಜನಿಕರು ಮಾಹಿತಿ ನೀಡಲು ಕೋರಿಕೆ ● ಇಂದಿನಿಂದ ಮೂರು ದಿನ ಸಹಿ ಸಂಗ್ರಹ; ಅಕ್ರಮ ವಲಸಿಗರ ಗಡಿಪಾರಿಗೆ ಮೀನಾಮೇಷ ಆರೋಪ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ಶಾಸಕ ಟಿ.ಎಸ್.ಶ್ರೀವತ್ಸ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮೇ 5(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ನೆಲೆಸಿರುವ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದ ಪ್ರಜೆಗಳನ್ನು ಪತ್ತೆ ಹಚ್ಚಿ ಅವರನ್ನು ದೇಶದಿಂದ ಗಡಿಪಾರು ಮಾಡುವಂತೆ ನಾಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಮಾಜಿ ಶಾಸಕರೂ ಆದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ತಿಳಿಸಿದ್ದಾರೆ.

ನಗರ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಂಬಂಧ ನಾಳೆ ಬೆಳಿಗ್ಗೆ 10.30 ಗಂಟೆಗೆ ನಗರದ ತಿ.ನರಸೀಪುರ ರಸ್ತೆಯ ಹಳೆ ಹಾಲಿನ ಡೈರಿ ಬಳಿಯಿಂದ ಜಿಲ್ಲಾಧಿಕಾರಿ ಕಚೇರಿಗೆ ಕಾಲ್ನಡಿಗೆಯಲ್ಲಿ ತೆರಳಿ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಪಹಲ್ಗಾಮ್‌ನಲ್ಲಿ ಉಗ್ರರು ಭಾರತೀಯರ ಮಾರಣಹೋಮ ನಡೆಸಿದ ನಂತರ ಭಯೋತ್ಪಾದನೆ ದಮನ ಮಾಡಲು ಪ್ರಧಾನಮಂತ್ರಿ ನರೇಂದ್ರ ಮೋದಿ ನಿರ್ಧರಿಸಿದ್ದಾರೆ. ಇದೇ ವೇಳೆ ಪಾಕಿಸ್ತಾನವನ್ನು ಬಗ್ಗು ಬಡಿಯಲು ರಾಜತಾಂತ್ರಿಕವಾಗಿ ಹಲವು ಕ್ರಮ ಕೈಗೊಳ್ಳಲಾಗಿದೆ. ಭಾರತದಲ್ಲಿ ನೆಲೆಸಿರುವ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಪ್ರಜೆಗಳನ್ನು ದೇಶದಿಂದ ಗಡಿಪಾರು ಮಾಡುವುದು ಕೇಂದ್ರ ಸರ್ಕಾರ ಉಗ್ರರ ವಿರುದ್ಧ ಕೈಗೊಂಡಿರುವ ಕ್ರಮಗಳಲ್ಲಿ ಒಂದಾಗಿದೆ ಎಂದು ನಾಗೇಂದ್ರ ತಿಳಿಸಿದರು.

ದೇಶದ ಭದ್ರತೆ ದೃಷ್ಟಿಯಿಂದ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದ ಪ್ರಜೆಗಳನ್ನು ಪತ್ತೆ ಮಾಡಿ ಅವರ ದೇಶಕ್ಕೆ ವಾಪಸು ಕಳುಹಿಸುವಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ತಾಕೀತು ಮಾಡಿದೆ ಎಂದು ಹೇಳಿದರು.

ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದ ಪ್ರಜೆಗಳನ್ನು ದೇಶದಿಂದ ಗಡಿಪಾರು ಮಾಡಲಾಗುತ್ತಿದೆ. ಆದರೆ ಕರ್ನಾಟಕ ಸೇರಿದಂತೆ ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಮಾತ್ರ ಈ ಕಾರ್ಯಾಚರಣೆ ನಡೆಯುತ್ತಿಲ್ಲ. ಪಾಕಿಸ್ತಾನ ಹಾಗೂ ಬಾಂಗ್ಲಾದೇಶದ ಪ್ರಜೆಗಳನ್ನು ಪತ್ತೆ ಮಾಡಿ ದೇಶದಿಂದ ಗಡಿಪಾರು ಮಾಡುತ್ತೇವೆ ಎಂದು ಬಾಯಿ ಮಾತಿನಲ್ಲಿ ಹೇಳುತ್ತಿದ್ದಾರೆಯೇ ಹೊರತು ಆ ಮಾತು ಕಾರ್ಯಗತಗೊಳ್ಳುತ್ತಿಲ್ಲ ಎಂದು ದೂರಿದರು.

ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇಂಚಿಂಚು ಜಾಗ ಹುಡುಕಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಪ್ರಜೆಗಳನ್ನು ಗಡಿಪಾರು ಮಾಡಲಾಗುತ್ತಿದೆ ಎಂದು ನಾಗೇಂದ್ರ ಹೇಳಿದರು.

ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿರುವ ಈ ದೇಶದ ಪ್ರಜೆಗಳನ್ನು ಪತ್ತೆ ಮಾಡಿ ಅವರ ದೇಶಕ್ಕೆ ವಾಪಸು ಕಳುಹಿಸಲು ಕ್ರಮ ಕೈಗೊಳ್ಳುವಂತೆ ನಾಳೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸುತ್ತೇವೆ ಎಂದು ನಾಗೇಂದ್ರ ತಿಳಿಸಿದರು.

ಅಲ್ಲದೆ ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ನಾಳೆಯಿಂದ ಮೂರು ದಿನ ಸಹಿ ಸಂಗ್ರಹ ಚಳವಳಿ ನಡೆಸಲಾಗುವುದು.

ತಮ್ಮ ಮನೆ ಅಕ್ಕಪಕ್ಕದಲ್ಲಿರುವ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಪ್ರಜೆಗಳ ಬಗ್ಗೆ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು. ಈ ಮೂಲಕ ಉಗ್ರರ ದಮನಕ್ಕೆ ಕೇಂದ್ರ ಸರ್ಕಾರ ಕೈಗೊಂಡಿರುವ ಕ್ರಮಗಳಿಗೆ ದೇಶದ ಜನರು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ತಮ್ಮ ತಮ್ಮ ವಾರ್ಡ್‌ನಲ್ಲಿರುವ ಈ ಎರಡು ದೇಶದ ಪ್ರಜೆಗಳನ್ನು ಪತ್ತೆ ಮಾಡಿ, ಪೊಲೀಸ್ ಇಲಾಖೆಗೆ ತಿಳಿಸಬೇಕು ಎಂದು ಬಿಜೆಪಿ ಕಾರ್ಯಕರ್ತರಿಗೂ ತಾಕೀತು ಮಾಡಲಾಗಿದೆ ಎಂದು ನಾಗೇಂದ್ರ ತಿಳಿಸಿದರು.

ಕರ್ನಾಟಕದಲ್ಲಿ 18 ಸಾವಿರ ಅಕ್ರಮ ವಾಸಿಗಳಿದ್ದಾರೆ

ಕರ್ನಾಟಕದಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ 18 ಸಾವಿರ ಜನರಿದ್ದಾರೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಇದೇ ವೇಳೆ ತಿಳಿಸಿದರು.

ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ ಶಾಸಕ ಮಾನಪ್ಪ ವಜ್ಜಲ್ ಕೇಳಿದ ಪ್ರಶ್ನೆಗೆ, ಕರ್ನಾಟಕದಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶದ 200 ಜನರಿದ್ದಾರೆ ಎಂದು ಸರ್ಕಾರ ಮಾಹಿತಿ ನೀಡಿತ್ತು. ಇದು ಗಂಭೀರ ವಿಚಾರವಾದ ಹಿನ್ನೆಲೆಯಲ್ಲಿ ಅಧಿವೇಶನದ ಕೊನೆ ದಿನ ಈ ವಿಚಾರದ ಚರ್ಚೆಗೆ ಸಮಯ ಮೀಸಲಿಡಲಾಗುವುದು ಎಂದು ಸ್ಪೀಕರ್ ತಿಳಿಸಿದ್ದರು. ಆದರೆ ಈ ಬಗ್ಗೆ ಚರ್ಚೆಯೇ ಆಗಲಿಲ್ಲ, ಸರ್ಕಾರ ಕೂಡ ಈ ಬಗ್ಗೆ ಮಾಹಿತಿಯನ್ನು ನೀಡಲಿಲ್ಲ ಎಂದು ಆರೋಪಿಸಿದರು.

ಪ್ರತಿ ಜಿಲ್ಲೆಯಲ್ಲಿ ಕನಿಷ್ಠ 500 ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಜನರು ವಾಸವಿದ್ದಾರೆ. ಈಗಲಾದರೂ ರಾಜ್ಯ ಸರ್ಕಾರ ಈ ದೇಶಗಳ ಜನರನ್ನು ಪತ್ತೆ ಮಾಡುವ ಕಾರ್ಯಾಚರಣೆ ಕೈಗೊಂಡು, ಅವರ ದೇಶಕ್ಕೆ ಗಡಿಪಾರು ಮಾಡಬೇಕು ಎಂದು ಶ್ರೀವತ್ಸ ಆಗ್ರಹಿಸಿದರು.

ಕರ್ನಾಟಕದಲ್ಲಿ ಸುಪಾರಿ ಹತ್ಯೆಗಳು ಹೆಚ್ಚಾಗುತ್ತಿವೆ. ರಾಜ್ಯದಲ್ಲಿರುವುದು ಸುಪಾರಿ ಸರ್ಕಾರ! ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಸಾಧ್ಯವಾಗದೆ ಗೃಹ ಇಲಾಖೆ ಸತ್ತಿದೆ. ತಾವು ಏನೇ ಮಾಡಿದರೂ ಬಚಾವಾಗಬಹುದು ಎಂದು ಸಮಾಜಘಾತುಕ ಶಕ್ತಿಗಳಲ್ಲಿ ಧೈರ್ಯ ಬಂದಿದೆ. ಪೊಲೀಸ್ ಇಲಾಖೆ ನಿಷ್ಕ್ರಿಯವಾಗಿ ಕಾರ್ಯ ನಿರ್ವಹಿಸಲು ಸರ್ಕಾರ ಬಿಡುತ್ತಿಲ್ಲ ಎಂದು ದೂರಿದರು.

ಮೈಸೂರಿನಲ್ಲಿ ಮೊನ್ನೆ ವಕ್ಫ್ ವಿರೋಧಿ ಸಮಾವೇಶದಲ್ಲಿ ಸುಮಾರು 40 ಸಾವಿರ ಜನರು ಭಾಗವಹಿಸಿದ್ದರು. ಇಷ್ಟೊಂದು ಪ್ರಮಾಣದ ಜನರು ಸೇರಲು ಪೊಲೀಸ್ ಇಲಾಖೆ ಹೇಗೆ ಅನುಮತಿ ನೀಡಿತು ಎಂದು ಪ್ರಶ್ನಿಸಿದ ಶ್ರೀವತ್ಸ, ಅಕಸ್ಮಾತ್ ಆ ವೇಳೆ ಏನಾದರೂ ಅಹಿತಕರ ಘಟನೆ ನಡೆದಿದ್ದರೆ ಅದಕ್ಕೆ ಯಾರು ಹೊಣೆ ಎಂದು ಮರು ಪ್ರಶ್ನಿಸಿದರು.

ಯಾವುದೇ ರೀತಿಯ ಆಯುಧ ಕಾರಿನಲ್ಲಿ ಕೊಂಡೊಯ್ಯಬಾರದು ಎಂದು ಪೊಲೀಸರು ಹತ್ಯೆಯಾದ ಸುಹಾಸ್ ಶೆಟ್ಟಿಗೆ ತಾಕೀತು ಮಾಡಿದ್ದರು. ತನಗೆ ಪ್ರಾಣ ಬೆದರಿಕೆ ಇರುವ ಕಾರಣ ಕಾರಿನಲ್ಲಿ ಆಯುಧ ಇಟ್ಟುಕೊಳ್ಳುತ್ತೇನೆ ಎಂದು ಸುಹಾಸ್ ಶೆಟ್ಟಿ ಹೇಳಿದರೂ ಪೊಲೀಸರು ಒಪ್ಪಲಿಲ್ಲ. ಈ ಮೂಲಕ ಸುಹಾಸ್ ಶೆಟ್ಟಿ ಹತ್ಯೆಗೆ ಪೊಲೀಸರೇ ಕಾರಣಕರ್ತರಾಗಿದ್ದಾರೆ ಎಂದು ಶ್ರೀವತ್ಸ ದೂರಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ಗಿರಿಧರ್, ಕಾರ್ಯದರ್ಶಿ ಮೋನಿಕಾ, ಜಿಲ್ಲಾ ವಕ್ತಾರ ದಯಾನಂದ್ ಪಟೇಲ್, ನಗರ ಸಂಚಾಲಕ ಮಹೇಶ್ ರಾಜ್ ಅರಸ್, ಸಹ ಸಂಚಾಲಕ ಸಂತೋಷ್ ಕುಮಾರ್, ಎಸ್ ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಪರಮಾನಂದ, ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ಶೈಲೇಂದ್ರ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಹಿಟ್ (ಕ) + ಹಿಟ್ (ತೆ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ರೇಡ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಟ್ರೋ (ತ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ನಾನ್ ಪೋಲಿ (ಕ) + ರಿಕ್ಷಾ ಚಾಲಕ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೇ 20ರಂದು ಅಂಗನವಾಡಿ ಕೇಂದ್ರಗಳ ಬಂದ್



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಖಜಾಂಚಿ ಲೀಲಾವತಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮೇ 5(ಎಂಟಿವೈ)– ಅಂಗನವಾಡಿ ನೌಕರರನ್ನು ಕಾಯಂ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೇ 20ರಂದು ಅಂಗನವಾಡಿ ಕೇಂದ್ರಗಳನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಪುಷ್ಪಲತಾ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಗನವಾಡಿ ಕಾರ್ಯಕರ್ತರನ್ನು ಕಾಯಂ ಮಾಡುವಂತೆ ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ಸರ್ಕಾರಗಳು ಅಂಗನವಾಡಿ ಕಾರ್ಯಕರ್ತೆಯರ ನೆರವಿಗೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಮೇ 20ರಂದು ರಾಜ್ಯದಾದ್ಯಂತ ಅಂಗನವಾಡಿ ಕೇಂದ್ರಗಳನ್ನು ಬಂದ್ ಮಾಡಿ ಪ್ರತಿಭಟಿಸಲು ನಿರ್ಧರಿಸಲಾಗಿದೆ. ಅಂದು ಸಾಮೂಹಿಕ ಬಂಧನಕ್ಕೊಳಗಾಗುವ ಮೂಲಕ ಸರ್ಕಾರದ ಗಮನ ಸೆಳೆಯಲಾಗುವುದು. ಅಂಗನವಾಡಿ ಕಾರ್ಯಕರ್ತೆಯರು ಕಳೆದ 50 ವರ್ಷಗಳಿಂದ ದುಡಿಯುತ್ತಿದ್ದರೂ ಅಂಗನವಾಡಿ ನೌಕರರ ಹುದ್ದೆಯನ್ನು ಕಾಯಂಗೊಳಿಸಿಲ್ಲ. ಕನಿಷ್ಠ ವೇತನವನ್ನೂ ನಿಗದಿಪಡಿಸಿಲ್ಲ. ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು ಅಂಗನವಾಡಿ ನೌಕರರ ಹುದ್ದೆಯನ್ನು ಕಾಯಂಗೊಳಿಸಬೇಕು. ರೂ.26000 ಕನಿಷ್ಠ ವೇತನ, ರೂ.10000 ಮಾಸಿಕ ಪಿಂಚಣಿ ನೀಡಬೇಕು. ಐಸಿಡಿಎಸ್ ಯೋಜನೆಗೆ ಬಜೆಟ್‌ನಲ್ಲಿ ಅನುದಾನ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ ಬಂಡವಾಳಶಾಹಿಗಳಿಗೆ ಉದಾರವಾಗಿ ಸಾಲ–ಸೌಲಭ್ಯ ನೀಡುತ್ತಿದೆ. ಕಾರ್ಪೋರೇಟ್ ಕಂಪನಿಗಳ ಲಕ್ಷಾಂತರ ಕೋಟಿ ಸಾಲ ಮನ್ನಾ ಮಾಡಿದೆ. ಆದರೆ ಐಸಿಡಿಎಸ್ ಯೋಜನೆ ಅಡಿಯಲ್ಲಿ ದುಡಿಯುತ್ತಿರುವ ಅಂಗನವಾಡಿ ನೌಕರರಿಗೆ ಕನಿಷ್ಠ ವೇತನ ನೀಡಲು ಅನುದಾನ ನೀಡದೆ, ಹಣ ಬಿಡುಗಡೆ ಮಾಡದೆ ಸಂಕಷ್ಟ ತಂದೊಡ್ಡಿದೆ. ಕೇಂದ್ರ ಸರ್ಕಾರ ಇಂತಹ ದ್ವಿಮುಖ ನೀತಿಯ ವಿರುದ್ಧ ನಡೆಸುವ ಹೋರಾಟಗಳನ್ನು ಹತ್ತಿಕ್ಕುವ ಸಲುವಾಗಿ ವಿವಿಧ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲು ಮುಂದಾಗಿದೆ ಎಂದು ಆರೋಪಿಸಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಬಾಲಾಜಿರಾವ್ ಮಾತನಾಡಿ, ಮೇ 20ರಂದು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಎಲ್ಲಾ ಕಾರ್ಮಿಕ ಸಂಘಟನೆಗಳು ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಿವೆ. ಅಂದಿನ ಪ್ರತಿಭಟನೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಪಾಲ್ಗೊಳ್ಳುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಉಪಾಧ್ಯಕ್ಷೆ ಮಂಗಳಗೌರಮ್ಮ, ಖಜಾಂಚಿ ಲೀಲಾವತಿ, ಜಂಟಿ ಕಾರ್ಯದರ್ಶಿಗಳಾದ ಕಮಲಾಕ್ಷಿ, ಹೇಮಾವತಿ ಇದ್ದರು.



ಶ್ರೀಮತಿ ಮಹಾಲಕ್ಷ್ಮಿ ಮತ್ತು ಶ್ರೀ ಸೀತಾರಾಮು
ಅವರಿಗೆ
40ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು

ಶುಭಕೋರುವವರು: ಮಕ್ಕಳಾದ ಇಂದ್ರಕುಮಾರ್, ರಾಮ್‌ಪ್ರಸಾದ್, ತೇಜಸ್ವಿನಿ, ಮೊಮ್ಮಕ್ಕಳಾದ ಸಮೀಕ್ಷ, ಮನೀಷ್ಯ, ಕರಿನಿಂಗೇಗೌಡರ ಕುಟುಂಬ, ಕೂರ್ಗಳ್ಳಿ, ಮೈಸೂರು

BTL EDUCATION TRUST FOR RURAL DEVELOPMENT, Mysore
is looking for a qualified
ADMINISTRATIVE OFFICER
with an MBA, fluency in English, and a minimum of 2 years of experience in the education field.
Interested candidates may contact
82173-52321 for more details

PLYWOOD & DOORS
@ Factory Depot Rates
15 Years Replacement Guarantee
neem® BOND PLATINUM
Build Mart
9731591267 / 9901291267

ಹುಟ್ಟುಹಬ್ಬದ ಶುಭಾಶಯಗಳು

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ **ಮಹೇಶಣ್ಣ** ರವರಿಗೆ ಹುಟ್ಟುಹಬ್ಬದ ಶುಭಾಶಯಗಳು

ಶುಭಾಶಯ ಕೋರುವವರು
ಲೇಟ್ ರಾಜೇಶ್ವರಿ
ರವಿ ಕುಮಾರ್
ವಾಜಮಂಗಲ
ಚೈಲೀಮ್ ಗ್ರೂಪ್

SSLC ಫೇಲಾದವರಿಗೆ ವಿಶೇಷ ಪರೀಕ್ಷಾ ತರಬೇತಿ
ಸೋಲು ಶಾಶ್ವತವಲ್ಲ, ಸೋತವನೂ ಗೆಲ್ಲಬಲ್ಲ
with 100% ಯಶಸ್ಸು ಅಥವಾ ಹಣ ವಾಪಸ್ಸು
S.S.BHAT (We care so we dare) KORANI
by **PRERANA ACADEMY**
ಬ್ರಾಂಚ್ 1 : ಬೋಗಾದಿ, ಶಬ್ಬೀರ ವಿದ್ಯಾಲಯ ಡಿಗ್ರಿ ಕಾಲೇಜು ಎದುರು
8088015075, 9845081342
ಬ್ರಾಂಚ್ 2 : # 3, ಸಿದ್ಧಾರ್ಥನಗರ, ಗಣಪತಿ ಸಂಘದ
9019661234, 9243451234

ಗೋಪಾಲಗೌಡ ಆಸ್ಪತ್ರೆ ಕ್ಯಾಂಟೀನ್
ನಿರ್ಮಲ ಆಸ್ಪತ್ರೆ ಕ್ಯಾಂಟೀನ್

1. ಸಸ್ಯಹಾರಿ ಭಟ್ಟರು ಬೇಕಾಗಿದ್ದಾರೆ ವೇತನ: 22000 ರೂ.ಗಳು ಊಟ, ತಿಂಡಿ ವಸತಿ ಸೌಲಭ್ಯವಿರುತ್ತದೆ.
2. ಫುಡ್ ಡೆಲಿವರಿ ಮಾಡಲು ಹುಡುಗ ಅಥವ ಹುಡುಗಿ ಬೇಕಾಗಿದ್ದಾರೆ. 11 ಸಾವಿರ ರೂಗಳು ವೇತನ, ಊಟ ವಸತಿಯೊಂದಿಗೆ. ಸಂಪರ್ಕಿಸಿ

9663150577 | 7022941158

ಕಳೆದಿದೆ
ಉಷಾರಾಣಿ, #273, EWS, 8ನೇ ಕ್ರಾಸ್, ಗಂಗೋತ್ರಿ ಲೇಔಟ್, ಮೈಸೂರು, ಈ ಮೇಲ್ಕಂಡ ಸ್ವತ್ತು ಉಷಾರಾಣಿಯವರ ಸ್ವಯಾರ್ಜಿತ ಸ್ವತ್ತಾಗಿದ್ದು, ಸದರಿ ಸ್ವತ್ತಿನ ಮಂಜೂರಾತಿ ಪತ್ರ, ಖಾತೆ ಕಂದಾಯ ಪತ್ರ, ಸ್ವಾಧೀನ ಪತ್ರದ ಮೂಲ ದಾಖಲಾತಿಗಳು ದಿನಾಂಕ 26-04-2025 ರಂದು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9880609759

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ



ರತ್ನ ಪ್ಯಾರ ಮೆಡಿಕಲ್ ಕಾಲೇಜು
ಕುವೆಂಪುನಗರ, ಮೈಸೂರು

ADMISSION OPEN
- Bachelor's in Medical Lab technology
- Bachelor's in cardiac care Technology, OT, Dialysis & X-Ray
- Diploma in Medical Lab Technology
- B.Com (Digital Marketing)
- Direct PUC (Science, Commerce & Arts)

SSLC/PUC Pass/Fail
9886654463

ಶ್ರದ್ಧಾಂಜಲಿ



ಶ್ರೀ.ಎಂ.ಎನ್ ವೆಂಕಟಸುಬ್ಬು
ನಿವೃತ್ತ ಶಿಕ್ಷಕರು, ಶಾರದಾ ವಿಲಾಸ ಪ್ರೌಢಶಾಲೆ, ಮೈಸೂರು ಇವರು ದಿನಾಂಕ: 05.05.2025 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ
ದುಃಖತಪ್ತರು: ಮಕ್ಕಳು ಶರತ್‌ಚಂದ್ರ .ಎಂ.ವಿ, ಅನೂಪ್.ಎಂ.ವಿ ಮತ್ತು ಕುಟುಂಬವರ್ಗದವರು

Aquaguard & Kent Water Purifier
Sales & Service
9901200444
#319, Near Mega Medical Store, Kuvempunagar

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

WANTED
SALES MEN & WOMEN for a Readymade Garments Store (Freshers / Experienced)
URBAN TOUCH
55/1 & 55/2, Opposite Loyal world, Akka Mahadevi Road, Industrial Suburb, Vidyaranyapuram, Mysore
Call: 90356 69913

WANTED DRIVERS
with Heavy Vehicle Licence for a reputed CBSE School in Mysore.
Call :
99450 38026
94498 09181

CHANGE OF NAME
I, MANJUSHREE SATHISH W/o Mr.Navaneeth R.V., residing at Door No.846/1, 11th Cross, Ramanuja Road, Agrahara, Mysore-570004, have changed my name from "MANJUSHREE SATHISH" to "MANJUSHREE SATISH" before Sri.Shivakumar, Advocate & Notary, Mysore. Vide Affidavit Dated: 02.05.2025.
Sd/-MANJUSHREE SATISH

ಪ್ರಥಮ ವರ್ಷದ ಸವಿನೆನಪು



ಶ್ರೀಮತಿ ಹೇಮವತಿ ಕೆ.ಎನ್. (ಅಮ್ಮ)
ಜನನ : 19-04-1957 ನಿಧನ : 06-05-2024
ನಿಮ್ಮ ಅಗಲಿಕೆ ನಮ್ಮನ್ನೆಲ್ಲ ಶಾಶ್ವತ ನೋವನ್ನು ತಂದಿದೆ ಸದಾ ನಿಮ್ಮ ನೆನಪಿನಲ್ಲೇ ಜೀವನ ಸಾಗಿಸುತ್ತಿದ್ದೇವೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಇಂತಿ ದುಃಖತಪ್ತರು : ಶ್ರೀಮತಿ ಶಶಿಕಲಾ ಮಹೇಶ್
ಶ್ರೀಮತಿ ತುಳಸಿ ಲೇ ಆನಂದ್, ಶ್ರೀಮತಿ ಪ್ರೀತಾ ರಾಘು, ಶ್ರೀಮತಿ ರಮ್ಯಶ್ರೀ ಬಾಬು ಮೊಮ್ಮಕ್ಕಳಾದ ಮಧು, ಭುವನ್, ರೋಹಿತ್, ನಿಶಿಕಾ ಚಾರ್ವಿ, ರೀತಾನ್ಯ ಹಿತಾ, ವಂಶಿಕಾ ಸಾನ್ವಿ, ಹಿತನ ಹಾಗೂ ಕುಟುಂಬ ವರ್ಗದವರು

ವೈಕುಂಠ ಸಮಾರಾಧನೆ



ಶ್ರೀ ಆರ್.ರಮೇಶ್ ಬಾಬು (ಕಣ್ಣ)
ಇವರು ದಿನಾಂಕ 26.04.25 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಕಾರ್ಯವನ್ನು ದಿನಾಂಕ 06.05.25ರಂದು ನಮ್ಮ ಸ್ವಗೃಹ # 47, 1ನೇ ಕ್ರಾಸ್, 2ನೇ ಮೇನ್, ವಿದ್ಯಾರಣ್ಯಪುರಂ, ಮೈಸೂರು. ಇಲ್ಲಿ ಏರ್ಪಡಿಸಿರುವುದರಿಂದ ಆಮಂತ್ರಣ ತಲುಪದೆ ಇದ್ದವರು ಇದನ್ನೇ ಆಮಂತ್ರಣವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ
ದುಃಖತಪ್ತರು: ಪತ್ನಿಯವರಾದ ಲತಾ ಮಣಿ ಹಾಗೂ ಕುಟುಂಬವರ್ಗದವರು. ಮೊ.9480042244

ಮೈ ರಿಯಲ್ಟಿ 2025 Organized by CREDAI **MY REALTY 2025**
ಮೈಸೂರಿನ ಅತಿ ದೊಡ್ಡ ಪ್ರಾಪರ್ಟಿ ಎಕ್ಸ್‌ಪೋ
VILLAS | PLOTS | APARTMENTS
Mysuru's Biggest Property Expo
9th to 12th May 2025
Venue: Scouts & Guides Ground, Mysuru
PLATINUM SPONSOR
BRIGADE | NANDANE | PARAMOUNT | SHIVA | G SQUARE | HORIZON ESTATES
GOLD SPONSOR
EAGLEBURG | ceyone
SILVER SPONSOR
LISHITHA | HASIRU GROUP | BASAVESHWARA
FOR MORE DETAILS CONTACT:
K.C. Nanda Kumar - Chairman 99458 09000
Akshay Kumar - Secretary 99451 71737

ಸಾರ್ವಜನಿಕರಿಗೆ ಆಹ್ವಾನ
CIPET
OPEN HOUSE INVITATION
FREE ENTRY | ಉಚಿತ ಪ್ರವೇಶ
9th to 11th May 2025
Visiting Hours: 10 AM to 6 PM
CIPET Invites Parents & Students of SSLC, PUC, ITI, to attend Open House
TRANSFORM YOUR FUTURE EDUCATION & CAREER
Venue:
CENTRAL INSTITUTE OF PETROCHEMICALS ENGINEERING & TECHNOLOGY
Centre for Skilling and Technical Support (CSTS)
(Dept. of Chemicals & Petrochemicals, Ministry of Chemicals & Fertilizers, Govt. of India)
No. 437/A, Hebbal Industrial Area, Mysuru - 570 016.
Write to us: mysore@cipet.gov.in Web: www.cipet.gov.in
Reach us: 948025 3024 / 97496 61667

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ಸಿಟಿ – 570 017, ವಿಜಯನಗರ, 3ನೇ ಹಂತ, 'ಬಿ' ಬ್ಲಾಕ್, 16ನೇ ಅಡ್ಡ ರಸ್ತೆ, ಮನೆ ನಂ. 51 ರಲ್ಲಿ ವಾಸವಾಗಿರುವ ಶ್ರೀ ವೀರಬ್ರಹ್ಮಮ್. ಬಿ ರವರ ಮಗನಾದ ಶ್ರೀ. ಅಜಯ್ ಕುಮಾರ್. ಬಿ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ವಿಜಯನಗರ ಬಡಾವಣೆ 3ನೇ ಹಂತದಲ್ಲಿರುವ ಸ್ವತ್ತಿನ ಸಂಖ್ಯೆ 51 ಬಿ ಬ್ಲಾಕ್, ಪಿ.ಐ.ಡಿ. ನಂ. 190784, ಮೈಸೂರು ಮಹಾನಗರ ಪಾಲಿಕೆಯಿಂದ ನೀಡಿರುವ ನಮೂನೆ-2 (ನಿಯಮ 20) ರ ಪ್ರಕಾರ ಸ್ವತ್ತಿನ ಸಂಖ್ಯೆ 19-1-1-51 ನ್ನು ಹೊಂದಿರುವ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 18.00 ಮೀಟರ್ ಮತ್ತು ದಕ್ಷಿಣೋತ್ತರ 12.00 ಮೀಟರ್. ಒಟ್ಟು ವಿಸ್ತೀರ್ಣ 216.00 ಚದರ ಮೀಟರ್ ಹಾಗೂ ಸದರಿ ನಿವೇಶನದಲ್ಲಿ ಕಟ್ಟಿರುವ ವಸತಿ ಕಟ್ಟಡ ಮತ್ತು ಈ ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ಸ್ವತ್ತಿನ ನಂ. 14 ; ಉತ್ತರಕ್ಕೆ: ಸ್ವತ್ತಿನ ನಂ. 50 ; ದಕ್ಷಿಣಕ್ಕೆ: ಸ್ವತ್ತಿನ ನಂ. 52.

ಸಹಿ/- ಕೆ.ಎನ್. ಮಹಾದೇವಸ್ವಾಮಿ,
ಬಿ.ಎಸ್.ಸಿ., ಎಲ್.ಎಲ್.ಬಿ, ವಕೀಲರು ಮತ್ತು ನೋಟರಿ, ರೂಂ ನಂ. 1 & 2, ಒಂದನೇ ಮಹಡಿ, ಅಲ್ಲಮ್ಮ ಪ್ರಭು ಕೃಪ ಕಮರ್ಷಿಯಲ್ ಕಾಂಪ್ಲೆಕ್ಸ್, 5ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು-570004, ಮೊ: 9448222522,
ಕಛೇರಿ ಸಂಖ್ಯೆ: 0821-4287998

ದಿನಾಂಕ: 22-04-2025